JJSO

(B) 025238

ಕರ್ನಾಟಕ ಸರ್ಕಾರ

ಕರ್ನಾಟಕ ವಿಧಾನ ಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ಹನ್ನೊಂದನೆಯ ವಿಧಾನ ಸಭೆಯ ಏಳನೇ ಅಧಿವೇಶನ

SEVENTH SESSION OF THE ELEVENTH LEGISLATIVE ASSEMBLY

ಸಂಪುಟ – 2 (ಕ್ರಮಾಂಕ 1 ರಿಂದ 3) **Volume - II (No 1 to 3)**

ಭಾಗ– II **Part II**

(12ನೇ ಜನವರಿ 2004, 13ನೇ ಜನವರಿ 2004 ಮತ್ತು 14ನೇ ಜನವರಿ 2004)

(12th January 2004, 13th January 2004 and 14th January 2004)



ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

(B) 025238

ಕರ್ನಾಟಕ ವಿಧಾನ ಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ಹನ್ನೊಂದನೆಯ ವಿಧಾನ ಸಭೆಯ ಏಳನೇ ಅಧಿವೇಶನ
SEVENTH SESSION OF THE ELEVENTH LEGISLATIVE ASSEMBLY

ಸಂಪುಟ – 2 (ಕ್ರಮಾಂಕ 1 ರಿಂದ 3) **Volume - II (No 1 to 3)**

ಭಾಗ–II **Part-II**

(12ನೇ ಜನವರಿ 2004, 13ನೇ ಜನವರಿ 2004 ಮತ್ತು 14ನೇ ಜನವರಿ 2004)
(12th January 2004, 13th January 2004 and 14th January 2004)

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆ

ಅಧ್ಯಕ್ಷರು

ಶ್ರೀ ಎಂ ವಿ ವೆಂಕಟಪ್ಪನವರು

ಉಪಾಧ್ಯಕ್ಷರು

ಶ್ರೀ ಮನೋಹರ್ ಹೆಚ್ ತಹಸೀಲ್ದಾರ್

ಕಾರ್ಯದರ್ಶಿ

ಶ್ರೀ ಟಿ ರಾಜಣ್ಣ

ವಿಷಯಾನುಕ್ರಮಣಿಕೆ

ಭಾಗ–I

ಸಂಪುಟ–2 (ಕ್ರಮಾಂಕ 1 ರಿಂದ 3)

(12ನೇ ಜನವರಿ 2004, 13ನೇ ಜನವರಿ 2004 ಮತ್ತು 14ನೇ ಜನವರಿ 2004)

ಸೋಮವಾರ, 12ನೇ ಜನವರಿ 2004

1) ಅಧ್ಯಕ್ಷರ ಅಪ್ಪಣೆಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು 1–3

1) ಬರ ಪರಿಸ್ಥಿತಿ ಬಗ್ಗೆ ಚರ್ಚಿಸಲು ಅವಕಾಶ ಕೋರಿಕೆ

ಶ್ರೀ ಎನ್ ಸಂಪಂಗಿ

2) ದಿನಾಂಕ 08-01-2004 ರಂದು ಛಾಪ ಕಾಗದದ ಹಗರಣದ ಚರ್ಚೆಯ ಬಗ್ಗೆ ಸರ್ಕಾರ ನೀಡಿರುವ ಉತ್ತರವನ್ನು ವಿರೋಧಿಸಿ ಬಿ ಜೆ ಪಿ ಸದಸ್ಯರಿಂದ ಮುಂದುವರಿದ ಧರಣಿ 3–14

ಶ್ರೀ ಜಗದೀಶ್ ಶೆಟ್ಟರ್

(ವಿರೋಧ ಪಕ್ಷದ ನಾಯಕರು)

ಶ್ರೀ ಎನ್ ಸಂಪಂಗಿ

ಶ್ರೀ ಬಿ ಎನ್ ಬಚ್ಚೇಗೌಡ

ಶ್ರೀ ಮಲ್ಲಿಕಾರ್ಜುನ ಖರ್ಗೆ

(ಗೃಹ ಸಚಿವರು)

ಶ್ರೀ ಬಿ ಸೋಮಶೇಖರ್

ಶ್ರೀ ಎಸ್ ಎಸ್ ಪಾಟೀಲ್

3) ಪ್ರಕಟಣೆ 15

ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆ ರವರು ನಿಧನ ಹೊಂದಿದ ಬಗ್ಗೆ

ಮಂಗಳವಾರ, 13ನೇ ಜನವರಿ 2004

1) ಸಂತಾಪ ಸೂಚನೆ 16–50

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆ ಅವರ ನಿಧನ ಕುರಿತು

ಶ್ರೀ ಎಸ್ ಎಂ ಕೃಷ್ಣ

(ಮುಖ್ಯ ಮಂತ್ರಿಗಳು)

ಶ್ರೀ ಜಗದೀಶ್ ಶೆಟ್ಟರ್

(ವಿರೋಧ ಪಕ್ಷದ ನಾಯಕರು)

ಶ್ರೀ ಬಿ ಸೋಮಶೇಖರ್

ಶ್ರೀ ಪಿ ಜಿ ಆರ್ ಸಿಂಧ್ಯಾ

ಶ್ರೀ ಆರ್ ವಿ ದೇಶಪಾಂಡೆ
(ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)
ಶ್ರೀ ಡಿ ಬಿ ಚಂದ್ರೇಗೌಡ
(ಕಾನೂನು ಸಚಿವರು)
ಶ್ರೀ ಎಂ ವೈ ಘೋರ್ಪಡೆ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
ಶ್ರೀ ಡಿ ಕೆ ಶಿವಕುಮಾರ್
ಶ್ರೀ ಸಿ ಚನ್ನಿಗಪ್ಪ
ಶ್ರೀ ಕೆ ಶ್ರೀನಿವಾಸಗೌಡ ಕುದುವನಹಳ್ಳಿ
ಶ್ರೀ ಕೆ ಎಂ ಕೃಷ್ಣಮೂರ್ತಿ
ಶ್ರೀ ಚಂದ್ರಕಾಂತ್ ಜಿ ಬೆಲ್ಲದ್
ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ

ಬುಧವಾರ, 14ನೇ ಜನವರಿ 2004 (ಭಾಗ–1)

1) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ 51–65

ವಿಷಯ ಸದನದ ಕಾರ್ಯಕಲಾಪಗಳು ಸರಿಯಾಗಿ ನಡೆಯದೆ ವೇಳೆ ವ್ಯಯವಾಗುತ್ತಿರುವ ಬಗ್ಗೆ

ಶ್ರೀ ಎನ್ ಸಂಪಗಿ
ಶ್ರೀ ಕೆ ಎಂ ಕೃಷ್ಣಮೂರ್ತಿ
ಶ್ರೀ ಬಿ ಸೋಮಶೇಖರ್
ಶ್ರೀ ಕೆ ಜಯ ಪ್ರಕಾಶ್ ಹೆಗಡೆ
ಶ್ರೀ ಬಿ ಬಿ ಶಿವಪ್ಪ
ಶ್ರೀ ಜಗದೀಶ್ ಶೆಟ್ಟರ್
(ವಿರೋಧ ಪಕ್ಷದ ನಾಯಕರು)
ಶ್ರೀ ಡಿ ಬಿ ಚಂದ್ರೇಗೌಡ
(ಕಾನೂನು ಸಚಿವರು)

2) ಶಾಸನ ರಚನೆ 65–68

ಅ) ವಿಧೇಯಕಗಳ ಮಂಡನೆಗೆ ಅನುಮತಿ ಕೋರಿಕೆ

1) ಕರ್ನಾಟಕ ಮೋಟಾರು ವಾಹನ ತೆರಿಗೆ ತಿದ್ದುಪಡಿ ವಿಧೇಯಕ, 2004 (ಅನುಬಂಧ–I)

ಶ್ರೀ ಬಿ ರಮಾನಾಥ ರೈ
(ಸಾರಿಗೆ ಸಚಿವರು)

2) ಕರ್ನಾಟಕ ಲಾಟರಿಗಳ ಮೇಲೆ ತೆರಿಗೆ ವಿಧೇಯಕ 2004 (ಅನುಬಂಧ–II)

ಶ್ರೀ ಡಿ ಬಿ ಚಂದ್ರೇಗೌಡ

(ಕಾನೂನು ಸಚಿವರು)

3) ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ) (ತಿದ್ದುಪಡಿ) ವಿಧೇಯಕ, 2004 (ಅನುಬಂಧ–III)

ಶ್ರೀ ಡಿ ಬಿ ಚಂದ್ರೇಗೌಡ (ಕಾನೂನು ಸಚಿವರು)

4) ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2004 (ಅನುಬಂಧ–IV)

ಶ್ರೀ ಡಿ ಬಿ ಚಂದ್ರೇಗೌಡ

(ಕಾನೂನು ಸಚಿವರು)

(ಮಂಡಿಸಲಾಯಿತು)

ಆ) ಪರ್ಯಾಲೋಚನ ಪ್ರಸ್ತಾವ

1) ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2004

ಶ್ರೀ ಬಿ ರಮಾನಾಥ ರೈ

(ಸಾರಿಗೆ ಸಚಿವರು)

ಮುಂದೂಡಲಾಯಿತು

3) ಅಧ್ಯಕ್ಷರ ತೀರ್ಪು 68–71

ನಡವಳಿಕೆ ನಿಯಮ 347ನೇ ವಿಧಿಯ ಪ್ರಕಾರ ಒಂದು ದಿನದ ಮಟ್ಟಿಗೆ ಬಿ ಜೆ ಪಿ ಸದಸ್ಯರನ್ನು ಸದನದಿಂದ ಹೊರಗೆ ಕಳುಹಿಸಲು ಆದೇಶ

ಶ್ರೀ ಡಿ ಬಿ ಚಂದ್ರೇಗೌಡ

(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಶ್ರೀ ಬಿ ಸೋಮಶೇಖರ್

ಶ್ರೀ ಕೆ ಜಯಪ್ರಕಾಶ್ ಹೆಗಡೆ

4) ಅಧ್ಯಕ್ಷರ ಅಪ್ಪಣೆ ಮೇರೆಗೆ 71–74

ವಿಷಯ ಸದನದ ಅವಧಿಯನ್ನು ವಿಸ್ತರಿಸುವ ಬಗ್ಗೆ

ಶ್ರೀ ಕೆ ಜಯಪ್ರಕಾಶ್ ಹೆಗಡೆ

ಶ್ರೀ ಬಿ ಸೋಮಶೇಖರ್

ಶ್ರೀ ಡಿ ಬಿ ಚಂದ್ರೇಗೌಡ

(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಶ್ರೀ ಎಸ್ ಎಸ್ ಪಾಟೀಲ್

5) ಪ್ರಶ್ನೋತ್ತರಗಳು 74–76

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

6) ಅಧ್ಯಕ್ಷರ ತೀರ್ಪು 76–85

ಸದನದ ನಡವಳಿಕೆ 347ನೇ ವಿಧಿ ಪ್ರಕಾರ ಕೆಲವು ಬಿ ಜೆ ಪಿ ಸದಸ್ಯರನ್ನು ಹೊರ ಹಾಕುವ ಬಗ್ಗೆ

7) ಪ್ರಶ್ನೋತ್ತರಗಳು (ಮುಂದು) 85

ಅ) ದಿನದ ಪಟ್ಟಿಯಲ್ಲಿ ಸೇರಿಸಲಾದ ಚುಕ್ಕೆ ಗುರುತಿನ ಪ್ರಶ್ನೋತ್ತರಗಳು (ಅನುಬಂಧ–VI)

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು (ಅನುಬಂಧ–VII)

8) ಪ್ರಕಟಣೆ 85

ಅ) ದಿನಾಂಕ 6 1 2004, 7 1 2004 ಮತ್ತು 8 1 2004 ಚುಕ್ಕೆ ಗುರುತಿನ ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು (ಅನುಬಂಧ–VIII)

ಆ) ದಿನಾಂಕ 9 1 2004, 12 1 204 ಮತ್ತು 13 1 2004ರ ಚುಕ್ಕೆ ಗುರುತಿನ ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು (ಅನುಬಂಧ–IX)

9) ಸಭೆಯ ಮುಂದಿಡಲಾದ ಕಾಗದ ಪತ್ರಗಳು 86–101

10) ವರದಿಗಳನ್ನೋಪ್ಪಿಸುವುದು 101

11) ಚುನಾವಣಾ ಪ್ರಸ್ತಾವ 101

12) ಅಧ್ಯಕ್ಷರ ಅಪ್ಪಣೆ ಮೇರೆಗೆ 101–102

ಅ) ರಾಜ್ಯದಲ್ಲಿ ಬರಗಾಲದ ಪರಿಸ್ಥಿತಿ ಕುಡಿಯುವ ನೀರಿನ ಅಭಾವ, ವಿದ್ಯುಚ್ಛಕ್ತಿ ಕೊರತೆ ಇತ್ಯಾದಿ ಬಗ್ಗೆ ಚರ್ಚಿಸಲು ಅನುಮತಿ ಕೋರಿಕೆ

ಶ್ರೀ ಬಿ ಸೋಮಶೇಖರ್

13) ಗಮನ ಸೆಳೆಯುವ ಸೂಚನೆ 102–104

ಅ) ಕಡೂರಿನಲ್ಲಿ ಬರಗಾಲ ಪರಿಸ್ಥಿತಿಯಿಂದ ದನಕರುಗಳಿಗೆ ಮೇವಿನ ತೊಂದರೆ

ಶ್ರೀ ಕೆ ಎಂ ಕೃಷ್ಣಮೂರ್ತಿ

ಶ್ರೀ ಎಂ ಮಲ್ಲಿಕಾರ್ಜುನ ನಾಗಪ್ಪ

(ಕಂದಾಯ ರಾಜ್ಯ ಸಚಿವರು)

14) ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆ 104–148

ಶ್ರೀ ಎಸ್ ಪಿ ಮುದ್ದಹನುಮೇಗೌಡ

ಶ್ರೀ ಎಸ್ ಎಸ್ ಪಾಟೀಲ್

15) ಶಾಸನ ರಚನೆ

ಅ) ವಿಧೇಯಕ ಮಂಡನೆ ಹಾಗೂ ಪ್ರಸ್ತಾವ 148–150

1) ಕರ್ನಾಟಕ ಮಾರಾಟ ತೆರಿಗೆ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕ 2004 (ಅನುಬಂಧ–V)

ಶ್ರೀ ಎಸ್ ಎಂ ಕೃಷ್ಣ

(ಮುಖ್ಯ ಮಂತ್ರಿಗಳು)

ಆ) ಪರ್ಯಾಲೋಚನೆ ಪ್ರಸ್ತಾವ

(ಅಂಗೀಕರಿಸಲಾಯಿತು)

16 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ 150–151

ಸದನದ ಅವಧಿಯನ್ನು ವಿಸ್ತರಿಸುವ ಬಗ್ಗೆ

ಶ್ರೀ ಬಿ ಸೋಮಶೇಖರ್

ಶ್ರೀ ಎಸ್ ಎಂ ಕೃಷ್ಣ

(ಮುಖ್ಯ ಮಂತ್ರಿಗಳು)

17 ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2004 151–157

(ಮುಂದು)

(ಅಂಗೀಕರಿಸಲಾಯಿತು)

ಅ) ಕರ್ನಾಟಕ ಲಾಟರಿಗಳ ಮೇಲೆ ತೆರಿಗೆ ವಿಧೇಯಕ, 2004.

ಶ್ರೀ ಎಸ್ ಕೃಷ್ಣ

(ಮುಖ್ಯ ಮಂತ್ರಿಗಳು)

ಶ್ರೀ ಬಿ ಸೋಮಶೇಖರ್

(ಅಂಗೀಕರಿಸಲಾಯಿತು)

ಆ) ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ) (ತಿದ್ದುಪಡಿ) ವಿಧೇಯಕ, 2004

ಶ್ರೀ ಬಸವರಾಜ್ ಹೆಚ್ ಪಾಟೀಲ್

(ಇಂಧನ ರಾಜ್ಯ ಸಚಿವರು)

(ಅಂಗೀಕರಿಸಲಾಯಿತು)

ಇ) ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2004

ಶ್ರೀ ಎಸ್ ಎಂ ಕೃಷ್ಣ

(ಮುಖ್ಯ ಮಂತ್ರಿಗಳು)

(ಅಂಗೀಕರಿಸಲಾಯಿತು)

18 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ 157–164
ಸದನದ ಅವಧಿಯನ್ನು ವಿಸ್ತರಿಸುವ ಬಗ್ಗೆ
ಶ್ರೀ ಕೆ ಶ್ರೀನಿವಾಸ ಗೌಡ ಕುದುವನಹಳ್ಳಿ
ಶ್ರೀ ಸಿ ಎಸ್ ನಾಡಗೌಡ
ಶ್ರೀ ಕೆ ಬಿ ಮಲ್ಲಿಕಾರ್ಜುನ್
ಶ್ರೀ ಬಿ ಸೋಮಶೇಖರ್
ಶ್ರೀ ಡಿ ಬಿ ಚಂದ್ರೇಗೌಡ
(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)
ಶ್ರೀ ಎಸ್ ಎಂ ಕೃಷ್ಣ
(ಮುಖ್ಯ ಮಂತ್ರಿಗಳು)
(ಸದನವನ್ನು ಒಂದು ದಿನದ ಮಟ್ಟಿಗೆ ವಿಸ್ತರಿಸಲು ತೀರ್ಮಾನಿಸಲಾಯಿತು)
19 ಅನುಬಂಧ – 123456789 165–413

ಭಾಗ–2

ಬುಧವಾರ 14ನೇ ಜನವರಿ 2004

1 ದಿನಾಂಕ 6 1 2004ರ ಚುಕ್ಕೆಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರ 414–503
2 ದಿನಾಂಕ 7 1 2004ರ ಚುಕ್ಕೆಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರ 503–612
3 ದಿನಾಂಕ 8 1 2004ರ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರ 612–824

ಭಾಗ–3

ಬುಧವಾರ 14ನೇ ಜನವರಿ 2004 (ಅನುಬಂಧ 8)

1 ದಿನಾಂಕ 9 1 2004 ರ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರ 825–1016
2. ದಿನಾಂಕ 12 1 2004 ರ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರ 1016–1166
3 ದಿನಾಂಕ 13 1 2004 ರ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರ 1166–1292

ಅನುಬಂಧ – VIII

ಭಾಗ – II

ದಿನಾಂಕ 6 1 2004ರ ಚುಕ್ಕೆ ಗುರುತಿನ ಪ್ರಶ್ನೋತ್ತರ

ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ

01 (279) ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ ಧಾರವಾಡ ಮಹಾನಗರಕ್ಕೆ ಹಾಲಿ ಎಷ್ಟು ದಿನಕ್ಕೆ ಒಮ್ಮೆ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ

ಆ) ಕುಡಿಯುವ ನೀರಿನ ಸಮಸ್ಯೆ ದಿನೇ ದಿನೇ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಇ) ಬಂದಿದ್ದಲ್ಲಿ ಸರ್ಕಾರ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಏನು ಕ್ರಮ ಕೈಗೊಂಡಿದೆ

ಈ) ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಒಳಚರಂಡಿ ವ್ಯವಸ್ಥೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಸ್ ಎಂ ಕೃಷ್ಣ (ಮುಖ್ಯಮಂತ್ರಿಯವರು)

ಅ) ಹುಬ್ಬಳ್ಳಿ ಧಾರವಾಡ ಮಹಾನಗರಕ್ಕೆ ಹಾಲಿ 7 ದಿನಗಳಿಗೆ ಒಮ್ಮೆ ಮಲಪ್ರಭಾ ನದಿಯಿಂದ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ

ಆ) ಅವಳಿ ನಗರಕ್ಕೆ 2 ಮುಖ್ಯ ನೀರಿನ ಮೂಲಗಳಲ್ಲಿ ಒಂದಾದ ನೀರಸಾಗರ ಜಲಾಶಯವು ಸತತ ಮೂರು ವರ್ಷಗಳ ಬರಗಾಲದಿಂದಾಗಿ ಪೂರ್ಣವಾಗಿ ಬತ್ತಿ ಹೋಗಿರುವುದರಿಂದ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದು

ಇ) 1) ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಮಲಪ್ರಭಾ ಜಲಾಶಯದಲ್ಲಿ ಸಾಕಷ್ಟು (2 80 TMC ft) ನೀರಿನ ಸಂಗ್ರಹವನ್ನು ಕಾದಿರಿಸಲಾಗಿದೆ

2) ಬರಪರಿಹಾರ ಕಾರ್ಯಕ್ರಮದ ಅಡಿಯಲ್ಲಿ ವಿತರಣಾ ವ್ಯವಸ್ಥೆಯಲ್ಲಿ ಸುಧಾರಣೆಗೆ ಈಗಾಗಲೇ ರೂ 21 50 ಲಕ್ಷಗಳ ವೆಚ್ಚದ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ಮತ್ತು 39 10 ಲಕ್ಷ ರೂ ಗಳ ಅಂದಾಜು ವೆಚ್ಚದಲ್ಲಿ ಮುಖ್ಯ ಪೂರಕ ಕೊಳವೆಗಳ ಹಾಗು ಇತರೇ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ

3) ಹುಬ್ಬಳ್ಳಿ ಧಾರವಾಡ ತುರ್ತು ನೀರು ಸರಬರಾಜು ಯೋಜನೆಯನ್ನು ಮಾರ್ಚ್ 2004 ಅಂತ್ಯದೊಳಗೆ ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳಲಾಗಿದೆ

4) ಅಮ್ಮಿನಭಾವಿಯಿಂದ ಹುಬ್ಬಳ್ಳಿಗೆ ನೇರವಾಗಿ ನೀರು ಸರಬರಾಜು ಮಾಡಲು ಕೊಳವೆ ಮಾರ್ಗ ಅಳವಡಿಕೆ ಯೋಜನೆಯನ್ನು ವಿಶ್ವ ಬ್ಯಾಂಕ್ ಸಹಾಯದೊಂದಿಗೆ (KUWASSIP) ವ ಯೋಜನೆಯಲ್ಲಿ ರೂ 3852 00 ಲಕ್ಷಗಳ ಯೋಜನೆ ಶೀಘ್ರ ಕೈಗೆತ್ತಿಕೊಳ್ಳಲಾಗುವುದು

5) ಹುಬ್ಬಳ್ಳಿ ಧಾರವಾಡ ನಗರಕ್ಕೆ ಮಲಪ್ರಭಾ ಜಲಾಶಯದಿಂದ ನೀರೊದಗಿಸುವ 3ನೇ ಹಂತದ ರೂ 144 00 ಕೋಟಿಗಳ ಯೋಜನೆ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಪರಿಶೀಲನೆಯಲ್ಲಿದೆ

4) ಹುಬ್ಬಳ್ಳಿ ಧಾರವಾಡ ಅವಳಿ ನಗರದ ಸುತ್ತ ಮುತ್ತಲೂ ಬೆಳೆದಿರುವ ಹೊಸ ಬಡಾವಣೆಗಳನ್ನು ಗಮನಕ್ಕೆ ತೆಗೆದುಕೊಂಡು ವಿವರವಾದ ಅಂದಾಜನ್ನು ತಯಾರಿಸಲು ಸರ್ವೆ ಕಾರ್ಯಕ್ಕೆ ಗುತ್ತಿಗೆ ಕರೆಯಲಾಗಿದ್ದು, ಗುತ್ತಿಗೆ ನಿಗದಿಪಡಿಸುವ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ ಶೀಘ್ರವೇ ಯೋಜನೆ ಅಂದಾಜನ್ನು ತಯಾರಿಸಲು ಕ್ರಮ ಜರುಗಿಸಲಾಗಿದೆ

ಚಿಂತಾಮಣಿ ನಗರಸಭಾ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಅಭಾವದ ಬಗ್ಗೆ

02 (113) ಶ್ರೀ ಚೌಡಾರೆಡ್ಡಿ (ಚಿಂತಾಮಣಿ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂತಾಮಣಿ ನಗರಸಭೆಯ ವ್ಯಾಪ್ತಿಯಲ್ಲಿರುವ ಸಾರ್ವಜನಿಕರಿಗೆ ಕುಡಿಯುವ ನೀರಿಗಾಗಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಇದರಲ್ಲಿ ಎಷ್ಟು ಕೊಳವೆ ಬಾವಿಗಳಲ್ಲಿ ನೀರು ಸಿಗುತ್ತಿದೆ

ಆ) ಅನೇಕ ಬಡ ಜನರಿರುವ ಕಾಲೋನಿಗಳಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆ ಆಗಿದ್ದು, ಮತ್ತು ಸರ್ಕಾರಿ ಬಾಲಕರ ಮತ್ತು ಬಾಲಕಿಯರ ಕಾಲೇಜುಗಳಲ್ಲಿ ನೀರಿನ ಕೊರತೆ ಜಾಸ್ತಿ ಇದ್ದು, ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ನೀರಿನ ಅಭಾವ ನೀಗಿಸಲು ಸರ್ಕಾರ ಅತೀ ಜರೂರಾಗಿ ಕ್ರಮ ತೆಗೆದುಕೊಂಡು ಸಾರ್ವಜನಿಕರ ಮತ್ತು ವಿದ್ಯಾರ್ಥಿಗಳ ತೊಂದರೆ ನಿವಾರಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆಯೇ?

ಶ್ರೀ ಡಿ ಕೆ ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

ಅ) ಚಿಂತಾಮಣಿ ನಗರದಲ್ಲಿ ಒಟ್ಟು 98 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಇದರಲ್ಲಿ 73 ಕೊಳವೆ ಬಾವಿಗಳಲ್ಲಿ ನೀರು ಸಿಗುತ್ತಿದೆ

ಆ) ಹೌದು

ಇ) ನೀರಿನ ಅಭಾವ ನೀಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅನಧಿಕೃತ ಪಂಪ್ ಸೆಟ್ಟುಗಳ ಬಗ್ಗೆ

03 (307) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಅನಧಿಕೃತ ಪಂಪ್ ಸೆಟ್‌ಗಳು ಕಾರ್ಯನಿರ್ವಹಿಸುತ್ತಿವೆ.

ಆ) ಕಳೆದ 1 ವರ್ಷದಿಂದ ಪಂಪ್‌ಸೆಟ್‌ಗಳ ಅಕ್ರಮ ಸಂಪರ್ಕವನ್ನು ಸಕ್ರಮಗೊಳಿಸಲು ಎಷ್ಟು ಅರ್ಜಿಗಳು ಬಂದಿವೆ ಇವುಗಳಲ್ಲಿ ಎಷ್ಟು ಅರ್ಜಿಗಳನ್ನು ಪುರಸ್ಕರಿಸಲಾಗಿದೆ ಮತ್ತು ತಿರಸ್ಕೃತಗೊಂಡ ಅರ್ಜಿಗಳು ಎಷ್ಟು

ಇ) ಅಕ್ರಮ ಸಂಪರ್ಕಗಳ ಸಕ್ರಮೀಕರಣಕ್ಕೆ ಎಷ್ಟು ಹಣ ವಸೂಲು ಮಾಡಲಾಗುತ್ತಿದೆ

ಈ) ರೈತರಿಗೆ ತಮ್ಮದೇ ಆದ ಟ್ರಾನ್ಸ್‌ಫಾರ್ಮರ್ ಹೊಂದಲು ಯೋಜನೆಯನ್ನು ರೂಪಿಸಲಾಗಿದೆ ಹಾಗಿದ್ದಲ್ಲಿ ಅದರ ವಿವರಗಳನ್ನು ನೀಡುವುದು

ಉ) ರೈತರು ಹಣ ನೀಡಿ ಹೊಂದಿದ ಈ ಟ್ರಾನ್ಸ್‌ಫಾರ್ಮರ್‌ಗಳು ವಿದ್ಯುತ್ ಇಲಾಖೆಯ ನಿರ್ಲಕ್ಷದಿಂದ ಅಥವಾ ಅಧಿಕ ವಿದ್ಯುತ್ ಒತ್ತಡ ಒಮ್ಮೆಗೆ ಹೆಚ್ಚಾದಾಗ ವಿಫಲ ಹೊಂದಿದಲ್ಲಿ ಈ ಟ್ರಾನ್ಸ್‌ಫಾರ್ಮರ್ಸ್‌ಗಳನ್ನು ಯಾರು ದುರಸ್ಥಿ ಮಾಡಿಸಬೇಕು

ಊ) ಈ ರೀತಿ ಆದಲ್ಲಿ ವಿದ್ಯುತ್ ಪ್ರಸರಣ ನಿಗಮ ಪರಿಹಾರ ನೀಡುವುದೆ?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ರಾಜ್ಯಾದ್ಯಂತ ಸುಮಾರು 2 ಲಕ್ಷ ಅನಧಿಕೃತ ನೀರಾವರಿ ಪಂಪುಸೆಟ್ಟುಗಳು ಚಾಲನೆಯಲ್ಲಿರಬಹುದೆಂದು ಅಂದಾಜು ಮಾಡಲಾಗಿದೆ

ಆ) ಕಳೆದ ಒಂದು ವರ್ಷದ ಅವಧಿಯಲ್ಲಿ ಅನಧಿಕೃತ ನೀರಾವರಿ ಪಂಪು ಸೆಟ್ಟುಗಳನ್ನು ಸಕ್ರಮೀಕರಣಗೊಳಿಸಿಕೊಳ್ಳಲು ಒಟ್ಟು 543 ಅರ್ಜಿಗಳು ಬಂದಿರುತ್ತವೆ ಇವುಗಳ ಪೈಕಿ 484 ಅರ್ಜಿಗಳನ್ನು ಪುರಸ್ಕರಿಸಲಾಗಿದೆ 54 ಅರ್ಜಿಗಳನ್ನು ತಿರಸ್ಕರಿಸಲಾಗಿದೆ

ಇ) ಪ್ರಸ್ತುತ ಅನಧಿಕೃತ ನೀರಾವರಿ ಪಂಪು ಸೆಟ್ಟುಗಳನ್ನು ಸಕ್ರಮೀಕರಣಗೊಳಿಸಲು ಪ್ರತಿ ಬಳಕೆದಾರರು ರೂ 35000/– (ನೋಂದಣಿ ಶುಲ್ಕ ರೇವಣಿ ಇತ್ಯಾದಿಗಳನ್ನು ಹೊರತುಪಡಿಸಿ)ಗಳನ್ನು ಪಾವತಿಸಬೇಕಾಗಿರುತ್ತದೆ

ಈ) ಹೌದು ಈ ಯೋಜನೆಯಡಿ ಹಾಲಿ ಇರುವ 4 ತಂತಿ ಎಲ್ ಟಿ ವ್ಯವಸ್ಥೆಯನ್ನು 3 ತಂತಿ ಹೆಚ್ ಟಿ ವ್ಯವಸ್ಥೆಯನ್ನಾಗಿ ಪರಿವರ್ತಿಸಿ ಅಥವಾ ಹೊಸ ಹೆಚ್ ಟಿ ಮಾರ್ಗವನ್ನು ವಿಸ್ತರಿಸಿ ಹಾಗೂ 10/15 ಕೆ ವಿ ಎ, ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ರನ್ನು ಪ್ರತಿ ನೀರಾವರಿ ಪಂಪುಸೆಟ್ಟು ಸ್ಥಾವರಕ್ಕೆ ಅಳವಡಿಸಿ ಅಧಿಕ ವೋಲ್ಟೇಜ್ ಒತ್ತಡದ ವಿತರಣಾ ವ್ಯವಸ್ಥೆಯ ಮೂಲಕ (11 ಕೆ ವಿ) ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತದೆ ಈ ಯೋಜನೆಯಡಿ ಭಾವೀ ನೀರಾವರಿ ಪಂಪುಸೆಟ್ಟು ಬಳಕೆದಾರರು 10/15 ಕೆ ವಿ ಎ ಸಾಮರ್ಥ್ಯದ ಒಂದು ಪ್ರತ್ಯೇಕ ಪುಟ್ಟ ಟ್ರಾನ್ಸ್‌ಫಾರ್ಮರ್ ನ್ನು ಹೊಂದಿ ಅವರುಗಳ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕವನ್ನು ಪಡೆಯಬಹುದಾಗಿರುತ್ತದೆ ಈ ಯೋಜನೆಯಡಿ ವಿದ್ಯುತ್ ಸಂಪರ್ಕ ಪಡೆಯಲು ವಿದ್ಯುತ್ ಮಾರ್ಗ ನಿರ್ಮಾಣ ಮತ್ತು ಟ್ರಾನ್ಸ್‌ಫಾರ್ಮರ್ ಅಳವಡಿಕೆಗೆ ತಗಲುವ ವೆಚ್ಚದಲ್ಲಿ ಅವರುಗಳ ಪಾಲನ್ನು ಅಂದರೆ 25 000 00 ರೂ ಗಳನ್ನು (ನೋಂದಣಿ ಶುಲ್ಕ, ರೇವಣಿ ಇತ್ಯಾದಿಗಳನ್ನು ಹೊರತುಪಡಿಸಿ) ಪಾವತಿಸಬೇಕಾಗಿರುತ್ತದೆ ಹಾಲಿ ಇರುವ ನೀರಾವರಿ ಪಂಪುಸೆಟ್ಟು ಸ್ಥಾವರಗಳನ್ನು ಓವೈಟಿ (ತಮ್ಮದೇ ಆದ ಟ್ರಾನ್ಸ್‌ಫಾರ್ಮರ್‌ನ್ನು ಹೊಂದುವ ಯೋಜನೆ) ಸಂಪರ್ಕಕ್ಕೆ ಪರಿವರ್ತಿಸಬೇಕಾದಲ್ಲಿ, ಬಳಕೆದಾರರು ಈ ಕಾರ್ಯಕ್ಕೆ ತಗಲುವ ವೆಚ್ಚದಲ್ಲಿ ಅವರುಗಳ ಪಾಲು ಆದ ರೂ 16 545–00 ಗಳನ್ನು ಪಾವತಿಸಬೇಕಾಗಿರುತ್ತದೆ ಅನಧಿಕೃತ ನೀರಾವರಿ ಪಂಪುಸೆಟ್ಟು ಸ್ಥಾವರಗಳನ್ನು ಸಕ್ರಮೀಕರಣಗೊಳಿಸಲು ಪ್ರತಿ ಬಳಕೆದಾರರು ರೂ 35,000–00 (ನೋಂದಣಿ ಶುಲ್ಕ ರೇವಣಿ ಇತ್ಯಾದಿಗಳನ್ನು ಹೊರತುಪಡಿಸಿ)ಗಳನ್ನು ಪಾವತಿಸಬೇಕಾಗಿರುತ್ತದೆ

ಉ) ಟ್ರಾನ್ಸ್‌ಫಾರ್ಮರ್‌ಗಳು ವಿದ್ಯುತ್ ಇಲಾಖೆಯ ನಿರ್ಲಕ್ಷದಿಂದ ಅಥವಾ ಅಧಿಕ ವಿದ್ಯುತ್ ಒತ್ತಡ ಒಮ್ಮೆಗೆ ಹೆಚ್ಚಾದಾಗ ವಿಫಲ ಹೊಂದಿದಲ್ಲಿ ಈ ಟ್ರಾನ್ಸ್‌ಫಾರ್ಮರ್‌ಗಳನ್ನು ಸಂಬಂಧಿಸಿದ ವಿದ್ಯುತ್ ವಿತರಣಾ ಕಂಪೆನಿಗಳು ದುರಸ್ಥಿ ಮಾಡಿಸಬೇಕಾಗುತ್ತದೆ

ಊ) ಈ ಪ್ರಶ್ನೆ ಉದ್ಭವಿಸುವುದಿಲ್ಲ

ಚಿಕ್ಕನಾಯಕನಹಳ್ಳಿ ತಾಲ್ಲೂಕು ವ್ಯಾಪ್ತಿಗೆ ವಿದ್ಯುತ್ ಪರಿವರ್ತಕಗಳನ್ನು ಸರಬರಾಜು ಮಾಡುವ ಬಗ್ಗೆ

04 (171) ಶ್ರೀ ಸುರೇಶ್ ಬಾಬು ಸಿ ಬಿ (ಚಿಕ್ಕನಾಯಕನಹಳ್ಳಿ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ವಿದ್ಯುತ್ ಪರಿವರ್ತಕಗಳನ್ನು ರೈತರಿಗೆ ಮತ್ತು ಕುಡಿಯುವ ನೀರಿನ ಉದ್ದೇಶಕ್ಕೆ ಸಕಾಲದಲ್ಲಿ ಒದಗಿಸಲು ಸಾಧ್ಯವಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಸಕಾಲದಲ್ಲಿ ವಿದ್ಯುತ್ ಪರಿವರ್ತಕಗಳನ್ನು ಒದಗಿಸಲು ಯಾವ ಕ್ರಮ ತೆಗೆದುಕೊಳ್ಳಲಾಗುವುದು

ಇ) ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗುವುದರಿಂದ ತ್ವರಿತಗತಿಯಲ್ಲಿ ವಿದ್ಯುತ್ ಪರಿವರ್ತಕಗಳನ್ನು ಒದಗಿಸಲು ಏನು ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಹೌದು ಗಮನಕ್ಕೆ ಬಂದಿದೆ

ಆ) ಕುಡಿಯುವ ನೀರಿನ ಯೋಜನೆಗೆ ಸಂಬಂಧಿಸಿದಂತೆ ವಿಫಲವಾದ ಪರಿವರ್ತಕಗಳನ್ನು ಬದಲಾಯಿಸಲಾಗಿದೆ ನೀರಾವರಿ ಪಂಪ್ ಸೆಟ್‌ಗಳಿಗೆ ಸಂಬಂಧಿಸಿದಂತೆ ವಿಫಲವಾದ ಪರಿವರ್ತಕಗಳನ್ನು ಬದಲಾಯಿಸಲು ಬೇಕಾದ ಪರಿವರ್ತಕಗಳನ್ನು ತುಮಕೂರು ಜಿಲ್ಲೆಯ ದುರಸ್ತಿ ಕೇಂದ್ರ ಹಾಗೂ ಕ ವಿ ಕಾ ಪರಿವರ್ತಕ ತಯಾರಿಕಾ ಕೇಂದ್ರಗಳಿಂದ ಪಡೆಯಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ

ಇ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕುಡಿಯುವ ನೀರಿನ ಸಮಸ್ಯೆ ಇರುವ ಹಳ್ಳಿಗಳಲ್ಲಿ ಪ್ರತ್ಯೇಕವಾಗಿ ಕುಡಿಯುವ ನೀರಿನ ವ್ಯವಸ್ಥೆಗಾಗಿ 28 ಸಂಖ್ಯೆಯ ಅಧಿಕ ಪರಿವರ್ತಕಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ

ಕಮಲಾಪುರ್ ಕ್ಷೇತ್ರ ವ್ಯಾಪ್ತಿಯಲ್ಲಿ ಇರುವ ಪರಿಶಿಷ್ಟ ಪಂಗಡ ಮತ್ತು ತಾಂಡಾಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು

05 (416) ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪೂರ್) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗ ಜಿಲ್ಲೆ ಕಮಲಾಪುರ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಪಂಗಡ ಹಾಗೂ ಲಂಬಾಣಿ ತಾಂಡಗಳ ಹಳೆ ಮತ್ತು ಹೊಸ ಬಡಾವಣೆಗಳಿಗೆ ವಿದ್ಯುತ್ ಸಂಪರ್ಕ ನೀಡಲು ಸರ್ಕಾರ ಕ್ರಮ ಕೈಗೊಂಡಿದೆಯೆ ಹಾಗಿದ್ದಲ್ಲಿ ಯಾವ ರೀತಿಯ ಕ್ರಮ ಕ್ಕೈಗೊಂಡಿದೇ

ಆ) ಈ ತಾಂಡಗಳ ಪೈಕಿ ಈವರೆಗೆ ಎಷ್ಟು ತಾಂಡಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗಿದೆ?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಹೌದು ವಿದ್ಯುತ್ ಸಂಪರ್ಕ ನೀಡಲು ಕ್ರಮ ತೆಗೆದುಕೊಳ್ಳಲಾಗಿದೆ ಹಳೇ ತಾಂಡಾಗಳನ್ನು ಈಗಾಗಲೇ ವಿದ್ಯುದೀಕರಿಸಲಾಗಿದೆ ಹೊಸದಾಗಿ ವಿಸ್ತರಣೆಗೊಂಡ 27 ಬಡಾವಣೆಗಳನ್ನು ಟರ್ನ್ ಕೀ ಆಧಾರದಲ್ಲಿ ವಿದ್ಯುದೀಕರಿಸಲು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ

ಆ) 41 ಹಳೇ ತಾಂಡಗಳಿಗೆ ಈವರೆಗೆ ವಿದ್ಯುತ್ ಸಂಪರ್ಕ ನೀಡಲಾಗಿದೆ ಹೊಸದಾಗಿ ವಿಸ್ತರಣೆಗೊಂಡ 27 ಬಡಾವಣೆಗಳಿಗೆ ಟರ್ನ್ ಕೀ ಆಧಾರದಲ್ಲಿ ವಿದ್ಯುದೀಕರಿಸಲು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ ಈ ಎಲ್ಲಾ ತಾಂಡಾಗಳನ್ನು ಡಿಸೆಂಬರ್ 2004ರ ಅಂತ್ಯದೊಳಗೆ ವಿದ್ಯುದೀಕರಣಗೊಳಿಸಲು ಉದ್ದೇಶಿಸಲಾಗಿದೆ

ಸೇಡಂ ತಾಲ್ಲೂಕಿನ ವಿದ್ಯುತ್ ಪ್ರಸರಣ ನಿಗಮದಲ್ಲಿ ಸುಟ್ಟು ಹೋದ ಟಿ ಸಿ ಗಳ ದುರಸ್ತಿಯ ಬಗ್ಗೆ

06 (114) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ವಿದ್ಯುತ್ ಪ್ರಸರಣ ನಿಗಮದವರು ಟ್ರಾನ್ಸ್‌ಫಾರ್ಮರ್‌ಗಳು (ಟಿ ಸಿ) ಸುಟ್ಟು ಹೋದರೆ ಅಥವಾ ಕೆಟ್ಟು ಹೋದರೆ ಇವುಗಳನ್ನು ದುರಸ್ತಿ ಮಾಡುವ ಅಥವಾ ಬೇರೆ ಟಿ ಸಿ.ಗಳನ್ನು ಅಳವಡಿಸಲು ಬೇಕಾಗಿರುವ ಕಾಲಾವಕಾಶ ಎಷ್ಟು

ಆ) ಮೂರು ತಿಂಗಳವರೆಗೆ ಕೆಟ್ಟು ಹೋದರೆ ಟಿ ಸಿ.ಗಳನ್ನು ಅಳವಡಿಸೇ ದುರಸ್ತಿ ಮಾಡದೇ ಅಥವಾ ಹೊಸ ಟಿ ಸಿ ಗಳನ್ನು ಕೂಡಿಸದೇ ಇರುವುದರಿಂದ ರೈತರ ಪಂಪು ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯ ಸರಬರಾಜು ಇಲ್ಲದೇ ಬೆಳೆಗಳು ನಾಶವಾಗಿ ರೈತರಿಗೆ ನಷ್ಟವಾಗುವುದಿಲ್ಲವೇ.

ಇ) ಇಲ್ಲಿಯವರೆವಿಗೂ ಸೇಡಂ ತಾಲ್ಲೂಕಿನಲ್ಲಿ ಟಿ ಸಿ ಗಳು ಸುಟ್ಟು ಹೋಗಿರುವುದರಿಂದ ಗ್ರಾಮಗಳು ಕತ್ತಲಾಗಿರುವುದು ಎಷ್ಟು ವಿದ್ಯುತ್ ಇಲ್ಲದೇ ಮೋಟಾರುಗಳು ನಡೆಯದೇ ರೈತರು ನಷ್ಟವಾಗಿರುವ ಗ್ರಾಮಗಳು ಯಾವುವು

ಈ) ರೈತರ ಬೆಳೆಯು ನಷ್ಟವಾದರೆ ವಿದ್ಯುತ್ ಪ್ರಸರಣ ನಿಗಮದವರಿಂದ ಇದರ ನಷ್ಟ ಕೊಡಿಸುವ ವ್ಯವಸ್ಥೆ ಮಾಡುವುದು ಯಾವಾಗ?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಈ ಹಿಂದೆ ಗ್ರಾಮಾಂತರ ಭಾಗದಲ್ಲಿ ಒಂದು ವಾರದ ಅವಧಿಯೊಳಗೆ ಸುಟ್ಟುಹೋದ ಪರಿವರ್ತಕಗಳನ್ನು ಬದಲಾಯಿಸಲು ಆದೇಶ ನೀಡಲಾಗಿತ್ತು ಆದರೆ ಇತ್ತೀಚೆಗೆ 72 ಗಂಟೆಗಳಲ್ಲಿ ಸುಟ್ಟು ಹೋಗಿರುವ ಪರಿವರ್ತಕಗಳನ್ನು ಬದಲಾಯಿಸಲು ಆದೇಶ ನೀಡಲಾಗಿದೆ

ಆ) ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಇ) ಸುಟ್ಟು ಹೋದ ಬಹುತೇಕ ಟ್ರಾನ್ಸ್‌ಫಾರ್ಮರ್‌ಗಳನ್ನು ಆದಷ್ಟು ಶೀಘ್ರವಾಗಿ ಮೇಲೆ ನಮೂದಿಸಿರುವ ಅವಧಿಯೊಳಗೆ ಬದಲಾಯಿಸಲಾಗಿದೆ ವಿದ್ಯುತ್ ಇಲ್ಲದೇ ಮೋಟಾರುಗಳು ನಡೆಯದೇ ಇರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಈ) ಸಾಧ್ಯವಾಗಲಾರದು

ಬಿಜಾಪುರ ಜಿಲ್ಲೆಯಲ್ಲಿ ವಿದ್ಯುತ್ ವಿತರಣಾ ಘಟಕಗಳನ್ನು ಸ್ಥಾಪಿಸುವ ಬಗ್ಗೆ

07 (195) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿರುವ ವಿದ್ಯುತ್ ವಿತರಣಾ ಸಬ್ ಸ್ಟೇಷನ್‌ಗಳ ಸಂಖ್ಯೆ ಎಷ್ಟು ಎಲ್ಲೆಲ್ಲಿ ಸ್ಥಾಪಿಸಲಾಗಿದೆ ಇವುಗಳ ಸಾಮರ್ಥ್ಯ ಎಷ್ಟು

ಆ) ಇವುಗಳಲ್ಲದೇ ಬಸವನಬಾಗೇವಾಡಿ ಕ್ಷೇತ್ರದ

1) ಮುತ್ತಗಿ–33 ಕೆ ವಿ ಸ್ಟೇಷನ್ 2) ಮಟ್ಟಿಹಾಳ – 110 ಕೆ ವಿ ಸ್ಟೇಷನ್ 3) ಕೊಲ್ಲಾರ – 33 ಕೆ ವಿ ಸ್ಟೇಷನ್ ಇವುಗಳ ನಿರ್ಮಾಣ ಕಾರ್ಯ ಯಾವ ಹಂತದಲ್ಲಿವೆ

ಇ) ಇದುವರೆಗೆ ಇದಕ್ಕಾಗಿ ಕೈಗೊಂಡಿರುವ ಕ್ರಮಗಳೇನು ಯಾವಾಗ ಪೂರ್ಣಗಳಿಸಲಾಗುತ್ತದೆ

ಈ) ಈ 3 ನೂತನ ವಿದ್ಯುತ್ ಸಬ್ ಸ್ಟೇಷನ್‌ಗಳ ಹೊರತಾಗಿ ಈ ಕ್ಷೇತ್ರವ್ಯಾಪ್ತಿಯಲ್ಲಿ ಹೊಸದಾಗಿ ಮಂಜೂರು ಮಾಡಲು ಉದ್ದೇಶಿಸಿರುವ ಸ್ಥಳಗಳಾವುವು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಬಿಜಾಪುರ ಜಿಲ್ಲೆಯಲ್ಲಿರುವ ವಿದ್ಯುತ್ ವಿತರಣಾ ಕೇಂದ್ರಗಳ ಒಟ್ಟು ಸಂಖ್ಯೆ 29 ವಿವರಗಳು ಈ ಕೆಳಕಂಡಂತಿವೆ

ಕ್ರಮ ಸಂಖ್ಯೆ	ಸ್ಥಳ	ವೋಲ್ಟೇಜ್ (ಕೆ ವಿ ಗಳಲ್ಲಿ)	ಸಾಮರ್ಥ್ಯ (ಎಂ ವಿ ಎ ಗಳಲ್ಲಿ)
1	ಬಸವನಬಾಗೇವಾಡಿ	220	200
2	ಬಿಜಾಪುರ	110	50
3	ಕೆ ಐ ಎ ಡಿ ಬಿ ಬಿಜಾಪುರ	100	30
4	ನಿಡಗುಂಡಿ	110	10
5	ಇಂಡಿ	110	50
6	ಝಳಕಿ	110	30
7	ಸಿಂದಗಿ	110	30
8	ಮೊರಟಗಿ	110	10
9	ಮಮದಾಪುರ	110	30
10	ಬೂತನಾಳ	33	10
11	ತಿಡಗುಂದಿ	33	5
12	ಒಬಲೇಶ್ವರ	33	15
13	ತಿಕೋಟಾ	33	10
14	ಮಲಘಾನ	33	10
15	ಚಡಚಣ	33	10

1	2	3	4
16	ಹೊರತಿ	33	5
17	ತಂಬಾ	33	10
18	ಲಚ್ಚಣ	33	10
19	ಧೂಳಖೇಡ	33	5
20	ನೇವರಗಿ	33	5
21	ಕಳಕೇರಿ	33	5
22	ಆಲಮೇಲ	33	5
23	ದೇವರ ಹಿಪ್ಪರಗಿ	33	7
24	ನಾಲತವಾಡ	33	10
25	ಮುದ್ದೇಬಿಹಾಳ	33	10
26	ತಾಳಿಕೋಟೆ	33	5
27	ಕೊರವಾರ್	33	10
28	ತಡವಲಗಾ	33	10
29	ದೇವರಗೆನ್ನೂರು	33	10
	ಒಟ್ಟು		**607**

ಆ) ಮತ್ತು ಇ) ಬಸವನಬಾಗೇವಾಡಿ ಕ್ಷೇತ್ರದ ಮುತ್ತಗಿ ಗ್ರಾಮದಲ್ಲಿ ಒಂದು 33 ಕೆವಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವ ಕಾಮಗಾರಿಯ ನಿರ್ವಹಣೆಯನ್ನು ಟರ್ನ್ ಕೀ ಆಧಾರದಲ್ಲಿ ವಹಿಸಿಕೊಡುವ ಸಲುವಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು ಟೆಂಡರ್ ಪ್ರಕ್ರಿಯೆ ನಡೆದಿದೆ ಈ ಕಾಮಗಾರಿಯ ನಿರ್ವಹಣೆಗೆ ಬೇಕಾಗುವ ಹಣಕಾಸಿನ ವ್ಯವಸ್ಥೆಯನ್ನು ಮಾಡಲಾಗುತ್ತಿದೆ ಆಯ್ಕೆಗೊಂಡ ಗುತ್ತಿಗೆದಾರರಿಗೆ ಈ ಕಾಮಗಾರಿಯನ್ನು ವಹಿಸಿಕೊಟ್ಟು ಆದಷ್ಟು ಜಾಗ್ರತೆ ನಿರ್ಮಾಣ ಕಾರ್ಯಗಳನ್ನು ಪ್ರಾರಂಭಿಸಲಾಗುವುದು ಸದರಿ ಕ್ಷೇತ್ರದ ಮಟ್ಟಿಹಾಳ ಗ್ರಾಮದಲ್ಲಿ ಒಂದು 110 ಕೆವಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು ಬೇಕಾಗುವ ಭೂಮಿಯನ್ನು ಈಗಾಗಲೇ ಸ್ವಾಧೀನಪಡಿಸಿಕೊಳ್ಳಲಾಗಿದೆ ಈ ಯೋಜನೆಯ ಅಂದಾಜು ಪಟ್ಟಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ನಿರೀಕ್ಷಿಸಲಾಗುತ್ತಿದ್ದು, ಈ ಅಂದಾಜು ಪಟ್ಟಿಯನ್ನು ಪಡೆದ ನಂತರ, ಆರ್ಥಿಕ ಹೊಂದಾಣಿಕೆಯನ್ನು ಮಾಡಿಕೊಂಡು ನಿರ್ಮಾಣ ಕಾಮಗಾರಿಗಳ ನಿರ್ವಹಣೆಯ ಬಗ್ಗೆ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು

ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೊಲ್ಲಾರ ಗ್ರಾಮದಲ್ಲಿ ಒಂದು 33 ಕೆವಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವ ಯಾವುದೇ ಪ್ರಸ್ತಾವನೆಯು ಸದ್ಯಕ್ಕೆ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ಮುಂದೆ ಇರುವುದಿಲ್ಲ

ಈ) ಬಸವನ ಬಾಗೇವಾಡಿ ಕ್ಷೇತ್ರದ ವ್ಯಾಪ್ತಿಯಲ್ಲಿ ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪಿಸಲು ಈಗಾಗಲೇ ಆಡಳಿತಾತ್ಮಕ / ತಾಂತ್ರಿಕ ಅನುಮೋದನೆಯನ್ನು ನೀಡಲಾಗಿರುವ ಮೇಲಿನ ಎರಡು ಉಪ ಕೇಂದ್ರಗಳನ್ನು ಹೊರತುಪಡಿಸಿ, ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮನಗೊಳಿ ಮತ್ತು ಹೂವಿನ ಹಿಪ್ಪರಗಿ ಗ್ರಾಮಗಳಲ್ಲಿ ತಲಾ ಒಂದು 33 ಕೆವಿ ವಿದ್ಯುತ್ ಉಪ ಕೇಂದ್ರವನ್ನು ಹಾಗೂ

ಶಿರಬೂರ್ ನಲ್ಲಿ ಒಂದು 110 ಕೆ ವಿ ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸುವ ಕಾಮಗಾರಿಗಳಿಗೆ ಈಗಾಗಲೇ ಮಂಜೂರಾತಿಯನ್ನು ನೀಡಲಾಗಿರುತ್ತದೆ

ತುರುವೇಕೆರೆ ತಾಲ್ಲೂಕಿನಲ್ಲಿ ಹೆಚ್ಚುವರಿ ಟಿ.ಸಿ.ಗಳ ಸ್ಥಾಪನೆಯ ಬಗ್ಗೆ

08 (169) ಶ್ರೀ ಲಕ್ಷ್ಮಿನಾರಾಯಣ ಎಂ ಡಿ (ತುರುವೇಕೆರೆ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ವೋಲ್ಟೇಜ್ ಕೊರತೆಯಿಂದ ಹೆಚ್ಚುವರಿ ಟಿ ಸಿ ಹಾಕಲು ಕೋರಿ ಬಂದ ಅರ್ಜಿಗಳೆಷ್ಟು ನಿರಾಕರಿಸಿರುವ ಅರ್ಜಿಗಳೆಷ್ಟು

ಆ) ಅವುಗಳನ್ನು ಪರಿಗಣಿಸಿ ಅಂದಾಜು ಪಟ್ಟಿ ತಯಾರು ಮಾಡಲಾಗಿದೆಯೇ

ಇ) ಎಷ್ಟು ವರ್ಷದಿಂದ ಬೇಡಿಕೆ ಇದೆ ವಿಳಂಬ ಮಾಡಲು ಕಾರಣವೇನು

ಈ) 3–4 ವರ್ಷದಿಂದ ಅರ್ಜಿ ಕೊಟ್ಟರೂ ಟಿ ಸಿ ಹಾಕದಿರಲು ಕಾರಣವೇನು

ಉ) ಯಾವಾಗ ಹೆಚ್ಚುವರಿ ಟಿ ಸಿ ಗಳನ್ನು ಅಳವಡಿಸಲಾಗುವುದು

ಊ) ವೋಲ್ಟೇಜ್ ಕಡಿಮೆ ಇರುವ ಕಡೆ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ತುರುವೇಕೆರೆ ತಾಲ್ಲೂಕಿನಲ್ಲಿ ವೋಲ್ಟೇಜ್ ಕೊರತೆಯಿಂದ ಹೆಚ್ಚುವರಿ ಟಿ ಸಿ ಹಾಕಲು 4 ಅರ್ಜಿಗಳು ಬಂದಿರುತ್ತವೆ ಯಾವ ಅರ್ಜಿಗಳನ್ನು ನಿರಾಕರಿಸಿರುವುದಿಲ್ಲ

ಆ) ಸ್ವೀಕೃತವಾದ ಎಲ್ಲಾ ಅರ್ಜಿಗಳಿಗೆ ಅಂದಾಜು ಪಟ್ಟಿ ತಯಾರಿಸಲಾಗಿದೆ

ಇ) 9 ತಿಂಗಳುಗಳಿಂದ ಬೇಡಿಕೆ ಇದೆ ಈಗಾಗಲೇ 3 ಕೆಲಸಗಳು ಪ್ರಗತಿಯಲ್ಲಿವೆ ಉಳಿದ ಒಂದು ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು

ಈ) 3–4 ವರ್ಷಗಳ ಹಿಂದಿನ ಅರ್ಜಿಗಳು ಯಾವುದೂ ಬಾಕಿ ಇರುವುದಿಲ್ಲ

ಉ) ಮಾರ್ಚ್ 2004ರ ಅಂತ್ಯದೊಳಗೆ ಮೇಲಿನ ಹೆಚ್ಚುವರಿ ಟಿ ಸಿ ಗಳನ್ನು ಅಳವಡಿಸಲಾಗುವುದು

ಊ) ವೋಲ್ಟೇಜ್ ಕೊರತೆ ಇರುವ ಮತ್ತು ಅಧಿಕ ಒತ್ತಡ ಇರುವ ಕಡೆ ಹೆಚ್ಚುವರಿಯಾಗಿ 64 ಪರಿವರ್ತಕಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ ಈಗಾಗಲೇ ಜನವರಿ 2003 ರಿಂದ ಇಲ್ಲಿಯವರೆಗೆ 75 ಪರಿವರ್ತಕಗಳನ್ನು ಅಳವಡಿಸಲಾಗಿದೆ

ಹೆಚ್ ಕೆ ಡಿ ಬಿ ಹಾಗೂ ಎಂ ಎ ಡಿ ಬಿ ಗೆ ಬಿಡುಗಡೆ ಮಾಡಿರುವ ಹಣದ ಬಗ್ಗೆ

09 (199) ಶ್ರೀ ಸದಾನಂದಗೌಡ ಡಿ ವಿ (ಪುತ್ತೂರು) ಮಾನ್ಯ ಕಾನೂನು ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2000–01 ರಿಂದ 2003–04 ರ ವರೆಗೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಮಲೆನಾಡು ಅಭಿವೃದ್ಧಿ ಮಂಡಳಿ ಹಾಗೂ ಬಯಲುಸೀಮೆ ಅಭಿವೃದ್ಧಿ ಮಂಡಳಿಗಳಿಗೆ ನಿಗಧಿಪಡಿಸಲಾದ ಹಾಗೂ ಬಿಡುಗಡೆ ಮಾಡಿದ ಹಣ ಎಷ್ಟು

ಆ) ಬಿಡುಗಡೆಯಾದ ಹಣದಲ್ಲಿ ಎಷ್ಟು ವೆಚ್ಚ ಮಾಡಲಾಗಿದೆ (ವಿವರವನ್ನು ವರ್ಷವಾರು ಮಂಡಳಿವಾರು ನೀಡುವುದು)?

ಶ್ರೀ ಡಿ ಬಿ ಚಂದ್ರೇಗೌಡ (ಕಾನೂನು ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು)

ಅ) ಮತ್ತು ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ANNEXURE - 1

DETAILS OF AMOUNT BUDGETTED, RELEASE AND EXPENDITURE INCURRED FROM 2000-01 TO 2003-04

YEAR	BE	RELEASES	RS CRORES EXPENDITURE
HYDERABAD KARNATAKA AREA DEVELOPMENT BOARD			
2000-01	75 00	58 89	31 82
2001-02	80 00	57 50	61 14
2002-03	45 50	13 00	51 87
2003-04	32 70	18 23	23 27
MALNAD AREA DEVELOPMENT BOARD			
2000-01	42 50	32 56	30 10
2001-02	30 00	11 35	17 40
2002-03	23 50	15 33	15 56
2003-04	18 50	11 50	10 21
BAYALUSEEME DEVELOPMENT BOARD			
2000-01	9 00	6 60	5 14
2001-02	6 50	4 40	4 40
2002-03	6 00	5 50	5 50
2003-04	11 43	1 94	2 17

* Expenditure in 2003-04 is upto Dec 2003

** Expenditure includes the unspent balance of previous years

*** The shortfall in releases as against budgest estimates is due to plan cut and withdrawal for SCP & TSP

ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆಯ ಕಾಮಗಾರಿ ಕುರಿತು

07 (178) ಶ್ರೀ ಅಪ್ಪಚ್ಚು ರಂಜನ್ ಎಂ ಪಿ (ಸೋಮವಾರ ಪೇಟೆ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆಗೆ ಕಳೆದ ಮೂರು ವರ್ಷಗಳಲ್ಲಿ ನಿಗಧಿಪಡಿಸಿದ್ದ ಹಣ ಎಷ್ಟು ಖರ್ಚು ಮಾಡಿರುವ ಹಣ ಎಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ಕೊಡಗು ಜಿಲ್ಲೆಯಲ್ಲಿ ಯಾವ ಯಾವ ಕಾಮಗಾರಿಗಳಿಗಾಗಿ ಖರ್ಚು ಮಾಡಲಾಗಿದೆ (ತಾಲ್ಲೂಕುವಾರು ವಿವರ ತಿಳಿಸುವುದು)

ಇ) ಇದರಿಂದ ಒಟ್ಟು ಎಷ್ಟು ಕೆರೆಗಳನ್ನು ಅಭಿವೃದ್ಧಿಗೊಳಿಸಿದಂತಾಗಿದೆ

ಈ) ಪುನ: ಅಭಿವೃದ್ಧಿಗಾಗಿ ಉದ್ದೇಶಿಸಿರುವ ಕೆರೆಗಳ್ಯಾವುವು (ವಿಧಾನಸಭಾವಾರು ಕೊಡಗು ಜಿಲ್ಲಾ ವಿವರ ಒದಗಿಸುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ಸಣ್ಣ ನೀರಾವರಿ ಇಲಾಖೆಗೆ ಕಳೆದ ಮೂರು ವರ್ಷಗಳಲ್ಲಿ ನಿಗಧಿ ಪಡಿಸಿದ ಹಣ ಹಾಗೂ ಖರ್ಚು ಮಾಡಿರುವ ವೆಚ್ಚದ ಜಿಲ್ಲಾವಾರು ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ

ಆ) ತಾಲ್ಲೂಕುವಾರು ವಿವರಗಳನ್ನು ಅನುಬಂಧ –2 ರಲ್ಲಿ ನೀಡಲಾಗಿದೆ

ಇ) ಇದರಿಂದಾಗಿ ಕೊಡಗು ಜಿಲ್ಲೆಯಲ್ಲಿ ಕೆರೆ ಕಲ್ಯಾಣ ಹೂಳೆತ್ತುವುದು ಹಾಗೂ ಆಧುನೀಕರಣ ಅಡಿಯಲ್ಲಿ ಅಭಿವೃದ್ಧಿ ಪಡಿಸಿದ ಕೆರೆಗಳ ವಿವರ ಈ ಕೆಳಗಿನಂತಿರುತ್ತದೆ

1 ಮಡಿಕೆರೆ ತಾಲ್ಲೂಕು –01 ಕೆರೆ

2 ಸೋಮವಾರಪೇಟೆ ತಾಲ್ಲೂಕು –07 ಕೆರೆಗಳು

3 ವಿರಾಜಪೇಟೆ ತಾಲ್ಲೂಕು –16 ಕೆರೆಗಳು

ಈ) ಪುನಃ ಅಭಿವೃದ್ಧಿಗಾಗಿ ಉದ್ದೇಶಿಸಿರುವ ಕೆರೆಗಳನ್ನು ಸಧ್ಯಕ್ಕೆ ಆಯ್ಕೆ ಮಾಡಿರುವುದಿಲ್ಲ

ಅನುಬಂಧ –1

ಕ್ರ ಸಂ	ಜಿಲ್ಲೆಗಳ ಹೆಸರು	2000–01		2001–2002		2002–2003	
		ಅನುದಾನ	ವೆಚ್ಚ	ಅನುದಾನ	ವೆಚ್ಚ	ಅನುದಾನ	ವೆಚ್ಚ
1	2	3	4	5	6	7	8
1	ಬೆಂಗಳೂರು	458 25	623 47	429 00	456 72	64 50	124 03
2	ಕೋಲಾರ	564 75	592 37	303 00	476 46	99 50	157 10
3	ತುಮಕೂರು	315 00	348 47	270 00	264 64	91 00	230 63
4	ಚಿತ್ರದುರ್ಗ	310 76	263 14	256 90	152 47	104 46	188 93
5	ದಾವಣಗೆರೆ	83 76	83 00	54 90	158 43	34 45	85 42
6	ಶಿವಮೊಗ್ಗ	313 48	281 71	204 20	240 14	415 59	317 74
7	ಮೈಸೂರು	150 60	179 65	93 90	181 69	15 01	126 70
8	ಚಾಮರಾಜನಗರ	88 83	140 01	69 80	146 74	5 77	15 35
9	ಮಂಡ್ಯ	156 57	174 23	140 30	200 14	9 02	333 75
10	ಹಾಸನ	137 99	83 90	134 00	84 10	71 88	72 35
11	ಚಿಕ್ಕಮಗಳೂರು	148 01	116 11	122 00	75 98	82 72	58 26
12	ಮಂಗಳೂರು	152 75	157 82	144 20	168 54	130 63	88 63
13	ಉಡುಪಿ	330 78	643 44	141 95	210 98	155 19	157 84
14	ಕೊಡಗು	117 97	118 95	79 75	113 53	5 68	63 90
15	ಬೆಳಗಾಂ	1028 26	1011 22	500 59	644 14	830 66	973 58
16	ಧಾರವಾಡ	216 27	157 54	106 06	100 54	247 44	165 50

1	2	3	4	5	6	7	8
17	ಗದಗ್	260 55	201 46	161 60	71 21	271 08	147 19
18	ಹಾವೇರಿ	651 75	700 83	434 09	417 83	431 12	342 13
19	ಬಿಜಾಪುರ	738 02	446 55	427 16	258 30	619 91	286.87
20	ಬಾಗಲಕೋಟೆ	976 32	1102 78	718 73	1747 48	860 90	935 10
21	ಉತ್ತರ ಕನ್ನಡ	481 13	410 58	245 24	232 96	508 72	562 24
22	ಗುಲ್ಬರ್ಗ	806 68	736 20	574 87	923 47	1013 90	1315 01
23	ಬೀದರ್	815 63	896 08	369 35	840 01	861.72	1703 25
24	ಕೊಪ್ಪಳ	1401 69	1659 25	260 95	1286 15	406 18	329 37
25	ರಾಯಚೂರು	477 24	300 11	341 88	365 22	365 12	297 20
26	ಬಳ್ಳಾರಿ	942 38	925 00	1583 78	522 88	1219 01	1354 90
	ಒಟ್ಟು	12125 42	12353 87	8168 2	10340 75	8921 16	10603 97

ಅನುಬಂಧ - 2

ಎಲ್ ಎಕ್ಕೂ ನಂ 178

ಕೊಡಗು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕಾಮಗಾರಿವಾರು ಖರ್ಚು ಮಾಡಿದ ವಿವರ

ಸಣ್ಣ ನೀರಾವರಿ ವಿಭಾಗ, ಮಂಗಳೂರು

ರೂ ಲಕ್ಷಗಳಲ್ಲಿ

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಲೆಕ್ಕ ಶೀರ್ಷಿಕೆ	ಅಂದಾಜು ಮೊತ್ತ	31/2000 ವರೆಗೆ ಆದ ವೆಚ್ಚ	2000-01 ರಲ್ಲಿ ಮಾಡಲಾದ ವೆಚ್ಚ	2001-02 ರಲ್ಲಿ ಮಾಡಲಾದ ವೆಚ್ಚ	2002-03 ರಲ್ಲಿ ಮಾಡಲಾದ ವೆಚ್ಚ	2003-04 ರಲ್ಲಿ ಮಾಡಲಾದ ವೆಚ್ಚ	ಒಟ್ಟು ವೆಚ್ಚ	ಷರಾ
1	2	3	4	5	6	7	8	9	10	11
ವಿರಾಜಪೇಟೆ ತಾಲ್ಲೂಕು										
1	ಹೊನ್ನಿಕೊಪ್ಪ ಅಣೆಕಟ್ಟು ಮತ್ತು ಶಾಲೆಗಳ ದುರಸ್ತಿ ಹಾಗೂ ಹೂಳು ತೆಗೆಯುವುದು	4702-ಕೆರೆ ಕಲ್ಯಾಣ	5 00	3 23	1 89	0 58			5 70	ಕಾಮಗಾರಿ ಪೂರ್ಣಗೊಂಡಿದೆ
2	ಬಾಲಾಜಿ ಅಣೆಕಟ್ಟಿನ ನಾಲೆಯ ಹೂಳು ತೆಗೆಯುವುದು ಹಾಗೂ ದುರಸ್ತಿ	4702- ಕೆರೆ ಕಲ್ಯಾಣ	485	0 84		4 74			5 58	ಕಾಮಗಾರಿ ಪೂರ್ಣಗೊಂಡಿದೆ
3	ಬೆಸಗೂರು ಗ್ರಾಮದ ಸೂಳೆಗೆರೆ ಪುನರುಜ್ಜೀವನ ಕಾಮಗಾರಿ	4702- ಕೆರೆ ಕಲ್ಯಾಣ	26 30	3 28	0 62	2 26			6 16	ಕಾಮಗಾರಿ ಪ್ರಗತಿಯಲ್ಲಿದೆ
4	ದೇವನೂರು ಅಣೆಕಟ್ಟಿನ ಕಾಲುವೆ ದುರಸ್ತಿ ಬಲದಂಡೆ	4702- ಕೆರೆ ಕಲ್ಯಾಣ	7 50	0 25	0 12	7 83			8 20	ಕಾಮಗಾರಿ ಪೂರ್ಣಗೊಂಡಿದೆ
5	ದೇವನೂರು ಅಣೆಕಟ್ಟಿನ ಕಾಲುವೆ ಅಭಿವೃದ್ಧಿ ಎಡದಂಡೆ	4702- ಕೆರೆ ಕಲ್ಯಾಣ	6 82	5 48	1 42				6 90	ಕಾಮಗಾರಿ ಪೂರ್ಣಗೊಂಡಿದೆ
6	ಸಾಲದಾಳ ಕೆರೆ ದುರಸ್ತಿ	4072- ಕೆರೆಕಲ್ಯಾಣ	4 95	302	301				6 03	ಕಾಮಗಾರಿ ಪೂರ್ಣಗೊಂಡಿದೆ

1	2	3	4	5	6	7	8	9	10	11
7	ಪಾಲದಾಳ ಕೆರೆಯ ಮಳೆಹಾನಿ ದುರಸ್ತಿ ಕಾಮಗಾರಿ	4702-ಕೆರೆ ಕಲ್ಯಾಣ ಮಳೆಹಾನಿ ದುರಸ್ತಿ	1 00		1 00				1 00	ಕಾಮಗಾರಿ ಪೂರ್ಣಗೊಂಡಿದೆ
8.	ವಡ್ಡರ ಮಾಡು ಕೆರೆಯ ತೂಬು ದುರಸ್ತಿ ಕಾಮಗಾರಿ	4702-ಕೆರೆ ಕಲ್ಯಾಣ ಮಳೆಹಾನಿ ದುರಸ್ತಿ	1 00		0 73				0 73	ಕಾಮಗಾರಿ ಪೂರ್ಣಗೊಂಡಿದೆ
9	ಬೇಗೂರು ಕೊಲ್ಲಿ ತೋಡುವಿನಲ್ಲಿ ಹೂಳೆತ್ತುವುದು	4702-ಕೆರೆಗಳ ಹೂಳೆತ್ತುವುದು	45 00			0 10	24 40		24 50	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ
10	ಪಾಲದಾಳ ಕೆರೆಯ ಹೂಳೆತ್ತುವುದು	4702- ಕೆರೆಗಳ ಹೂಳೆತ್ತುವುದು	5 00	3 38	1 54				4 92	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ
11	ಹೊದ್ಕೂರು ಪೈನಾರಿ ಕೆರೆ ಹೂಳೆತ್ತುವುದು	4072- ಕೆರೆಗಳ ಹೂಳೆತ್ತುವುದು	1 50	0 84	0 38				1 22	ಕಾಮಗಾರಿ ಪೂರ್ಣಗೊಂಡಿದೆ
12	ಚಕ್ಕೆ ಸೂಡ್ಲೂರು ಕೆರೆಯ ಹೂಳೆತ್ತುವುದು	4072- ಕೆರೆಗಳ ಹೂಳೆತ್ತುವುದು	6.00		6 31				6 31	ಕಾಮಗಾರಿ ಪೂರ್ಣಗೊಂಡಿದೆ
13	ಬೆಟ್ಟತ್ತೂರು ಕೆರೆಯ ಹೂಳೆತ್ತುವುದು	4072- ಕೆರೆಗಳ ಆಧುನೀಕರಣ	10 00	1 54	3 01	5 95			10 50	ಕಾಮಗಾರಿ ಪೂರ್ಣಗೊಂಡಿದೆ
14	ಮುಗ್ಗತ್ತೇರಿ ಗ್ರಾಮದ ಇಗ್ಗುತ್ತಪ್ಪ ದೇವರ ಕೆರೆ ಆಧುನೀಕರಣ	4072- ಕೆರೆಗಳ ಆಧುನೀಕರಣ	10 00			0 26	1 60		1 86	ಕಾಮಗಾರಿ ಪೂರ್ಣಗೊಂಡಿದೆ
15	ಪಾಲದಾಳ ಕೆರೆಯ ಆಧುನೀಕರಣ ಕಾಮಗಾರಿ	4072- ಕೆರೆಗಳ ಆಧುನೀಕರಣ	6 00		0 12	0 26	1 70		2 08	ಪ್ರಗತಿಯಲ್ಲಿದೆ ಕಾಮಗಾರಿ ಭೌತಿಕವಾಗಿ
16	ಬಿಟ್ಟೋಳ ಗ್ರಾಮದ ಹಳ್ಳಕ್ಕೆ ಏಕಾಪ್ ನಿರ್ಮಾಣ ಮತ್ತು ದುರಸ್ತಿ	4072-ಆಣೆಕಟ್ಟು ಏಕಪ್ ಬಂದಾರುಗಳು	3 00		3 50				3 50	ಪೂರ್ಣಗೊಂಡಿದೆ ಕಾಮಗಾರಿ ಪೂರ್ಣಗೊಂಡಿದೆ

1	2	3	4	5	6	7	8	9	10	11
17	ಹಾಲದಾಳ ಕೆರೆಯ ಒಡ್ಡು ನಿರ್ಮಾಣ	4072- ಅಣೆಕಟ್ಟು ಪಿಕಪ್ ಬಂದಾರುಗಳು	3 00		3 13				3 13	ಕಾಮಗಾರಿ ಪೂರ್ಣಗೊಂಡಿದೆ
18	ದಗಳತೋಡು ಪಿಕಪ್ ಮತ್ತು ಕಾಲುವೆ ದುರಸ್ತಿ	4072- ಅಣೆಕಟ್ಟು ಪಿಕಪ್ ಬಂದಾರಗಳು	4 00	4 17	0 39				4 56	ಕಾಮಗಾರಿ ಪೂರ್ಣಗೊಂಡಿದೆ
19	ಬೇಗೂರು ಗ್ರಾಮದ ಕೊಳ್ಳಿ ತೋಡುವಿಗ ನಿರ್ಮಾಣ	4072- ಅಣೆಕಟ್ಟು ಪಿಕಪ್ ಬಂದಾರಗಳು	5 00							ಕಾಮಗಾರಿ ಪ್ರಗತಿಯಲ್ಲಿದೆ
20	ಹಾತೂರು ಪಿಕಪ್ ಮತ್ತು ಕಾಲುವೆ ದುರಸ್ತಿ	4072- ಅಣೆಕಟ್ಟು ಪಿಕಪ್ ಬಂದಾರಗಳು	4 00	0 16	2 38	2.11			4 65	ಕಾಮಗಾರಿ ಪೂರ್ಣಗೊಂಡಿದೆ
21	ಹಾತೂರು ಪಿಕಪ್ ಮತ್ತು ಕಾಲುವೆ	4072- ಅಣೆಕಟ್ಟು ಪಿಕಪ್ ಬಂದಾರಗಳು	4 00	4 17	0 08	0 02			0 10	ಕಾಮಗಾರಿ ಪ್ರಗತಿಯಲ್ಲಿದೆ
22	ಬಾಲಾಜಿ ಅಣೆಕಟ್ಟಿನ ಎಡದಂಡೆ ನಾಲೆ 5 ಕಿ.ಮೀ ಗಳಲ್ಲಿ ದುರಸ್ತಿ ಕಾಮಗಾರಿ	4072- ಅಣೆಕಟ್ಟು ಪಿಕಪ್ ಬಂದಾರಗಳು	3 00		0 33	0 27			0 60	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ
23	ಶ್ರೀಮಂಗಲ ಅಣೆಕಟ್ಟಿನ ದುರಸ್ತಿ ಹಾಗೂ ಹೂಳು ತೆಗೆಯುವುದು	4072- ಅಣೆಕಟ್ಟು ಪಿಕಪ್ ಬಂದಾರಗಳು	4 00		0 44	1 53			1 97	ಕಾಮಗಾರಿ ಪೂರ್ಣಗೊಂಡಿದೆ
24	ಬೆಕ್ಕೆಸೊಡ್ಲುರು ಕಿಂಡಿ ಅಣೆಕಟ್ಟು ಅಭಿವೃದ್ಧಿ	4072- ಅಣೆಕಟ್ಟು ಪಿಕಪ್ ಬಂದಾರಗಳು	6 75			4 85			4 85	ಕಾಮಗಾರಿ ಪ್ರಗತಿಯಲ್ಲಿದೆ
25	ದೇವನೂರು ಅಣೆಕಟ್ಟಿನ ಏರಿ ಬಲ ಪಡಿಸುವುದು	4072- ಅಣೆಕಟ್ಟು ಪಿಕಪ್ ಬಂದಾರಗಳು	5 00		3 39	1 84			5 23	ಕಾಮಗಾರಿ ಪೂರ್ಣಗೊಂಡಿದೆ
26	ದೇವನೂರು ಅಣೆಕಟ್ಟಿನ ಬಲದಂಡೆ ಅಭಿವೃದ್ಧಿ	4072- ಅಣೆಕಟ್ಟು ಪಿಕಪ್ ಬಂದಾರಗಳು	5 00			-				ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ
27	ಹೊನ್ನಿಕೊಪ್ಪ ಅಣೆಕಟ್ಟಿನ ಕಾಲುವೆ ಅಭಿವೃದ್ಧಿ ಚೈ 4-10 ಕಿ.ಮೀ	4072- ಅಣೆಕಟ್ಟು ಪಿಕಪ್ ಬಂದಾರಗಳು	7 00			6 10	1 20		7 30	ಕಾಮಗಾರಿ ಪೂರ್ಣಗೊಂಡಿದೆ

1	2	3	4	5	6	7	8	9	10
28	ದೇವನೂರು ಅಣೆಕಟ್ಟು ಸಮಗ್ರ ಅಭಿವೃದ್ಧಿ	4072- ಅಣೆಕಟ್ಟು ಪಿಕಪ್ ಬಂದಾರಗಳು	20 00		3 39			4 56	ಕಾಮಗಾರಿ ಪೂರ್ಣಗೊಂಡಿದೆ
29	ಬಾಲಾಜಿ ಅಣೆಕಟ್ಟಿನ ಎಡದಂಡೆ ಕಾಲುವೆಯಲ್ಲಿ ಹೂಳು ತೆಗೆಯುವುದು	4072- ಅಣೆಕಟ್ಟು ಪಿಕಪ್ ಬಂದಾರಗಳು	3 00		0 20	3 10		3.30	ಕಾಮಗಾರಿ ಪೂರ್ಣಗೊಂಡಿದೆ
30	ರುದ್ರಗುಪ್ಪ ಏತ ನೀರಾವರಿ ಯೋಜನೆಯ ಅಭಿವೃದ್ಧಿ ಕಾಮಗಾರಿ	4072- ಏತ ನೀರಾವರಿ ಯೋಜನೆ	3 00		2 94			2 94	ಕಾಮಗಾರಿ ಪೂರ್ಣಗೊಂಡಿದೆ
31	ಕರಡಿಗೋಡು ಏತ ನೀರಾವರಿ ಯೋಜನೆಯ ಅಭಿವೃದ್ಧಿ ಹಾಗೂ ಪಂಪ್ ಅಳವಡಿಸುವುದು	4072- ಅಣೆಕಟ್ಟು ಏತನೀರಾವರಿ ಯೋಜನೆ	4 00	4 17	2 85			2 85	ಕಾಮಗಾರಿ ಪೂರ್ಣಗೊಂಡಿದೆ
32	ಬೆಸಗೂರು ಗ್ರಾಮದ ಕೀರ ಹೊಳೆಗೆ ಪ್ರವಾಹ ನಿಯಂತ್ರಣ ಕಾಮಗಾರಿ	4711-01 ಪ್ರವಾಹ ನಿಯಂತ್ರಣ ಕಾಮಗಾರಿ	5 00	1 54	0 50			2 04	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ
33	ಮೊನ್ನಂಪೇಟೆ ಕಾನೂರು ರಸ್ತೆ ಬದಿ ಲಕ್ಷ್ಮಣ ತೀರ್ಥ ನದಿಗೆ ಪ್ರವಾಹ ನಿಯಂತ್ರಣ ಕಾಮಗಾರಿ	4711-01 ಪ್ರವಾಹ ನಿಯಂತ್ರಣ ಕಾಮಗಾರಿ	9 91	11 08				11 08	ಕಾಮಗಾರಿ ಪೂರ್ಣಗೊಂಡಿದೆ
34	ಗೋಣಿಕೊಪ್ಪಲಿನ ಸೇತುವೆಯ ಮೇಲ್ಭಾಗ ಕೀರಹೊಳೆ ದಂಡೆಯ ಪ್ರವಾಹ ನಿಯಂತ್ರಣ ಕಾಮಗಾರಿ	4711-01 ಪ್ರವಾಹ ನಿಯಂತ್ರಣ ಕಾಮಗಾರಿ	22 00				2 16	2 16	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ
35	ಬಾಳೆಲೆ ಹೋಬಳಿ ನಲ್ಲೂರು ಗ್ರಾಮದ ಬೆಟ್ಟು ಮೂಡನಾಚಯ್ಯನ ಹೊಲದ ಬಳಿ ಕೀರೆ ಹೊಳೆ ಪ್ರವಾಹ ನಿಯಂತ್ರಣ ಕಾಮಗಾರಿ	4711-01 ಪ್ರವಾಹ ನಿಯಂತ್ರಣ ಕಾಮಗಾರಿ	5 00	0 02			1 05	1 07	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ
36	ಕೆಮ್ಮೂರು ಗ್ರಾಮದ ಪ್ರೊವಿಲಂಗದ ಗೋಪಾಲರ ಹೊಲದ ಬದಿಯಲ್ಲಿ ರಾಮತೀರ್ಥ ನದಿ ಪ್ರವಾಹ ನಿಯಂತ್ರಣ ಕಾಮಗಾರಿ	4711-01 ಪ್ರವಾಹ ನಿಯಂತ್ರಣ ಕಾಮಗಾರಿ	5 02					3 42	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ

1	2	3	4	5	6	7		8	9	10
37	ಕೊಟ್ಟೇಗೇರಿ ಗ್ರಾಮದಲ್ಲಿ ಲಕ್ಷ್ಮಣ ತೀರ್ಥ ನದಿ ಪ್ರವಾಹ ನಿಯಂತ್ರಣ ಕಾಮಗಾರಿ	4711-01 ಪ್ರವಾಹ ನಿಯಂತ್ರಣ ಕಾಮಗಾರಿ	5 00	2 05		1 20	1 25	0 19	4 69	ಕಾಮಗಾರಿ ಪೂರ್ಣಗೊಂಡಿದೆ
38	ಕೆಮ್ಮೂರು ಗ್ರಾಮದಲ್ಲಿ ರಾಮತೀರ್ಥ ನದಿ ಪ್ರವಾಹ ನಿಯಂತ್ರಣ ಕಾಮಗಾರಿ	4711-01 ಪ್ರವಾಹ ನಿಯಂತ್ರಣ ಕಾಮಗಾರಿ	3 00	3 42						ಕಾಮಗಾರಿ ಪೂರ್ಣಗೊಂಡಿದೆ
39	ಕಾನೂರು ಗ್ರಾಮದಲ್ಲಿ ಪ್ರವಾಹ ನಿಯಂತ್ರಣ ಕಾಮಗಾರಿ	4711-01 ಪ್ರವಾಹ ನಿಯಂತ್ರಣ ಕಾಮಗಾರಿ	10 65	3 77	6 48	0 79			11 04	ಕಾಮಗಾರಿ ಪೂರ್ಣಗೊಂಡಿದೆ
40	ಅರ್ಪತ್ತೊಕ್ಲು ಗ್ರಾಮದ ಎ ಬಿ ಅಯ್ಯಣ್ಣನವರ ಜಮೀನಿನ ಬಳಿ ಹರಿಯುವ ಕೇರೆ ಹೊಳೆಗೆ ಪ್ರವಾಹ ನಿಯಂತ್ರಣ ಕಾಮಗಾರಿ	4711-01 ಪ್ರವಾಹ ನಿಯಂತ್ರಣ ಕಾಮಗಾರಿ	5 00				0 10		0 10	ಕಾಮಗಾರಿ ಪ್ರಗತಿಯಲ್ಲಿದೆ
41	ನಲ್ಕೂರು ಗ್ರಾಮದಲ್ಲಿ ಕೇರೆ ಹೋಲಿಗೆ ಮಳೆ ಹಾನಿ ದುರಸ್ತಿ ಕಾಮಗಾರಿ	4711-01 ಪ್ರವಾಹ ನಿಯಂತ್ರಣ ಕಾಮಗಾರಿ	1 00		0 98				0 98	ಕಾಮಗಾರಿ ಪೂರ್ಣಗೊಂಡಿದೆ
42	ಮುಗ್ಗುತ್ತೇರಿ ಗ್ರಾಮದ ಇಗ್ಗುತ್ತಪ್ಪ ದೇವರ ಕೆರೆ ಕಾಲುವೆ ಅಭಿವೃದ್ಧಿ ಕಾಮಗಾರಿ	4702-ಕೆರೆ ಕಲ್ಯಾಣ	3 00							ಕಾಮಗಾರಿ ಪ್ರಾರಂಭಿಸಲಾಗಿದೆ
43	ರುದ್ರಗುಪ್ಪ ಏತ ನೀರಾವರಿ ಯೋಜನೆಯ ಪುನರುಜ್ಜೀವನ ಕಾಮಗಾರಿ	11ನೇ ಹಣಕಾಸು ನಿಧಿ	4 00				2 56		2 56	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ
44	ಕರಡಿಗೋಡು ಏತ ನೀರಾವರಿ ಯೋಜನೆಯ ಪುನರುಜ್ಜೀವನ ಕಾಮಗಾರಿ	11ನೇ ಹಣಕಾಸು ನಿಧಿ	10 00				5 00	4 08	9 08	ಕಾಮಗಾರಿ ಪೂರ್ಣಗೊಂಡಿದೆ
45	ಬೆಟ್ಟತ್ತೂರು ಕೆರೆಯ ಅಭಿವೃದ್ಧಿ	ರೈತ ಕಾಯಕ ಕೆರೆ	12 45							ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ
				48.07	41 85	50 10	39 97	5 32	185.31	

ಬೆಂಗಳೂರಿನಲ್ಲಿ ನಿರ್ಮಿಸುತ್ತಿರುವ ಅಸಮರ್ಪಕ ಪಾದಚಾರಿ ರಸ್ತೆಯ ಕಾಮಗಾರಿ ಕುರಿತು

13 (67) ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು (ಶಿವಾಜಿನಗರ) ಮಾನ್ಯ ಬೆಂಗಳೂರು ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಫುಟ್‌ಪಾತ್‌ಗಳಿಗೆ ಸಿಮೆಂಟ್ ಬ್ಲಾಕ್‌ಗಳನ್ನು ಉಪಯೋಗಿಸಿ ನಿರ್ಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ಫುಟ್‌ಪಾತ್ ನಿರ್ಮಾಣಕ್ಕಾಗಿ ಇದುವರೆಗೆ ಖರ್ಚು ಮಾಡಿದ ಹಣವೆಷ್ಟು

ಇ) ಈಗಾಗಲೇ ನಿರ್ಮಿಸಿರತಕ್ಕ ಈ ಫುಟ್‌ಪಾತ್ ಸಿಮೆಂಟ್ ಚಪ್ಪಡಿಗಳು ಕುಸಿದುಹೋಗಿ ಹಳ್ಳ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಈ ಕಳಪೆ ಕಾಮಗಾರಿಯ ಗುತ್ತಿಗೆಯನ್ನು ಯಾರಿಗೆ ನೀಡಲಾಗಿದೆ

ಉ) ಈ ಕಳಪೆ ಕಾಮಗಾರಿಯಿಂದ ಆಗಿರುವ ನಷ್ಟವನ್ನು ಭರ್ತಿ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ರಾಮಲಿಂಗಾರೆಡ್ಡಿ (ಬೆಂಗಳೂರು ಅಭಿವೃದ್ಧಿ ಸಚಿವರು)

ಅ) ಬಂದಿದೆ

ಆ) ರೂ 795 00 ಲಕ್ಷಗಳು

ಇ) ನಿರ್ಮಿಸಿರುವ ಫುಟ್‌ಪಾತ್‌ಗಳಲ್ಲಿ ಕೆಲವು ಕಡೆ ಓ ಎಫ್ ಸಿ ಸಂಸ್ಥೆಯವರು ಅಗೆದಿರುವ ಭಾಗಗಳಲ್ಲಿ ಹಳ್ಳ ಬಿದ್ದಿರುವುದನ್ನು ಗಮನಿಸಿದ್ದು ಈ ರೀತಿ ಅಗೆದಿರುವ ಫುಟ್‌ಪಾತ್‌ಗಳ ಸಿಮೆಂಟ್ ಬ್ಲಾಕ್‌ಗಳನ್ನು ಓ ಎಫ್ ಸಿ ಸಂಸ್ಥೆಯ ಮೂಲಕ ಸರಿಪಡಿಸಲಾಗಿದೆ

ಈ) ಫುಟ್‌ಫಾತ್ ಅಭಿವೃದ್ಧಿ ಕಾಮಗಾರಿಯನ್ನು ಕರ್ನಾಟಕ ಭೂಸೇನಾ ನಿಗಮದವರಿಗೆ ನೀಡಲಾಗಿದೆ

ಉ) ಕಾಮಗಾರಿಯನ್ನು ವಿಶಿಷ್ಟ ವಿವರಣೆಗಳ ಪ್ರಕಾರ ಮಾಡಿ ಗುಣಮಟ್ಟವನ್ನು ಕಾಪಾಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ರಾಜ್ಯದಲ್ಲಿ ನಡೆಯುತ್ತಿರುವ ರೈತರ ಆತ್ಮಹತ್ಯೆ ಪ್ರಕರಣ ಕುರಿತು

14 (167) ಶ್ರೀ ಎಸ್ ರವೀಂದ್ರನಾಥ (ಮಾಯಕೊಂಡ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಇತ್ತೀಚೆಗೆ ನಡೆಯುತ್ತಿರುವ ರೈತರ ಆತ್ಮಹತ್ಯೆ ಪ್ರಕರಣಗಳ ವಿಚಾರಣೆ ತನಿಖೆಗೆ ಮಾನವ ಹಕ್ಕು ಆಯೋಗ ತಯಾರಿ ನಡೆಸಿದೆಯೇ

ಆ) ಮಾನವ ಹಕ್ಕು ಆಯೋಗದ ತನಿಖೆಗೆ ಸರ್ಕಾರದ ಸಮ್ಮತಿ ಇದೆಯೇ

ಇ) ಈ ತನಿಖೆಯನ್ನು ಆಯೋಗವು ಸ್ವತ ಮಾಡಬಹುದೇ ಅಥವಾ ಆಯೋಗಕ್ಕೆ ಯಾರಾದರೂ ದೂರು ನೀಡಬೇಕೆ

ಈ) ಕೊಪ್ಪಳದ ಸಾಮೂಹಿಕ ಆತ್ಮಹತ್ಯೆ ಪ್ರಕರಣದ ಕುರಿತು ಆಯೋಗಕ್ಕೆ ದೂರು ನೀಡಿರುವವರು ಯಾರು ಆಯೋಗದ ತನಿಖೆ ಕಾರ್ಯ ಪ್ರಗತಿಯಲ್ಲಿದೆಯೇ? (ವಿವರನೀಡಿ)

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ಈ ಬಗ್ಗೆ ಸರ್ಕಾರದಲ್ಲಿ ವರದಿ ಸ್ವೀಕೃತಿಯಾಗಿರುವುದಿಲ್ಲ

ಆ) ಉದ್ಭವಿಸುವುದಿಲ್ಲ

ಇ) ತನಿಖೆಯನ್ನು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಸ್ವತ ಮಾಡಬಹುದು ಅಥವಾ ಯಾರಾದರೂ ದೂರು ಸಲ್ಲಿಸಿದಲ್ಲಿ ಸಹ ಮಾಡಬಹುದು

ಈ) 1 ಮತ್ತು 2ರ ಮೇರೆಗೆ ಉದ್ಭವಿಸುವುದಿಲ್ಲ

ಬೆಂಗಳೂರು ನಗರದಲ್ಲಿ ರೈಲ್ವೆ ಮೇಲು ಸೇತುವೆಗಳ ಅಗಲೀಕರಣದ ಬಗ್ಗೆ

15 (43) ಶ್ರೀ ದಿನೇಶ್ ಗುಂಡೂರಾವ್, (ಗಾಂಧೀನಗರ) ಮಾನ್ಯ ಬೆಂಗಳೂರು ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಕಿರಿದಾದ ರೈಲ್ವೆ ಮೇಲುಸೇತುವೆಗಳಿಂದ ವಾಹನ ಸಂಚಾರಕ್ಕೆ ಅಡಚಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಸಂಚಾರಕ್ಕೆ ಅಡಚಣೆಯಾಗುತ್ತಿರುವ ಯಾವ ಯಾವ ಪ್ರದೇಶಗಳನ್ನು ಮಹಾನಗರ ಪಾಲಿಕೆ ಗುರುತಿಸಿದೆ

ಇ) ಈ ರೀತಿ ಗುರುತಿಸಿದ ರೈಲ್ವೆ ಮೇಲುಸೇತುವೆಗಳ ಅಗಲೀಕರಣಕ್ಕೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ರಾಮಲಿಂಗಾರೆಡ್ಡಿ (ಬೆಂಗಳೂರು ಅಭಿವೃದ್ಧಿ ಸಚಿವರು)

ಅ) ಹೌದು

ಆ) ಸಂಚಾರಕ್ಕೆ ಅಡಚಣೆಯಾಗುತ್ತಿರುವ ಪ್ರದೇಶಗಳನ್ನು ಮಹಾನಗರ ಪಾಲಿಕೆಯು ಗುರುತಿಸಿದ್ದು ಪ್ರದೇಶಗಳ ವಿವರ ಕೆಳಗಿನಂತಿದೆ

1 ಮಾಧವನಗರ
2 ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣದ ಬಳಿ
3 ಫ್ರೇಜರ್ ಟೌನ್ ಪೊಲೀಸ್ ಸ್ಟೇಷನ್ ಬಳಿ
4 ಸಿಟಿ ರೈಲ್ವೆ ನಿಲ್ದಾಣದ ಬಳಿ
5 ಐ ಟಿ ಸಿ ಕಾರ್ಖಾನೆ ಬಳಿ
6 ಲಿಂಗರಾಜಪುರ
7 ಬಾಣಸವಾಡಿ
8 ಬೈಯಪ್ಪನಹಳ್ಳಿ
9 ಗೋಕುಲ
10 ಆರ್ ಪಿ ಸಿ ಲೇಔಟ್

ಆ) ಈ ರೀತಿ ಗುರುತಿಸಿದ ಪ್ರದೇಶಗಳಲ್ಲಿ ಕೈಗೊಂಡಿರುವ ಕ್ರಮಗಳ ವಿವರ ಕೆಳಗಿನಂತಿದೆ

1 ಫ್ರೆಜರ್ ಟೌನ್ ಪೊಲೀಸ್ ಸ್ಟೇಷನ್ ಬಳಿ ರೈಲ್ವೆ ಕೆಳ ಸೇತುವೆ ಕಾಮಗಾರಿ ಪೂರ್ಣಗೊಂಡಿರುತ್ತದೆ

2 ಮಾಧವನಗರ ರೈಲ್ವೆ ಕೆಳಸೇತುವೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ

3 ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣದ ಬಳಿ ರೈಲ್ವೆ ಕೆಳ ಸೇತುವೆ ಕಾಮಗಾರಿಗ ಟೆಂಡರ್ ಕರೆಯಲಾಗಿದೆ

4 ಸಿಟಿ ರೈಲ್ವೆ ನಿಲ್ದಾಣದ ಹತ್ತಿರ ರೈಲ್ವೆ ಕೆಳ ಸೇತುವೆ ನಿರ್ಮಾಣದ ಕಾಮಗಾರಿಗೆ ಜನರಲ್ ಅಲೈನ್‌ಮೆಂಟ್ ಡ್ರಾಯಿಂಗ್ ತಯಾರಿಸಲಾಗಿದೆ

5 ಲಿಂಗರಾಜಪುರ ಆರ್ ಓ ಬಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ

6 ಇಂಡಿಯನ್ ಆಯಿಲ್ ಬ್ರಿಡ್ಜ್ ಹತ್ತಿರ ರೈಲ್ವೆ ಮೇಲು ಸೇತುವೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ

7 ಐ ಟಿ ಸಿ ಕಾರ್ಖಾನೆ ಬಳಿ ರೈಲ್ವೆ ಮೇಲು ಸೇತುವೆ ಕಾಮಗಾರಿಗೆ ಜನರಲ್ ಅಲೈನ್‌ಮೆಂಟ್ ಡ್ರಾಯಿಂಗ್ ತಯಾರಿಸಲಾಗಿದೆ

8 ಬೈಯಪ್ಪನಹಳ್ಳಿ ಕಾಮಗಾರಿಗೆ ರೈಲ್ವೆ ಮೇಲು ಸೇತುವೆ ಜಿಎಡಿ ತಯಾರಿಸಲಾಗಿದೆ

9 ಗೋಕುಲ ರೈಲ್ವೆ ಮೇಲು ಸೇತುವೆ ಕಾಮಗಾರಿಗೆ ಜನರಲ್ ಅಲೈನ್‌ಮೆಂಟ್ ಡ್ರಾಯಿಂಗ್ ತಯಾರಿಸಲಾಗಿದೆ

10 ಆರ್ ಪಿ ಸಿ ಲೇಔಟ್ – ರೈಲ್ವೆ ಓವರ್ ಬ್ರಿಡ್ಜ್ ನಿರ್ಮಿಸುವ ಕಾಮಗಾರಿಯನ್ನು 2004–05 ನೇ ಸಾಲಿನ ಆಯವ್ಯಯದಲ್ಲಿ ಸೇರಿಸಿಕೊಳ್ಳಲಾಗುವುದು

ದಿನಾಂಕ 6 1 2004 ರ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರ

ಮಲೆನಾಡು ಪ್ರದೇಶಭಿವೃದ್ಧಿ ಮಂಡಳಿಯ ವತಿಯಿಂದ ಬಿಡುಗಡೆ ಮಾಡಿರುವ ಅನುದಾನದ ಬಗ್ಗೆ

1 (271) ಶ್ರೀ ಅಂಗಾರ ಎಸ್ (ಸುಳ್ಯ) ಮಾನ್ಯ ಕಾನೂನು ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗ ಉತ್ತರಿಸುವರೆ?

ಅ) ಮಲೆನಾಡು ಪ್ರದೇಶಾಭಿವೃದ್ಧಿ ವತಿಯಿಂದ ಸುಳ್ಯ ವಿಧಾನ ಸಭಾ ಕ್ಷೇತ್ರಕ್ಕೆ ಇದುವರೆಗೆ ಎಷ್ಟು ಮೊತ್ತದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ

ಆ) ಕೈಗೆತ್ತಿಕೊಂಡ ಕಾಮಗಾರಿಗಳಿಗೆ ಈವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ, ಇನ್ನೂ ಎಷ್ಟು ಹಣ ಬಿಡುಗಡೆ ಮಾಡಬೇಕಾಗಿದೆ

ಇ) ಬಾಕಿ ಇರುವ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಡಿ ಬಿ ಚಂದ್ರೇಗೌಡ (ಕಾನೂನು ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು)

ಅ) ಈವರೆಗೂ 103 80, ಲಕ್ಷ ರೂಗಳ ಮೊತ್ತದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ

ಆ) 6 48 ಲಕ್ಷ ರೂ ಗಳು
77 32 ಲಕ್ಷ ರೂ ಗಳು

ಇ) ಸಂಪನ್ಮೂಲಗಳನ್ನಾಧರಿಸಿ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಕೈಗೆತ್ತಿಕೊಂಡಿರುವ ಕಾಮಗಾರಿಗಳ ಬಗ್ಗೆ

2 (415) ಶ್ರೀ ಅಂಗಾರ ಎಸ್ (ಸುಳ್ಯ) ಮಾನ್ಯ ಕಾನೂನು ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಅಸ್ಥಿತ್ವಕ್ಕೆ ಬಂದಾಗಿನಿಂದ ಈವರೆಗೆ ಸುಳ್ಯ ವ್ಯಾಪ್ತಿಯಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ

ಆ) ಕೈಗೆತ್ತಿಕೊಳ್ಳಲಾದ ಕಾಮಗಾರಿಗಳಲ್ಲಿ ಎಷ್ಟು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ಎಷ್ಟು ಕಾಮಗಾರಿಗಳು ಪ್ರಗತಿಯಲ್ಲಿದೆ (ಕಾಮಗಾರಿವಾರು, ವರ್ಷವಾರು ಮಾಹಿತಿ ನೀಡುವುದು)

ಶ್ರೀ ಡಿ ಬಿ ಚಂದ್ರೇಗೌಡ (ಕಾನೂನು ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು)

ಅ) ಮತ್ತು ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ANNEXURE -I

MALNAD AREA DEVELOPMENT BOARD SHIMOGA

LIST OF COMPLETED WORK

CONSTITUENCY SULYA

SL No	NAME OF THE WORKS	YEAR OF SANCTION	ESTD COST
1	2	3	4
1	Asphaltıng to Maradala Kermaı rd	93 94	2 00
2	Alankar Sharavoor rd	93-94	2 00
3	Athoor Haleneranki rd	93-94	4 50
4	Asphaltıng to Sunkadakatte Balnadka rd	93-94	1 96
5	Asphaaltıng to Ballya Nellyady rd	93-94	2 00
6	Const Of brıdge at Panja Guthıgar rd	93-94	7 20
7	Constn Of brıdge at Mandala Kodıalbaılu Ammanı Rd	93-94	10 00
8	Asphlt At Allettı Badda DKA-Panatadi rd	93-94	2 00
9	Sulya Tq Guthıgar Mandala S C Colony Rd Impts	93-94	2 93
10	Constn Of Foot brıdge ın Kodıala Grama Kallagadde near templl	93-94	0 58
11	Constn Of Foot brıdge at Kalmadka	93-94	0 35
12	Constn Of Foot brıdge at Aruwara Choman Gowda house opp ın Kodıyala Vıllage	93-94	0 38
13	Asplt Of Jalsur Mandala Kanka rd	93-94	2 00
14	Constn Of Foot brıdge at Ubaradka Grama Paladka for Kamdadka lake	93-94	6 00
15	Constn of Womens Socıety buıldıng	93-94	3 55

1	2	3	4
	YEAR 1994-1995		
16	Asplt to Mardhala Kermai rd	94-95	3 15
17	Hosmata Karkala Hallangeri Kutrupady rd	94-95	4 00
18	Kadaba Rajiv Gandhi rd	94-95	1 50
19	Hosmata Ulipu rd	94-95	3 15
20	Noojibalthila Berike anganawadi building	94-95	0 625
21	Belandoor Amai anganawadi building	94-95	0 195
22	Asplt at Allctti grama Allctti Kolnaru-Bamdouadla rd	94-95	3 00
23	Asplt Of Inekidu-Harihara-Subrahmanya rd	94-95	2 00
24	Foot bridge constn In Kodiala grama Moovappe	94-95	0 705
25	Bridge protection work at Guthigau Mandala Ballaka	94-95	1 00
26	M W S at Ivernadu grama rubber factory S C Colony	94-95	1 28
27	M W S to Ivernadu grama Kotiyalla S C Colony	94-95	1 55
28	Asplt Of Sevaja Modappady rd	94-95	2 00
29	Asplt Of Halegate- Jayanagara rd	94-95	1 45
30	Asplt Of Kerpala A K Colony rd	94-95	1 47
31	Asplt Of Doddathota rd	94-95	3 22
32	Constn Of Playground Nelluru Kemraje Naranakaje GMPS	94-95	1 00
	YEAR 1995 - 1996		
33	Asplt To Koila Valakadama rd	95-96	2 00
34	Constn Of Link rd to Mundaje Dharmastala rd bridge	95-96	1 50

1	2	3	4
	YEAR 1996-1997		
35	Const Of culvert Anthibettu in Ithuru Village	96-97	1 00
36	Charvaka Muduva Kapileshwara rd	96-97	1 00
37	Asplt to Ballya Nellyady rd	96-97	1 00
38	Asplt to Kodimbala Kermai rd	96-97	1 00
39	Kunthoor Mapala Surli rd	96-97	1 00
40	Constn Of drainage from Sullia Police	96-97	1 00
41	Impts To Biliyaru - Ubaradka	96-97	2 00
42	Constn Of Drainage at Sullia Town	96-97	1 00
43	Constn Of Thodikana Adyadka rd	96-97	0 88
44	Re-asplt of Balpa Grama Balpa S C Colony	96-97	2 00
45	Impts To Nadugallu Kalmakku rd near Gadikallu bridge	96-97	1 00
	YEAR 1997-1998		
46	Play ground to Kanivur College	97-98	1 00
47	Ballya Nellyadi rd	97-98	2 00
48	Asplt to Saravoor Hosangady rd	97-98	2 00
49	Culvert to Ermail in Bilinele village	97-98	1 00
50	Culvert to Oggu in Bilinele village	97-98	2 00
51	Asplt to Koila Volakadama rd	97-98	1 24
	YEAR 1999-2000		
52	Asplt to valakanive road	1997-98	1 240
53	Const Of road bridge Jalakada hole	1997-98	1 800
54	Asplt of Panja road	1997-98	2 000
55	Asplt of Paika Harijana colony 0 60 to 0,80	1997-98	1 000
56	Const of bailu bridge joint road	1997-98	1 000
57	Const Of armburr majagundi paladka anjaguru road	1997-98	1 000

1	2	3	4
58	Katte govinda nagar road	1997-98	2 000
59	Asplt of Harijana colony road	1997-98	2 000
60	Water supply abbarahidlu	1997-98	1 750
	YEAR 2000-2001		
61	Constn Of bridge at Patlatimmuru	1996-97	7 300
62	Impts To Kallugudde hullati temple rd	1996-97	3 000
63	Asplt to Savnoor road	1997-98	2 000
64	Const Of drainage at Yermale	1997-98	0 900
65	Const Of drainage at Oggu	1997-98	2 100
66	Const Of bridge at Barpani	1994-95	8 900
67	Impts To S C colony road	1997-98	2 000
68	Asplt to Ajjavara road 3 7 to 4 40 k m	1997-98	1 000
69	Asplt to selected part of pulikukku rd	1997-98	1 000
70	Impts To Nenala mundood S C colony	1998-99	1 000
71	Const Of drainage at Atkaru S C Colony	1997-98	2 000
72	Const Of drainage at Biliyaru Mittinaddakka bailu road	1998-99	2 000
73	Const Of drainage at dasanakaje S c Colony	1998-99	1 000
74	Re-asplt to kalmakaru road	1998-99	1 650
75	Impts To salamajalu udradaka s c Colony Road	1998-99	0 500
76	Const Of bridge across chamadakka river	1998-99	5 000
77	Const Of foot bridge at jaligudi s t Colony at jalakada river	1998-99	2 000
78	Impts To road at paika s c Colony	1997-98	1 000
79	Impts To yelimale Kallappene s c Colony road	1997-98	1 500

1	2	3	4
80	Asplt to dummi masjid front road	1997-98	1 700
81	Water supply to danduguri S c colony	1994-95	2 000
82	Water supple to Asanthadaka s c Colony	1994-95	2 000
	YEAR . 2001-2002		
83	Impt Thohala majalu urbaradka at pandyagadde in panja village	2000-01	3 000

WORKS UNDER PROGRESS

SL No	Village	Name of work	Year of Sanction	Impt Agency	Esti Cost
1	2	3	4	5	6
	ROADS & BRIDGES				
1	KOLLAMOGARU	CONSTRUCTION OF BRIDGE AT INDNURU	93-94	ZPE	9 750
2	GUTHIGARU	CONSTRUCTION OF BRIDGE AT PANJA GUTHIGARU ROAD AT BAKILA RIVER	93-94	ZPE	9 000
3	DOODATHOTA	ASPHALTING TO SELECTED PARTS OF ROAD (600 MTRS)	97-98	ZPE	2 00
4	AJJAYARA	IMPTS TO MULYAS COLONY ROAD	97-98	ZPE	2 000
5	NELLURUKEM-RAJE	FORMATION OF ROAD NELLURU KEMRAJE DASANAKAJE SC COLONY	97-98	ZPE	1 750
6	JALSOOR	CONSTRUCTION OF CRAINAGE AT AOKAR SO COLONY	97-98	ZPE	2 000

1	2	3	4	5	6
7	GUTHIGARU	CONSTRUCTION OF BRIDGE AT BALAPA ROAD KAMILA RIVER	98-99	ZPE	13 000
8	MAVINAKATTE	CONSTRUCTION OF BRIDGE AT KANDRAPPADI KOLLAMOGRU ROAD AT 5KM SHIRADI	98-99	ZPE	12 000
9	AJJAVARA TENDER	IMPROVEMENT TO MENALA MUNDODI SO COLONY	98-99	ZPE	1 000
10	DASANAKAJE	IMPTS TOOASABAJAHE SI COLONY ROAD	98-99	ZPE	2 000
11	ALETTY	ASPHALTING TO CHAMADKA PYLOOR ROAD	98-99	ZPE	2 200
12	AMARA MUD NOOR	ASPHALTING TO CHAMADKA PYLOOR ROAD	98-99	ZPE	2 000
13	SAMPAJE	ASPHALTING TO SAMPAJE GAOIKALL JUMMA MASSID SONI ROAD	98-99	ZPE	1 700
14	AMARA MUDNUR	IMPTS TOCHAMACKA PYLAR ROAD	99-00	ZPE	2 000
15	ADPANGAYA	IMPTS TO AJJAYARA MANDEKOLU ROAD	99-00	ZPE	2 000
16	ALETTY	IMPTS TO NARKODU KUMBAKODU KOLLHARU ROAD	99-00	ZPE	3 000

1	2	3	4	5	6
17	DEVACHALLA	IMPROVEMENT TO MAVINAKATTE KANDRAPPADI KOLLAMOGRU ROAD(MADAPPADY)	99-00	ZPE	3 000
18	GUTIIGARU	IMPTS TO HALEMAJALU UBARADKA SC COLONY ROAD	00-01	ZPE	1 000
19	DOODDATHOTA	IMPTS TO DODDATHOTA MARKANJA ROAD	01-02	ZPE	1 000
20	ARANTHODU	CONSTRUCTION OF KALUBAILU BRIDGE AT ARANTHODU VILLAGE	01-02	ZPE	4.500
21	NARNAKAJE	CONSTRUCTION OF CONVERTY AT NARANAKAJE DASANAKARE	01-02	ZPE	5 000
22	KOLLAMOGRU	ADDITIONAL WORK AT IDNOOR BRIDGE AT KOLLAMOGRU VILLAGE	01-02	ZPE	5 500
23	IVARNANDU	REPAIR SCHOOL BUILDING AT BANGAMALE IVERNADU VILLAGE	01-02	ZPE	1 000
24	SAMPAJE	CONSTRUCTION OF SAMPAJE SABHABHAVANA BUILDING	01-02	ZPE	1 500

1	2	3	4	5	6
25	SULYA KASABA	RETAINING WALLS AT KANDADKA BRIDGE AT SULLIA KASABA VILLAGE	01-02	ZPE	2 000
26	YENEKALLU	IMPTS TO FISH POND FROM ADLFJAD TO KAVU TO ENEKALLU VILLAGE	01-02	ZPE	2 000
27	IVATHOKALU	CONST OF BRIDGE AT PANDIGADDE OF IV ATHOKALU VILLAGE	01-02	ZPE	3 000
28	SULYA	ASPHALT TO PUMP HOUSE ROAD IN SUKLLYA TOWN	02-03	ZPE	1.500
29	BETTAMPADI	CONST TO CULVERT AND ASPHALTING TO BETTAMPADI OLD GATE ROAD IN SULLY TO	02-03	ZPE	2 000
30	MANDE KOLU	DEP OF MAVAJI SHIV AJINAGAR ROAD AT MANDE KOLU VILLAGE.	03-04	ZPE	4 00
GRAND TOTAL 30 WORKS 103		800, 26 830, 77,320, 7 500			

ಐ ಆರ್ ಪಾಲಿಟೆಕ್ನಿಕ್ ಮೂಲಕ ಲಗ್ಗೆರೆಗೆ ಸೇರುವ ಮುಖ್ಯರಸ್ತೆಯ ಡಾಂಬರೀಕರಣದ ಬಗ್ಗೆ

4 (19) ಶ್ರೀ ಅಶೋಕ್ ಆರ್ (ಉತ್ತರಹಳ್ಳಿ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಾಸರಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ಬರುವ ಮುಖ್ಯ ರಸ್ತೆಯಿಂದ (ಸೋನಾಲ್ ಗಾರ್ಮೆಂಟ್ಸ್ ಹತ್ತಿರದಿಂದ ಐ ಆರ್ ಪಾಲಿಟೆಕ್ನಿಕ್ ಮೂಲಕ ಲಗ್ಗೆರೆ ಮುಖ್ಯ ರಸ್ತೆಗೆ ಸೇರುವ ರಸ್ತೆಯು) ಅತ್ಯಂತ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಸದರಿ ರಸ್ತೆಯಲ್ಲಿ ದಿನನಿತ್ಯ ಸಾವಿರಾರು ಜನರು ಹಾಗೂ ವಾಹನಗಳು ಓಡಾಡುತ್ತಿದ್ದು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ಹಾಗಿದ್ದಲ್ಲಿ ಸದರಿ ರಸ್ತೆಯನ್ನು ದುರಸ್ಥಿಗೊಳಿಸಿ ಡಾಂಬರೀಕರಣಗೊಳಿಸಲು ಯಾವ ಕ್ರಮವನ್ನು ಕೈಗೊಳ್ಳಲಾಗುವುದು?

ಶ್ರೀ ಡಿ ಕೆ ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

ಅ) ಹೌದು

ಆ) ಹೌದು

ಇ) ನಗರ ಸಭೆಯ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು

ಹೊರ ವರ್ತುಲ ರಸ್ತೆಯ ಡಾಂಬರೀಕರಣದ ಬಗ್ಗೆ

5 (20) ಶ್ರೀ ಆರ್ ಅಶೋಕ್, ಎಂ ಎಲ್ಎ (ಉತ್ತರಹಳ್ಳಿ) ಮಾನ್ಯ ಬೆಂಗಳೂರು ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಂಠೀರವ ಸ್ಟುಡಿಯೋದ ಹತ್ತಿರ ಹಾದು ಹೋಗುವ ಹೊರ ವರ್ತುಲ ರಸ್ತೆಯಿಂದ ಸುಭಾಷ್ ಚಂದ್ರ ಬೋಸ್ ವೃತ್ತದಿಂದ ಆರಂಭವಾಗಿ ಜಾಲಹಳ್ಳಿ ಕ್ರಾಸ್‌ಗೆ ಅಂದರೆ ಎನ್ ಹೆಚ್-4 ಗೆ ಸೇರುವ ರಸ್ತೆಯ ಡಾಂಬರೀಕರಣಕ್ಕೆ ಈ ಹಿಂದೆ ಸುಮಾರು ರೂ 20 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದರೂ ರಸ್ತೆಯು ಪೂರ್ತಿ ಡಾಂಬರೀಕರಣ ವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ಸದರಿ ರಸ್ತೆಯ ಪೂರ್ಣ ಡಾಂಬರೀಕರಣವನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ರಾಮಲಿಂಗರೆಡ್ಡಿ (ಬೆಂಗಳೂರು ಅಭಿವೃದ್ಧಿ ಸಚಿವರು)

ಅ) ಕಂಠೀರವ ಸ್ಟುಡಿಯೋ ಹತ್ತಿರದ ವರ್ತುಲ ರಸ್ತೆಯಿಂದ (ಸುಭಾಷ್‌ಚಂದ್ರಭೋಸ್ ವೃತ್ತ) ಜಾಲಹಳ್ಳಿ ವೃತ್ತದವರೆಗೆ (ಎನ್ ಹೆಚ್-4) ಜೋಡಿ ರಸ್ತೆಯ ಉದ್ದ 3 20 ಕಿ ಮೀ ಗಳು ಇದರಲ್ಲಿ ವರ್ತುಲ ರಸ್ತೆಯಿಂದ ಲಗ್ಗೆರೆ ಮುಖ್ಯ ರಸ್ತೆಯವರೆಗೆ 1 30 ಕಿ ಮೀ ಜೋಡಿ ರಸ್ತೆಗೆ ಡಾಂಬರೀಕರಣ ಮಾಡಲು ಒಟ್ಟು 33 00 ಲಕ್ಷ ರೂ ಗಳಿಗೆ ಅಂದಾಜುಗಳು ಮಂಜೂರಾಗಿದ್ದು, ಈ ಕೆಲಸವನ್ನು ಮಾಡಿ ಮುಗಿಸಲಾಗಿದೆ

ಆ) ಉಳಿದ ಭಾಗದ ರಸ್ತೆ ಅಂದರೆ ಲಗ್ಗೆರೆ ಮುಖ್ಯ ರಸ್ತೆಯಿಂದ ಜಾಲಹಳ್ಳಿ ವೃತ್ತದವರೆಗೆ 1 90 ಕಿ ಮೀ ಉದ್ದದ ರಸ್ತೆಯನ್ನು ಡಾಂಬರೀಕರಣ ಮಾಡಲು ಮುಂದಿನ ವರ್ಷದ ಅನುದಾನದಲ್ಲಿ ಅಳವಡಿಸಿಕೊಂಡು ಕಾರ್ಯಗತಗೊಳಿಸಲು ಕ್ರಮ ಜರುಗಿಸಲಾಗುವುದು

ರಾಜ್ಯದಲ್ಲಿ ಜಾರಿಗೆ ಬಂದಿರುವ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯ ನ್ಯೂನತೆಗಳ ಬಗ್ಗೆ

6 (183) ಶ್ರೀ ಆತ್ಮಾನಂದ ಎಂ ಎಸ್ (ಮಂಡ್ಯ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಾರಿಗೆ ತರಲಾಗಿರುವ ಸ್ವಯಂ ಘೋಷಿತ ಆಸ್ತಿತೆರಿಗೆ ಪದ್ಧತಿಯಲ್ಲಿ ಆಸ್ತಿಯ ಮೌಲ್ಯಮಾಪನ ಹಾಗೂ ತೆರಿಗೆ ನಿರ್ಧಾರ ಮಾಡುವ ಪದ್ಧತಿಯಲ್ಲಿ ಅನೇಕ ಅವೈಜ್ಞಾನಿಕ ಅಂಶಗಳು, ವೈರುಧ್ಯಮಗಳು ಮತ್ತು ನ್ಯೂನತೆಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಅ) ಇದರಿಂದಾಗಿ, ಸಾರ್ವಜನಿಕರು, ಆತಂಕಕ್ಕೆ ಒಳಗಾಗಿರುವುದನ್ನು ಸರ್ಕಾರವು ಮನಗಂಡಿದೆಯೇ,

ಇ) ಸೆಕ್ಷನ್ 45 (ಬಿ) ಅನ್ನು ಪರಿಷ್ಕರಿಸಿ ವೈಜ್ಞಾನಿಕವಾಗಿ ಆಸ್ತಿ ಮೌಲ್ಯ ಮತ್ತು ತೆರಿಗ ನಿರ್ಧಾರಿಸುವ ಪದ್ಧತಿಯನ್ನು ರಾಜ್ಯದ ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಜಾರಿಗೆ ತರಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಡಿ ಕೆ ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

ಅ) ಬಂದಿದೆ

ಆ) ಹೌದು

ಇ) ಈಗಾಗಲೇ ಕಂದಾಯ ಇಲಾಖೆಯಲ್ಲಿ ಕರ್ನಾಟಕ ಮುದ್ರಾಂಕ ಕಾಯ್ದೆ ಕಲಂ 45ಬಿ ರನ್ವಯ 2004–05 ನೇ ಸಾಲಿನ ಆಸ್ತಿ ಮೌಲ್ಯ ನಿರ್ಧರಿಸಲು ಸಮಿತಿಗಳನ್ನು ರಚಿಸಿ ಆದೇಶ ಹೊರಡಿಸಲಾಗಿದೆ

ರಾಜ್ಯದಲ್ಲಿ ಕೃಷಿ ನೀರಾವರಿ ಸೌಲಭ್ಯಕ್ಕಾಗಿ ಬಳಸುವ ಐ ಪಿ ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಒದಗಿಸುವ ಬಗ್ಗೆ

8 (185) ಶ್ರೀ ಆತ್ಮಾನಂದ ಎಂ ಎಸ್ (ಮಂಡ್ಯ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿಗಾಗಿ ಉಪಯೋಗಿಸುವ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ನೀಡಲು, ಕೃಷಿಕರಿಂದ ಅರ್ಜಿಗಳನ್ನು ಸ್ವೀಕರಿಸುತ್ತಾ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಕೃಷಿಯ ಪಂಪ್‌ಸೆಟ್‌ಗಳಿಗೆ ವಿದ್ಯುತ್ ನೀಡಲು ನಿರ್ಬಂಧ ಇದೆಯೇ

ಆ) ಕೃಷಿಯಲ್ಲಿ ನೀರಾವರಿ ಸೌಲಭ್ಯಕ್ಕಾಗಿ ಐ ಪಿ ಸಟ್ ಗಳಿಗೆ ಹೊಸದಾಗಿ ಯಾವಾಗಿನಿಂದ ವಿದ್ಯುತ್ ಸಂಪರ್ಕ ಒದಗಿಸಲಾಗುವುದು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಕೃಷಿ ಪಂಪ್‌ಸೆಟ್‌ಗಳಿಗಾಗಿ ವಿದ್ಯುತ್ ಸಂಪರ್ಕ ಕೋರಿ ಬರುವ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ ಕಪ್ಪು ಹಾಗೂ ಬೂದು ತಾಲ್ಲೂಕುಗಳನ್ನು ಹೊರತು ಪಡಿಸಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ನೀಡಲು ನಿರ್ಬಂಧ ಇರುವುದಿಲ್ಲ

ಆ) ಪ್ರಸ್ತುತ ನೀರಾವರಿ ಪಂಪ್‌ಸೆಟ್‌ಗಳಿಗೆ ಹೊಸದಾಗಿ ಸ್ವಯಂ ಪರಿವರ್ತಕ ಹೊಂದುವ ಯೋಜನೆ ಎಂಬ ಹೊಸ ಯೋಜನೆ (Own Your Transformer) ಅಡಿಯಲ್ಲಿ ವಿದ್ಯುತ್ ಸಂಪರ್ಕ ನೀಡಲಾಗುತ್ತಿದೆ

ಮಂಡ್ಯ ನಗರದಲ್ಲಿ ಕುಡಿಯುವ ನೀರಿನ ವಿತರಣಾ ವ್ಯವಸ್ಥೆಯ ಆಧುನೀಕರಣದ ಬಗ್ಗೆ

10 (187) ಶ್ರೀ ಎಂ ಎಸ್ ಆತ್ಮಾನಂದ (ಮಂಡ್ಯ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ನಗರದಲ್ಲಿನ ಪ್ರಸ್ತುತ ಕುಡಿಯುವ ನೀರಿನ ಯೋಜನೆಯಲ್ಲಿನ ವಿತರಣಾ ವ್ಯವಸ್ಥೆಯನ್ನು ಬಲಪಡಿಸಿ ಆಧುನೀಕರಣಗೊಳಿಸಬೇಕಾದ ಅವಶ್ಯಕತೆಯನ್ನು ಸರ್ಕಾರವು ಮನಗಂಡಿದೆಯೇ

ಆ) ಹಾಗಿದ್ದಲ್ಲಿ ಸರ್ಕಾರವು ಈ ದಿಶೆಯಲ್ಲಿ ಕೈಗೊಂಡಿರುವ ಕ್ರಮಗಳೇನು

ಇ) ಕುಡಿಯುವ ನೀರಿನ ವಿತರಣಾ ವ್ಯವಸ್ಥೆಯನ್ನು ಬಲಪಡಿಸುವ ಮತ್ತು ಆಧುನೀಕರಣಗೊಳಿಸುವ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಸ್ ಎಂ ಕೃಷ್ಣ (ಮುಖ್ಯ ಮಂತ್ರಿಗಳು)

ಅ) ಹೌದು

ಆ) ಮಂಡ್ಯ ನಗರದ ನೀರು ಸರಬರಾಜು ವಿತರಣಾಜಾಲದ ಆಧುನೀಕರಣ ಮತ್ತು ಮೊದಲನೇ ಹಂತದ ನೀರು ಸರಬರಾಜು ಯೋಜನೆಯ ಪುನರುಜ್ಜೀವನಗೊಳಿಸುವ ಯೋಜನೆಗೆ ರೂ 675 ಲಕ್ಷಗಳಿಗೆ ಅಂದಾಜನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿದ್ದು, ಪರಿಶೀಲನೆಯಲ್ಲಿದೆ

ಇ) ಪರಿಶೀಲನೆಯಲ್ಲಿದೆ

ಪ್ರತಿ ಜಿಲ್ಲಾ ಎಸ್ ಪಿ ಕಛೇರಿಯಲ್ಲಿ ಪಾಸ್‌ಪೋರ್ಟ್ ನೀಡುವ ಅಧಿಕಾರದ ಬಗ್ಗೆ

12 (274) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಾಸ್‌ಪೋರ್ಟ್ ಕಛೇರಿಗಳು ಎಷ್ಟಿವೆ

ಆ) ಆಯಾ ಜಿಲ್ಲೆಗಳಲ್ಲಿ ಎಸ್ ಪಿ ಯವರಿಗೆ ಪಾಸ್‌ಪೋರ್ಟ್ ನೀಡುವ ಅಧಿಕಾರ ಕೊಡುವ ಕುರಿತು ಸರ್ಕಾರದ ಕ್ರಮ ಕೈಗೊಂಡಿದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ)

ಅ) ರಾಜ್ಯದಲ್ಲಿ ಒಂದು ರಿಜಿನಲ್ ಪಾಸ್‌ಪೋರ್ಟ್ ಕಛೇರಿ, ಬೆಂಗಳೂರಿನಲ್ಲಿದೆ (ಈ ಕಛೇರಿ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ)

ಆ) ಉದ್ಭವಿಸುವುದಿಲ್ಲ

ಉತ್ತರ ಕರ್ನಾಟಕ ಭಾಗದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಕುರಿತು

14 (277) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕರ್ನಾಟಕದ ಭಾಗದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ವಿಚಾರ ಈಗ ಯಾವ ಹಂತದಲ್ಲಿದೆ,

ಆ) ಹೈಕೋರ್ಟ್ ಪೀಠ ಸ್ಥಾಪನೆ ವಿಚಾರದಲ್ಲಿ ನ್ಯಾಯಮೂರ್ತಿಗಳ ಸಮಿತಿ ನೀಡಿರುವ ವರದಿಯ ಪ್ರಮುಖ ಅಂಶಗಳೇನು

ಇ) ನ್ಯಾಯಮೂರ್ತಿಗಳ ಸಮಿತಿ ಯಾವಾಗ ವರದಿ ನೀಡಿದೆ ವರದಿ ನೀಡಿ ಇಷ್ಟು ದಿನಗಳು ಕಳೆದರೂ ಕ್ರಮ ಕೈಗೊಳ್ಳದೇ ಇರಲು ಕಾರಣಗಳೇನು

ಈ) ಹೈಕೋರ್ಟ್ ಪೀಠ ಸ್ಥಾಪನೆ ವಿಚಾರದಲ್ಲಿ ಸರ್ಕಾರದ ನಿಲುವೇನು?

ಶ್ರೀ ಎಸ್ ಎಂ ಕೃಷ್ಣ (ಮುಖ್ಯ ಮಂತ್ರಿಗಳು)

ಅ) ಗೌರವಾನ್ವಿತ ಮುಖ್ಯ ನ್ಯಾಯಾಧೀಶರ ಪರಿಶೀಲನೆಯಲ್ಲಿದೆ

ಆ) ಈ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇಲ್ಲ

ಇ) ನ್ಯಾಯಮೂರ್ತಿಗಳ ಸಮಿತಿ ದಿನಾಂಕ 6-6-2003 ರಂದು ಗೌರವಾನ್ವಿತ ಮುಖ್ಯ ನ್ಯಾಯಾಧೀಶರಿಗ ವರದಿ ನೀಡಿದ್ದು ವರದಿಯಲ್ಲಿನ ಅಂಶಗಳ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇಲ್ಲ

ಈ) ಉತ್ತರ ಕರ್ನಾಟಕದ ಒಂದು ಸ್ಥಳದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸಲು ಸರ್ಕಾರ ಇಚ್ಚೆ ಹೊಂದಿದ್ದು ಈ ವಿಷಯ ಗೌರವಾನ್ವಿತ ಮುಖ್ಯ ನ್ಯಾಯಾಧೀಶರ ಪರಿಶೀಲನೆಯಲ್ಲಿದೆ

ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಬರುವ ನೀರು ಪೂರೈಕೆ ಮತ್ತು ಒಳಚರಂಡಿ ವ್ಯವಸ್ಥೆಯ ಬಗ್ಗೆ

15 (196) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಬರುವ ನಗರಸಭೆಗಳ ಸಂಖ್ಯೆ ಎಷ್ಟು

ಆ) ಈ ನಗರಸಭೆಗಳಲ್ಲಿ ಹಾಲಿ ನೀರು ಪೂರೈಕೆಗೆ ಹಾಗೂ ಒಳಚರಂಡಿ ವ್ಯವಸ್ಥೆ ಯೋಜನೆ ಕಾರ್ಯ ಹಮ್ಮಿ ಕೊಳ್ಳಲಾಗಿದೆಯೇ

ಇ) ಯಾವಾಗ ಅನುಷ್ಠಾನಗೊಳಿಸಲಗುತ್ತದೆ ಇದಕ್ಕೆ ಸರ್ಕಾರ ನಿಗದಿಪಡಿಸಿರುವ ಹಣವೆಷ್ಟು

ಈ) ಅನುಷ್ಠಾನಗೊಳಿಸಿದ್ದಲ್ಲಿ ಕಾಮಗಾರಿ ಯಾವ ಹಂತದಲ್ಲಿದೆ ಯಾವಾಗ ಮುಗಿಸಲಾಗುತ್ತದೆ

ಉ) ಈ ನಗರಗಳಿಗೆ ಹಾಲಿ ಕುಡಿಯುವ ನೀರಿನ ಸೌಲಭ್ಯವನ್ನು ಯಾವ ಯೋಜನೆಯಡಿಯಲ್ಲಿ ರೂಪಿಸಲಾಗಿದೆ, ನೀರು ಪೂರೈಕೆ ಸಮರ್ಪಕವಾಗಿದೆಯೇ, ನೀರಿನ ಕೊರತೆ ಇರುವ ಜಾಗಗಳನ್ನು ಗುರುತಿಸಲಾಗಿದೆಯೇ, ಅವು ಯಾವುವು ಈ ಸ್ಥಳಗಳಿಗೆ ಯಾವ ಪರಿಹಾರ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಡಿ ಕೆ ಶಿವಕುಮಾರ್ (ಮಾನ್ಯ ನಗರಾಭಿವೃದ್ಧಿ ಸಚಿವರು)

ಅ) ಬಿಜಾಪುರ ಜಿಲ್ಲೆ – 1

ಬಾಗಲಕೋಟೆ ಜಿಲ್ಲೆ –2

ಆ) ಹೌದು

ಇ) ಆದಷ್ಟು ಶೀಘ್ರದಲ್ಲಿ ಸುಮಾರು 55 00 ಕೋಟಿ ರೂಗಳು

ಈ) ಇನ್ನೂ ಅನುಷ್ಠಾನಗೊಳಿಸಿರುವುದಿಲ್ಲ

ಉ) ಹಾಲಿ, ಕೃಷ್ಣಾ ನದಿಯಿಂದ ನೀರು ಸರಬರಾಜು ಯೋಜನೆಯನ್ನು ಸ್ಥಳೀಯ ಸಂಸ್ಥೆಗಳ ವಂತಿಗೆ, ಹಣಕಾಸು ಸಂಸ್ಥೆಗಳ ಸಾಲ ಮತ್ತು ಸರ್ಕಾರದ ಸಹಾಯದಲ್ಲಿ ಜಾರಿಗೊಳಿಸಲಾಗಿದೆ ನೀರು ಸರಬರಾಜು ಸಮರ್ಪಕವಾಗಿದೆ ಆದಾಗ್ಯೂ ಇನ್ನೂ ಉತ್ತಮವಾಗಿ ನೀರು ಪೂರೈಸಲು ಎ ಡಿ ಬಿ ನೆರವಿನಿಂದ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ

ನಾಗಮಂಗಲ ತಾಲ್ಲೂಕಿನಲ್ಲಿ ಕೈಗೆತ್ತಿಕೊಂಡಿರುವ ಬರ ಪರಿಹಾರ ಯೋಜನೆಗಳ ಬಗ್ಗೆ

18 (26) ಶ್ರೀ ಚೆಲುವರಾಯಸ್ವಾಮಿ ಎನ್ (ನಾಗಮಂಗಲ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಾಗಮಂಗಲ ತಾಲ್ಲೂಕು ಸಣ್ಣ ನೀರಾವರಿ ಇಲಾಖೆಯಿಂದ ಬರ ಪರಿಹಾರ ಯೋಜನೆಯಲ್ಲಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ ಎಷ್ಟು ಕಾಮಗಾರಿಗಳನ್ನು ಪೂರೈಸಲಾಗಿದೆ ಹಾಗೂ ಬಾಕಿ ಇರುವ ಕಾಮಗಾರಿಗಳು ಎಷ್ಟು ಈ ಕಾಮಗಾರಿಗೆ ಎಷ್ಟು ಮೊತ್ತ ವಿನಿಯೋಗಿಸಲಾಗಿದೆ ಮತ್ತು ಬಾಕಿ ಇರುವ ಮೊತ್ತ ಎಷ್ಟು

ಆ) ನಾಗಮಂಗಲ ತಾಲ್ಲೂಕಿನಲ್ಲಿ ರೈತ ಕಾಯಕ ಯೋಜನೆ ಅಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ ಎಷ್ಟು ಹಣ ಬಿಡುಗಡೆಯಾಗಿದೆ ಮತ್ತು ಖರ್ಚು ಆಗಿರುವ ಹಣವೆಷ್ಟು ಹಾಗೂ

ಉಳಿದ ಯೋಜನೆ ಮತ್ತು ಯೋಜನೇತರ ಅಡಿಯಲ್ಲಿ ಯಾವ ಯಾವ ಕಾಮಗಾರಿಯನ್ನು ಯಾವ ಯಾವ ವರ್ಷದಲ್ಲಿ ಕೈಗೆತ್ತಿಕೊಳ್ಳಲಾಗಿದೆ ಹಾಗು ಮುಗಿದಿರುವ ಕಾಮಗಾರಿಗಳೆಷ್ಟು ಬಾಕಿ ಇರುವ ಕಾಮಗಾರಿ ಯಾವಾಗ ಮುಗಿಸಲಾಗುತ್ತದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) 1ನೇ ಹಂತ ಹಾಗೂ 2ನೇ ಹಂತದಲ್ಲಿ ಒಟ್ಟು 34 ಕಾಮಗಾರಿಗಳನ್ನು ರೂ 60 00 ಲಕ್ಷ ಅಂದಾಜು ಮೊತ್ತದಲ್ಲಿ ಕೈಗೊಳ್ಳಲಾಗಿದ್ದು ಆ ಕಾಮಗಾರಿಗಳಿಗೆ ಒಟ್ಟು ರೂ 14 40 ಲಕ್ಷ ಹಾಗೂ 4 812 ಕ್ವಿಂಟಾಲ್ ಆಹಾರ ಧಾನ್ಯ ಖರ್ಚಾಗಿರುತ್ತದೆ 24 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ರೂ 5 60 ಲಕ್ಷ ಹಾಗೂ 1 588 ಕ್ವಿಂಟಾಲ್ ಆಹಾರ ಧಾನ್ಯ ಬಿಡುಗಡೆ ಆಗಬೇಕಾಗಿದ್ದು, 10 ಕಾಮಗಾರಿಗಳು ಪೂರ್ಣಗೊಳ್ಳುವುದು ಬಾಕಿ ಇರುತ್ತದೆ ವಿವರಗಳನ್ನು ಅನುಬಂಧ–1 ಹಾಗೂ 2 ರಲ್ಲಿ ನೀಡಲಾಗಿದೆ

ಆ) ಬಿಂಡಿಗನ ವಿಲೆ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ರೂ 29 20 ಲಕ್ಷ ಅಂದಾಜು ಮೊತ್ತದಲ್ಲಿ ಕೈಗೊಳ್ಳಲಾಗಿದ್ದು, ಈ ಕಾಮಗಾರಿಗೆ ಕೂಲಿಗಾಗಿ ಕಾಳು ಯೋಜನೆಯಡಿ 2,075 ಕ್ವಿಂಟಾಲ್ ಆಹಾರಧಾನ್ಯ ಉಪಯೋಗಿಸಲಾಗಿದ್ದು, ರೂ 8 77 885–00 ಹಣ ಬಿಡುಗಡೆಯಾಗಿದ್ದು ಪೂರ್ಣ ರೂ 8,77,885–00ಗಳು ಖರ್ಚಾಗಿರುತ್ತದೆ ಉಳಿಕೆ ರೂ 5 77 ಲಕ್ಷ ಹಣ ಬಿಡುಗಡೆ ಆಗಬೇಕಾಗಿದೆ

2001–02ನೇ ಸಾಲಿನಿಂದ ಈವರೆಗೆ ನಾಗಮಂಗಲ ತಾಲ್ಲೂಕಿನಲ್ಲಿ ಯೋಜನೇತರ ಶೀರ್ಷಿಕೆಯಲ್ಲಿ ಯಾವುದೇ ಕಾಮಗಾರಿ ಕೈಗೊಂಡಿರುವುದಿಲ್ಲ 4702 ಯೋಜನೆ ಶೀರ್ಷಿಕೆಯಲ್ಲಿ 2 ಹೊಸಕೆರೆ ನಿರ್ಮಾಣ ಕಾಮಗಾರಿ ಹಗೂ 6 ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಇವುಗಳಲ್ಲಿ ಒಂದು ಹೊಸಕೆರೆ ಹಾಗೂ 4 ಕೆರೆ ಅಭಿವೃದ್ಧಿ ಕಾಮಗಾರಿ ಪೂರ್ಣಗೊಂಡಿದ್ದು, 2003–04 ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಲಭ್ಯವಾದಲ್ಲಿ ಈ ಎಲ್ಲಾ ಕಾಮಗಾರಿಗಳನ್ನು 2005ನೇ ಮಾರ್ಚ್ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು 4702 ಯೋಜನೆ ಅಡಿ ಕೈಗೊಂಡಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧ–3ರಲ್ಲಿ ನೀಡಲಾಗಿದೆ

ನಾಗಮಂಗಲ ಪಟ್ಟಣಕ್ಕೆ ನೀರು ಸರಬರಾಜು ಮಾಡುವ ಬಗ್ಗೆ

19 (27) ಶ್ರೀ ಚಲುವನಾರಾಯಣಸ್ವಾಮಿ ಎನ್ (ನಾಗಮಂಗಲ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಾಗಮಂಗಲ ಪಟ್ಟಣದ ವ್ಯಾಪ್ತಿಯಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ನೀರು ಸರಬರಾಜು ಆಗುತ್ತಿರುವುದು ನಿಜವೇ

39 (130) ಶ್ರೀ ಎನ್ ಚೆಲುವನಾರಾಯಣಸ್ವಾಮಿ (ನಾಗಮಂಗಲ) ಮಾನ್ಯ ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರಿಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಾಗಮಂಗಲ ತಾಲ್ಲೂಕಿನಲ್ಲಿ ರೇಷ್ಮೆತಳಿ ಅಭಿವೃದ್ಧಿಪಡಿಸಲು ಫಾರಂ ಸ್ಥಾಪನೆಗೆ ಇಲಾಖೆಯ ಕ್ರಮವೇನು

ಆ) ಈ ಫಾರಂನ್ನು ಬೇರೆ ಕಡೆಗೆ ಸ್ಥಳಾಂತರಿಸಲು ಪ್ರಯತ್ನ ನಡೆಸುತ್ತಿದೆಯೇ

ಇ) ಅಂತಹ ಪ್ರಯತ್ನ ನಡೆಯುತ್ತಿದ್ದರೆ ಈ ಫಾರಂನ್ನು ಬೇರೆ ಕಡೆಗೆ ಸ್ಥಳಾಂತರಿಸದೆ ಇಲ್ಲಿಯೇ ಮುಂದುವರಿಯಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್ ಎಂ ರೇವಣ್ಣ (ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು)

ಅ) ರಾಜ್ಯ ಸರ್ಕಾರವು ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಸ್ಥಾಪಿಸಲಾಗಿದ್ದ ರೇಷ್ಮೆ ಕೃಷಿ ಕ್ಷೇತ್ರವನ್ನು 1980 ರಲ್ಲಿ ರೇಷ್ಮೆ ತಳಿ ಅಭಿವೃದ್ಧಿ ಪಡಿಸಲು ಕೇಂದ್ರ ರೇಷ್ಮೆ ಮಂಡಳಿಗೆ ವರ್ಗಾಯಿಸಿದೆ

ಇಲ್ಲಿನ 13 00 ಎಕರೆ ಜಮೀನಿನ ಪೈಕಿ 3 13 ಎಕರೆಗಳಲ್ಲಿ ಹಿಪ್ಪುನೇರಳೆ ಕೃಷಿ ಇದ್ದು ಪಿ3 ಹಂತದ ದ್ವಿತಳಿ ಮೂಲ ತಳಿಯನ್ನು ಅಭಿವೃದ್ಧಿ ಮಾಡುತ್ತಿದ್ದಾರೆ ಇದರಲ್ಲಿ ರೇಷ್ಮೆ ಇಲಾಖೆಯ ಪಾತ್ರ ಇರುವುದಿಲ್ಲ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ದೊಡ್ಡಬಳ್ಳಾಪುರದಲ್ಲಿ ಸಿದ್ಧ ಉಡುಪುಗಳ ಪಾರ್ಕ್ ನಿರ್ಮಾಣ

41 (580) ಶ್ರೀ ಕೃಷ್ಣಪ್ಪ ಏ (ದೊಡ್ಡಬಳ್ಳಾಪುರ) ಮಾನ್ಯ ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಸಾಲಿನ ಆಯವ್ಯಯದಲ್ಲಿ ದೊಡ್ಡಬಳ್ಳಾಪುರದಲ್ಲಿ ಸಿದ್ಧ ಉಡುಪುಗಳ ಪಾರ್ಕ್ ಸ್ಥಾಪಿಸಲಾಗುವುದೆಂದು ಹೇಳಿರುವ ಪ್ರಸ್ತಾವ ಈಗ ಯಾವ ಹಂತದಲ್ಲಿದೆ

ಆ) ಇದಕ್ಕಾಗಿ ಎಷ್ಟು ಹಣ ಕಾಯ್ದಿರಿಸಲಾಗಿದೆ? ಯಾವಾಗ ಪ್ರಾರಂಭಿಸಲಾಗುವುದು? (ವಿವರ ನೀಡುವುದು)

ಶ್ರೀ ಹೆಚ್ ಎಂ ರೇವಣ್ಣ (ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು)

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ ಅಪರೆಲ್ ಪಾರ್ಕ್ ಸ್ಥಾಪಿಸಲು ಉದ್ದೇಶಿಸಿದ್ದು ಇದಕ್ಕೆ ಕೇಂದ್ರ ಸರ್ಕಾರ ಅನುಮೋದನೆ ನೀಡಿರುತ್ತದೆ ಆ ಯೋಜನೆಯನ್ನು ಅನುಷ್ಠಾನಗೊಳಿಸುವ ದಿಸೆಯಲ್ಲಿ ದೊಡ್ಡಬಳ್ಳಾಪುರದಲ್ಲಿ 187 ಎಕರೆ ಜಮೀನನ್ನು ಕೆ ಐ ಡಿ ಬಿ ಮುಖಾಂತರ ಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆ

ಆ) ಇದಕ್ಕಾಗಿ 2002–03 ನೇ ಸಾಲಿನಲ್ಲಿ ರೂ 450 00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು 2003–04ನೇ ಸಾಲಿನಲ್ಲಿ ರೂ 520 00 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ 2004ರ ಅಂತ್ಯದ ವೇಳೆಗೆ ಪಾರ್ಕ್ ಚಟುವಟಿಕೆಗಳನ್ನು ಪ್ರಾರಂಭಿಸಲಾಗುವುದು

ಸ್ಥಳೀಯ ಕೈಗಾರಿಕೆಗಳಿಗೆ ಬಂಡವಾಳ

42 (570) ಶ್ರೀ ಗುರುಸ್ವಾಮಿ ಎ ಎಸ್ (ಚಾಮುಂಡೇಶ್ವರಿ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 2 ವರ್ಷಗಳಿಂದ ಎಷ್ಟು ವಿದೇಶಿ ಕಂಪೆನಿಗಳು ಬಂಡವಾಳ ಹೂಡಿದೆ, ಮೊತ್ತವೆಷ್ಟು,

ಆ) ಸ್ಥಳೀಯ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ವಿದೇಶಿ ಕಂಪೆನಿಗಳು ನೆರವನ್ನು ನೀಡಿದೆಯೇ, ಯಾವ ಪ್ರಮಾಣದಲ್ಲಿ

ಇ) ಯಾವ ಯಾವ ವಲಯಕ್ಕೆ ವಿದೇಶಿ ಕಂಪೆನಿಯವರು ಬಂಡವಾಳವನ್ನು ಒದಗಿಸಿದ್ದಾರೆ, ಮೊತ್ತವೆಷ್ಟು

ಈ) ವಿದೇಶಿ ಬಂಡವಾಳವನ್ನು ತರುವಲ್ಲಿ ಕರ್ನಾಟಕದ ಕಾನೂನುಗಳ ತೊಡಕೇನಾದರೂ ಇದೆಯೇ ಇದ್ದ ಪಕ್ಷದಲ್ಲಿ ಯಾವ ರೀತಿಯ ಕ್ರಮವನ್ನು ಜರುಗಿಸಿದ್ದೀರಿ,

ಉ) ವಿದೇಶಿ ಬಂಡವಾಳವನ್ನು ತರುವಾಗ ಭಾರತೀಯ ಕಾನೂನುಗಳು ಉಲ್ಲಂಘನೆಯಾಗಿದೆಯೇ ಉಲ್ಲಂಘನೆಯಾಗಿರುವ ಕಾನೂನುಗಳ ಯಾವುವು?

ಶ್ರೀ ಆರ್ ವಿ ದೇಶಪಾಂಡೆ (ಬೃಹತ್ ಮತ್ತು ಮಾಧ್ಯಮ ಕೈಗಾರಿಕೆ ಸಚಿವರು)

ಅ) ಕಳೆದ ಎರಡು ವರ್ಷಗಳಲ್ಲಿ 610 ವಿದೇಶಿ ಕಂಪೆನಿಗಳು ಒಟ್ಟು ರೂ 3104.83 ಕೋಟಿಗಳಷ್ಟು ಬಂಡವಾಳವನ್ನು ರಾಜ್ಯದಲ್ಲಿ ಹೂಡಲು ಅನುಮೋದನೆ ಪಡೆದಿದೆ

	ಸಂಖ್ಯೆ	ಬಂಡವಾಳ (ಕೋಟಿ ರೂ.ಗಳಲ್ಲಿ)
2001–02	320	820 20
2002–03	290	2283 83
	610	3104 03

ಆ) ವಿದೇಶಿ ಕಂಪೆನಿಗಳ ಬಂಡವಾಳ ಹೂಡಿಕೆಯಿಂದ ರಾಜ್ಯದಲ್ಲಿ ಪೂರಕ ಉದ್ದಿಮೆಗಳ ಸ್ಥಾಪನೆಗೆ ಅನುಕೂಲವಾಗುವುದು

ಇ) ಮಾಹಿತಿ ತಂತ್ರಜ್ಞಾನ, ಇಂಜಿನಿಯರಿಂಗ್ ಉದ್ಯಮ, ಆಟೋಮೋಬೈಲ್ ಜವಳಿ ಆಹಾರ ಪರಿಷ್ಕರಣೆ ರಾಸಾಯನಿಕ ಹಾಗೂ ಇತರೆ ವಲಯಗಳಲ್ಲಿ ಕಳೆದ ಎರಡು ಸಾಲಿನಲ್ಲಿ ಒಟ್ಟು ರೂ 3104 83 ಕೋಟಿಗಳಷ್ಟು ಬಂಡವಾಳವನ್ನು ರಾಜ್ಯದಲ್ಲಿ ಹೂಡಲು ಅನುಮೋದನೆ ಪಡೆದಿದೆ

ಈ) ವಿದೇಶಿ ಬಂಡವಾಳವನ್ನು ತರುವ ಬಗ್ಗೆ ಕರ್ನಾಟಕ ಕಾನೂನುಗಳಿಂದ ಯಾವುದೇ ತೊಂದರೆ ಇರುವುದಿಲ್ಲ

ಉ) ವಿದೇಶಿ ಬಂಡವಾಳ ತರುವಾಗ ಭಾರತೀಯ ಕಾನೂನುಗಳ ಉಲ್ಲಂಘನೆಯಾದ ಯಾವ ಪ್ರಕರಣವು ವರಿದಿಯಾಗಿರುವುದಿಲ್ಲ

ರಾಜ್ಯದಲ್ಲಿ ಸಿದ್ದ ಉಡುಪುಗಳ ಪಾರ್ಕ್ ಸ್ಥಾಪನೆ

43 (254) ಶ್ರೀ ಸದಾನಂದ ಗೌಡ ಡಿ ವಿ (ಪುತ್ತೂರು) ಮಾನ್ಯ ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಿದ್ದ ಉಡುಪುಗಳ ಪಾರ್ಕ್ ಸ್ಥಾಪಿಸುವ ವಿಚಾರ ಸರ್ಕಾರದ ಮುಂದಿದೆಯೇ

ಆ) ಇದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ ಹಾಗೂ ಇದರ ಉದ್ದೇಶಗಳೇನು, ಇದಕ್ಕೆ ತಗಲುವ ವೆಚ್ಚವೆಷ್ಟು ಎಲ್ಲಿ ಸ್ಥಾಪಿಸಲು ನಿರ್ಧರಿಸಲಾಗಿದೆ

ಇ) ಸಿದ್ಧ ಉಡುಪುಗಳ ಪಾರ್ಕ್ ತೆರೆಯಲು ರಾಜ್ಯ ಮುಂದೆ ಬಂದಲ್ಲಿ ಇದಕ್ಕೆ ಕೇಂದ್ರ ಸರ್ಕಾರ ಆರ್ಥಿಕ ನೆರವು ನೀಡುವುದೇ ಎಷ್ಟು ನೆರವು ಒದಗಿಸಲಾಗುತ್ತದೆ

ಈ) ಈ ಆರ್ಥಿಕ ನೆರವು ಪಡೆಯುವ ನಿಟ್ಟಿನಲ್ಲಿ ರಾಜ್ಯ ಸರಕಾರ ಕೈಗೊಂಡ ಕ್ರಮಗಳೇನು

ಉ) ಕೈಗೊಳ್ಳದಿದ್ದಲ್ಲಿ ಕಾರಣಗಳೇನು?

ಶ್ರೀ ಹೆಚ್ ಎಂ ರೇವಣ್ಣ (ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು)

ಅ) ಹೌದು

ಆ) ದೊಡ್ಡಬಳ್ಳಾಪುರ ಹಾಗೂ ಬಳ್ಳಾರಿ ಇಲ್ಲಿ ಅಪರೆಲ್ ಪಾರ್ಕ್‌ಗಳನ್ನು ಸ್ಥಾಪಿಸಲು ಉದ್ದೇಶಿಸಿದೆ ಉದ್ದೇಶಿತ ದೊಡ್ಡಬಳ್ಳಾಪುರದ ಪಾರ್ಕಿನ ಅಂದಾಜು ವೆಚ್ಚ ರೂ 32 97 ಕೋಟಿಗಳಾಗಿದ್ದು ಆ ಯೋಜನೆಗೆ ಕೇಂದ್ರ ಸರಕಾರ ಅನುಮೋದನೆ ನೀಡಿರುತ್ತದೆ ಅದನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ದೊಡ್ಡಬಳ್ಳಾಪುರದಲ್ಲಿ 187 ಎಕರೆ ಜಮೀನನ್ನು ಕೆ ಐ ಎ ಡಿ ಬಿ ಮುಖಾಂತರ ಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆ

ಉದ್ದೇಶಗಳು –

1 ಅಂತರಾಷ್ಟ್ರೀಯ ಹಾಗೂ ಸ್ಥಳೀಯ ಮಾರುಕಟ್ಟೆಗೆ ಬೇಕಾಗುವ ಗುಣಮಟ್ಟದ ಉತ್ಪನ್ನಗಳನ್ನು ತಯಾರಿಸುವುದು

2 ಅಪೇರಲ್ ಉದ್ಯಮಕ್ಕೆ ಸಂಬಂಧಿಸಿದ ಜವಳಿ ಉದ್ಯಮಗಳು, ಪೂರಕ ಉದ್ಯಮಗಳು (ancillary Units) ಹಾಗೂ ಸೇವಾ ಘಟಕಗಳ ಸೇವೆಯನ್ನು ಒಂದೇ ಸ್ಥಳದಲ್ಲಿ ಸಿಗುವಂತೆ ಮಾಡುವುದು

3 ಉತ್ಪಾದಿಸುವ ಒಟ್ಟು ಉತ್ಪನ್ನಗಳಲ್ಲಿ ಕನಿಷ್ಠ ಶೇ 25 ಭಾಗವನ್ನು ಹೊರದೇಶಗಳಿಗೆ ರಫ್ತು ಮಾಡುವುದು

4 ಸುಮಾರು 50,000 ಜನರಿಗೆ ಉದ್ಯೋಗಾವಕಾಶ ಒದಗಿಸುವುದು

ಇ ಹೌದು ಪ್ರತಿ ಅಂತಹ ಪಾರ್ಕ್‌ಗೆ ರೂ 17 00 ಕೋಟಿಗಳು

ಈ) ರಾಜ್ಯ ಸರ್ಕಾರವು ಭೂಮಿಯನ್ನು ಅದರ ವೆಚ್ಚದಲ್ಲಿ ಸ್ವಾಧೀನ ಪಡಿಸಿಕೊಳ್ಳುತ್ತಿದ್ದು ಇತರೆ ಉದ್ದೇಶಗಳಿಗೆ ಬೇಕಾಗುವ ಹಣವನ್ನು ನಂತರ ಕೇಂದ್ರ ಸರ್ಕಾರದಿಂದ ಪಡೆಯಲು ಕ್ರಮ ಕೈಗೊಳ್ಳಲಾಗುವುದು

ಉ) ಉದ್ಭವಿಸುವುದಿಲ್ಲ

ವಿವಿಧ ಇಲಾಖೆಗಳಲ್ಲಿರುವ ಬ್ಯಾಕ್‌ಲಾಗ್ ಹುದ್ದೆಗಳು

44 (318) ಶ್ರೀ ಸೋಮಶೇಖರ್ ಬಿ (ಮಳವಳ್ಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಬ್ಯಾಕ್ ಲಾಗ್ ಹುದ್ದೆಗಳ ಸಂಖ್ಯೆ ಎಷ್ಟು ಇಲಾಖಾವಾರು ವಿವರಗಳನ್ನು ನೀಡುವುದು

ಆ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲಾಗಿದೆ, ಇಲಾಖಾವಾರು ಹಾಗೂ ವರ್ಷವಾರು ವಿವರಗಳನ್ನು ನೀಡುವುದು

ಇ) ಬಾಕಿ ಹುದ್ದೆಗಳನ್ನು ತುಂಬಲು ಸರ್ಕಾರ ಕಾಲಮಿತಿಯನ್ನೇನಾದರೂ ವಿಧಿಸಿದೆಯೇ, ಹಾಗಿದ್ದಲ್ಲಿ ಯಾವಾಗ ಪೂರ್ಣ ಪ್ರಮಾಣದಲ್ಲಿ ತುಂಬಲಾಗುವುದು,

ಈ) ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಇರುವ ನಿಯಮಾವಳಿಗಳೇನು

ಉ) ಈಗಿರುವ ನಿಯಮಾವಳಿಗಳಿಂದ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಊ) ಹಾಗಿದ್ದಲ್ಲಿ, ಈಗಿರುವ ನಿಯಮಾವಳಿಗಳನ್ನು ಬದಲಾವಣೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ,ಹಾಗಿದ್ದಲ್ಲಿ, ಯಾವಾಗಿನಿಂದ ಜಾರಿಗೆ ತರಲಾಗುವುದು ವಿವರಗಳನ್ನು ನೀಡುವುದು?

ಶ್ರೀ ಎ ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಇತ್ತೀಚಿನ ವರದಿಯಂತೆ ರಾಜ್ಯದ ವಿವಿಧ ಇಲಾಖೆ ನಿಗಮ/ಮಂಡಳಿ/ ವಿಶ್ವವಿದ್ಯಾ ನಿಲಯ / ಸಹಕಾರಿ ಸಂಘಗಳಲ್ಲಿ ಒಟ್ಟು 17220 ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಿದ್ದು ಇಲಾಖಾವಾರು ಮಾಹಿತಿ ಲಗತ್ತಿಸಿದೆ

ಆ) ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸುವ ಬಗ್ಗೆ ಸರ್ಕಾರವು ಅಧಿಸೂಚನೆ ಹೊರಡಿಸಿದ ದಿ 21-11-2001 ರಿಂದ 20-12-2003 ರ ವರೆಗೆ ಒಟ್ಟು 17220 ಹುದ್ದೆಗಳನ್ನು ಗುರುತಿಸಿದೆ ಇಲ್ಲಿಯವರೆಗೆ 14497 ಹುದ್ದೆಗಳನ್ನು ಪ್ರಕಟಿಸಿದ್ದು ಅದರಲ್ಲಿ 12274 ಹುದ್ದೆಗಳಿಗೆ ಆಯ್ಕೆ ಮಾಡಲಾಗಿದೆ ವಿವರ ಲಗತ್ತಿಸಿದೆ

ಇ) 2502 ಬ್ಯಾಕ್‌ಲಾಗ್ ಹುದ್ದೆಗಳನ್ನು ಹಾಲಿ ಹುದ್ದೆಗಳು ಲಭ್ಯವಿಲ್ಲದ ಕಾರಣ ಮುಂದೆ ಖಾಲಿಯಾಗುವ ಹುದ್ದೆಗಳಿಗೆ ಭರ್ತಿ ಮಾಡಲು ಖಾದಿರಿಸಲಾಗಿದೆ ಉಳಿದ 2444 ಹುದ್ದೆಗಳನ್ನು ಆದಷ್ಟು ಶೀಘ್ರವಾಗಿ ಭರ್ತಿ ಮಾಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ

ಈ) ಬ್ಯಾಕ್‌ಲಾಗ್ ಹುದ್ದೆಗಳನ್ನು ಸರ್ಕಾರದ ದಿ 21 11 2001 ರ ಹಾಗೂ ದಿನಾಂಕ 1 6 2002 ರ ಅಧಿಸೂಚನೆಯಲ್ಲಿನ ವಿಶೇಷ ನೇಮಕಾತಿ ನಿಯಮಗಳ ರೀತ್ಯ ತಯಾರಿಸಲಾದ ನಿಯಮಗಳ ಪ್ರಕಾರ ತುಂಬಲಾಗಿದೆ

ಉ) ಮತ್ತು ಊ) ಸಂಚಿತ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿಮಾಡುವ ಕಾರ್ಯವನ್ನು ಪ್ರಥಮ ಬಾರಿಗೆ ಕೈಗೆತ್ತಿಕೊಳ್ಳಲಾಗಿರುವ ಕಾರಣ ಇದರಿಂದಾಗಿ ಆಗಾಗ ಉದ್ಭವಿಸುವ ಸಮಸ್ಯೆಗಳನ್ನು ಆಗಿಂದಾಗಲೇ ಪರಿಹರಿಸಲಾಗುತ್ತಿದೆ ಸ್ವಾಯತ್ತ ಸಂಸ್ಥೆಗಳಾದ ವಿಶ್ವವಿದ್ಯಾನಿಲಯ ಮಂಡಳಿ ನಿಗಮಗಳು ಹಾಗೂ ಸಹಕಾರ ಸಂಘಗಳು ಇತ್ಯಾದಿಗಳನ್ನು ಕಾಯ್ದೆಯಡಿ ಒಳಪಡಿಸಲು ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಹಾಗೂ ಇತರೇ ಹಿಂದುಳಿದ ವರ್ಗಗಳ ನೇಮಕಾತಿ ಮತ್ತು ಮೀಸಲಾತಿ ಕಾಯಿದೆಗೆ ತಿದ್ದುಪಡಿ ತರಲು ಕ್ರಮಕೈಗೊಳ್ಳಲಾಗಿದೆ

ಸರ್ಕಾರಿ ಇಲಾಖೆ, ನಿಗಮ/ ಮಂಡಳಿಗಳು ಮತ್ತು ವಿಶ್ವವಿದ್ಯಾನಿಲಯಗಳಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳ ವಿವರ ದಿನಾಂಕ **20 12 2003**

ಕ್ರ ಸಂ	ನೇಮಕಾತಿ ಪ್ರಾಧಿಕಾರಿಗಳು	ಗುರುತಿಸಿದ ಹುದ್ದೆಗಳು		ಪ್ರಕಟಿತ ಹುದ್ದೆಗಳು		ಪ್ರಕಟಣೆಗೆ ಬಾಕಿ ಇರುವ ಹುದ್ದೆಗಳು		ನೇಮಕಾತಿಯಾದ ಅಭ್ಯರ್ಥಿಗಳ ಸಂಖ್ಯೆ	
1	2	3	4	5	6	7	8	9	10
		ಪ ಜಾ	ಪ ವ	ಪ ಜಾ	ಪ ವ	ಪ ಜಾ	ಪ ವ	ಪ ಜಾ	ಪ ವ
	ಅ ಇಲಾಖೆಗಳು								
1	ಅಡ್ವೋಕೇಟ್ ಜನರಲ್	04	02	04	02			03	01
2.	ಕೃಷಿ ಮಾರಾಟ ಇಲಾಖೆ	07	05	07	05			7	5
3	ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳು	33	13	33	13			33	13
4	ಪ್ರಾಚ್ಯ ವಸ್ತು ಸಂಗ್ರಹಾಲಯ, ಬಳ್ಳಾರಿ	05		05				05	
5	ಆಡಳಿತ ತರಬೇತಿ ಸಂಸ್ಥೆ ಮೈಸೂರು		3		3				3
6	ಹಿಂದುಳಿದ ವರ್ಗಗಳ ಇಲಾಖೆ	9	3	9	3			9	3
7	ಮುಖ್ಯವಾಸ್ತು ಶಿಲ್ಪಿ (ಲೋಕೋಪಯೋಗಿ)	3	2	3	2			3	2
8	ಮುಖ್ಯ ವಿದ್ಯುತ್ ಪರಿವೀಕ್ಷಕರು	3	2	3	2			3	2
9	ಕಾಲೇಜು ಶಿಕ್ಷಣ ಇಲಾಖೆ								
ಅ	ಅನುದಾನಿತ ಕಾಲೇಜುಗಳು	806	384	114	70	692	314	105	70
ಆ)	ಸರ್ಕಾರಿ ಕಾಲೇಜುಗಳು	75	22	75	22			75	22

1	2	3	4	5	6	7	8	9	10
	ವಾಣಿಜ್ಯ ಮತ್ತು ಕೈಗಾರಿಕೆ								
10	ಇಲಾಖೆ	3	2	3	2			3	2
11	ವಾಣಿಜ್ಯ ತೆರಿಗೆ ಇಲಾಖೆ	21	1	21	1			21	1
12	ಗ್ರಾಹಕರ ವ್ಯಾಜ್ಯಗಳ ಪರಿಹಾರ ಇಲಾಖೆ	1		1				1	
13	ಸಹಕಾರಿ ಇಲಾಖೆ	15	8	15	8			15	8
14	ಸಹಕಾರಿ ಲೆಕ್ಕಪರಿಶೋಧಕರು	11	6	11	6			9	5
15	ಔಷಧ ನಿಯಂತ್ರಣ ಇಲಾಖೆ	10	8	10	8			10	8
16	ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ	53	14	53	14			53	14
17	ಕಾರ್ಮಿಕ ವಿಮಾ ಯೋಜನೆ ವೈದ್ಯಕೀಯ ಸೇವೆಗಳು	33	25	33	25			30	25
18	ಉದ್ಯೋಗ ಮತ್ತು ತರಬೇತಿ ಇಲಾಖೆ		1		1				1
19	ಅಬಕಾರಿ ಇಲಾಖೆ	4	2	4	2			4	2
20	ಪ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್	2		2				2	
21	ಅಗ್ನಿ ಶಾಮಕಸೇವೆಗಳು	1	2	1	2			1	2
22	ಮೀನುಗಾರಿಕೆ ಇಲಾಖೆ	6	3	6	3			6	3
23	ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ	10	2	10	2			10	2
24	ಅರಣ್ಯ ಇಲಾಖೆ	28	8	28	8			29	7
25	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	1144	219	1144	219			829	75
26	ಗೃಹ ರಕ್ಷಕದಳ ಮತ್ತು ಪೌರಸೇವೆಗಳು	11	5	11	5			11	5
27	ತೋಟಗಾರಿಕೆ ಇಲಾಖೆ	07	02	07	02			7	2

1	2	3	4	5	6	7	8	9	10
28	ಭಾರತೀಯ ವೈದ್ಯ ಪದ್ಧತಿಗಳು ಮತ್ತು ಹೋಮಿಯೋಪತಿ ಇಲಾಖೆ	77	17	77	17			4	6
29	ವಾರ್ತಾ ಇಲಾಖೆ		1		1				1
30	ಮಾಹಿತಿ ತಂತ್ರಜ್ಞಾನ ಇಲಾಖೆ	7	4	7	4			7	4
31	ಕರ್ನಾಟಕ ವಿಮಾ ಇಲಾಖೆ	9	3	9	3			8	3
32	ಲೋಕಸೇವಾ ಆಯೋಗ	2	2	2	2			2	2
33	ಕನಾಟಕ ಆಡಳಿತ ನ್ಯಾಯ ಮಂಡಳಿ		2				1		
34	ಕರ್ನಾಟಕ ಭವನ ಹೊಸ ದೆಹಲಿ		3		3				
35	ಕರ್ನಾಟಕ ಮೇಲ್ಮನವಿ ಪ್ರಾಧಿಕಾರ	3		3				3	
36	ಕರ್ನಾಟಕ ಲೋಕಾಯುಕ್ತ	7	6	7	6			3	2
37	ಕರ್ನಾಟಕ ಸಣ್ಣ ಉಳಿತಾಯ ಮತ್ತು ಲಾಟರಿ ಇಲಾಖೆ	8	2	8	2			8	2
38	ಕರ್ನಾಟಕ ವಿಧಾನ ಮಂಡಲ	11	8	11	8			11	8
39	ಕಾರ್ಮಿಕ ಇಲಾಖೆ	3	2	3	2			3	2
40	ವೈದ್ಯಕೀಯ ಶಿಕ್ಷಣ ಇಲಾಖೆ	3		3					
41	ಗಣಿ ಮತ್ತು ಭೂವಿಜ್ಞಾನ ಇಲಾಖೆ	23	10	23	9		1	8	8
42	ಪೌರಾಡಳಿತ ಇಲಾಖೆ	13	2	13	2			13	2
43	ಎಸ್ ಸಿ ಸಿ ನಿರ್ದೇಶನಾಲಯ	13		13				13	
44	ಪೊಲೀಸ್ ಇಲಾಖೆ	93	43	06	6	87	37	5	5

1	2	3	4	5	6	7	8	9	10
ಅ	ಕೆ ಎಸ್ ಆರ್ ಪಿ	67	29	42	19	25	10	42	19
45	ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ	4	2	4	2			3	
46	ಪದವಿ ಪೂರ್ವ ಶಿಕ್ಷಣ ಇಲಾಖೆ	23	4	23	4			23	4
ಅ	ಅನುದಾನಿತ ಕಾಲೇಜುಗಳು	193	20	56	20	137		56	20
ಆ	ಕಾಲೇಜು ಶಿಕ್ಷಣ ಇಲಾಖೆಯಿಂದ ಪದವಿಪೂರ್ವ ಶಿಕ್ಷಣ ಇಲಾಖೆಗೆ ವರ್ಗಾವಣೆಯಿಂದ ಹುದ್ದೆಗಳು	94	70	94	70			94	64
47	ಮುದ್ರಣ ಮತ್ತು ಲೇಖನ ಸಾಮಾಗ್ರಿ ಇಲಾಖೆ	5	3	5	3			5	3
48	ಕಾರಾಗೃಹ ಇಲಾಖೆ	3	1	3	1			3	1
49	ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳು	22	6	22	6			22	1
50	ಸಾರ್ವಜನಿಕ ಶಿಕ್ಷಣ ಇಲಾಖೆ								
ಅ	ಪ್ರೌಢ ಶಾಲೆಗಳು (ಅನುದಾನಿತ)	408	241	309	134	99	107	228	102
ಆ	ಪ್ರೌಢ ಶಾಲೆಗಳು (ಸರ್ಕಾರಿ)	24	11	24	11			24	11
ಇ	ಪ್ರಾಥಮಿಕ ಶಾಲೆಗಳು (ಅನುದಾನಿತ)	106	68	43	29	63	39	39	33
ಈ	ಪ್ರಾಥಮಿಕ ಶಾಲೆಗಳು (ಸರ್ಕಾರಿ)	3724	1006	3724	1006			3724	1006
51	ಸಾರ್ವಜನಿಕ ಗ್ರಂಥಾಲಯ ಇಲಾಖೆ	54	9	54	9			54	9
52	ಧಾರ್ಮಿಕ ಮತ್ತು ಧತ್ತಿ ಇಲಾಖೆ	2	2	2	2			2	2
53	ಕಂದಾಯ ಇಲಾಖೆ	188	53	188	53			150	32

1	2	3	4	5	6	7	8	9	10
54	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	244	32	244	32			158	32
55	ಸೈನಿಕ ಕಲ್ಯಾಣ ಮತ್ತು ಪುನರ್ ವಸತಿ ಇಲಾಖೆ	7	2	7	2			6	2
56	ರೇಷ್ಮೆ ಇಲಾಖೆ	121	27	21		101	27	21	
57	ಸಮಾಜ ಕಲ್ಯಾಣ ಇಲಾಖೆ	9	3	9	3			9	3
58	ನೋಂದಣಿ ಮತ್ತು ಮುದ್ರಾಂಕ ಇಲಾಖೆ	55	40	55	40			21	3
59	ರಾಜ್ಯ ಲೆಕ್ಕಪತ್ರ ಇಲಾಖೆ	36	9	36	9			36	9
60	ರಾಜ್ಯ ಪತ್ರಗಾರ	1	2	1			2	1	
61	ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ	4		4				4	
62.	ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ	7	3	7	3				1
ಅ	ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು	271	180	171	90	100	90	115	49
ಅ	ಅನುದಾನಿತ ಪಾಲಿಟೆಕ್ನಿಕ್	70	41	51	27	19	14	38	22
63	ಪ್ರವಾಸೋದ್ಯಮ ಇಲಾಖೆ	10	6	10	6			10	5
64	ಭಾಷಾಂತರ ಇಲಾಖೆ	1		1				1	
65	ಖಜಾನೆ ಇಲಾಖೆ	2	1	2	1			2	1
66	ನಗರ ಯೋಜನೆ	7	2			7	2		
67	ಜಲಸಂಪನ್ಮೂಲ ಮತ್ತು ಲೋಕೋಪಯೋಗಿ ಇಲಾಖೆ	1047	84	1020	84	27		786	84

1	2	3	4	5	6	7	8	9	10
68	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	7	5	7	5			7	5
69	ಯುವಜನ ಸೇವೆ ಇಲಾಖೆ	2	3	2	3			2	3
	ಅ–ಒಟ್ಟು	9395	2813	8039	2169	1356	644	7075	1862
	ಅ ವಿಶ್ವವಿದ್ಯಾನಿಲಯಗಳು								
70	ಕೃಷಿ ವಿಶ್ವವಿದ್ಯಾನಿಲಯ ಧಾರವಾಡ	81	48	81	48			48	14
71	ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳ ಬೆಂಗಳೂರು	83	49	83	49			9	4
72	ಬೆಂಗಳೂರು ವಿಶ್ವವಿದ್ಯಾನಿಲಯ	61	24	61	24				
73	ಗುಲ್ಬರ್ಗಾ ವಿಶ್ವವಿದ್ಯಾನಿಲಯ	64	43	64	43			57	36
74	ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ	13	08	13	08			13	8
75	ಕನ್ನಡ ವಿಶ್ವವಿದ್ಯಾನಿಲಯ	148	87	127	66	21	21	65	48
76	ಕುವೆಂಪು ವಿಶ್ವವಿದ್ಯಾನಿಲಯ	7	2	7	2				
77	ಮಂಗಳೂರು ವಿಶ್ವವಿದ್ಯಾನಿಲಯ	25	21	25	21			22	17
78	ಮೈಸೂರು ವಿಶ್ವವಿದ್ಯಾನಿಲಯ	72	48	70	40	2	8	57	26
		42	33	42	33			40	23

1	2	3	4	5	6	7	8	9	10
79	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ	5	5	5	5			5	5
	ಅ– ಒಟ್ಟು	601	368	578	339	23	29	316	181
	ಇ ನಿಗಮ ಮತ್ತು ಮಂಡಳಿಗಳು								
80	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ	13	1	13	1			13	1
81	ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	82	51	3	2	79	49	3	2
82	ಬಿ ಎಂ ಆರ್ ಡಿ ಎ	3	1	3	1			3	1
83	ಕೇಂದ್ರೀಯ ಪರಿಹಾರ ಸಮಿತಿ	15	9	15	9			15	9
84	ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರ	9	7	9	7			9	7
85	ಜನರಲ್ ತಿಮ್ಮಯ್ಯ ರಾಷ್ಟ್ರೀಯ ಅಕಾಡೆಮಿ	1		1					
86	ಹಟ್ಟಿ ಚಿನ್ನದ ಗಣಿ– ರಾಯಚೂರು	7	7	7	7			7	4
87	ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ	13	11	13	11			12	10
88	ಜಯಚಾಮರಾಜೇಂದ್ರ ದೃಶ್ಯ ಕಲಾ ಅಕಾಡೆಮಿ ಮೈಸೂರು	5	2	5	2			1	
89	ಅರಣ್ಯ ವಸತಿ ಮತ್ತು ವಿಶ್ರಾಂತಿಧಾಮ	5	6	5	6			5	6

1	2	3	4	5	6	7	8	9	10
90	ಕರ್ನಾಟಕ ಅಪೆಕ್ಸ್ ಮಟ್ಟದ ಸಹಕಾರಿ ಸಂಸ್ಥೆ								
ಅ	ಕರ್ನಾಟಕ ರಾಜ್ಯ ಸಕಾರಿ ಅಪೆಕ್ಸ್ ಬ್ಯಾಂಕ್	2		2				2	
ಆ	ಕರ್ನಾಟಕ ರಾಜ್ಯ ಸಕ್ಕರೆ ಕಾರ್ಖಾನೆಗಳ ಮಹಾ ಮಂಡಳಿ, ಬೆಂಗಳೂರು	2		2				2	
ಇ	ಹಾಪ್‌ಕಾಮ್ಸ್ ಮತ್ತು ಇತರೆ ಸಂಸ್ಥೆಗಳು	46	2	46	2			46	2
ಈ	ಡಿ ಸಿ ಸಿ ಬ್ಯಾಂಕ್‌ಗಳು	33	19	32	18	1	1	20	13
ಉ	ಸಹಕಾರಿ ಸಕ್ಕರೆ ಕಾರ್ಖಾನೆಗಳು	359	65	156	26	203	39	65	12
ಊ	ಕರ್ನಾಟಕ ರಾಜ್ಯ ಕೈಗಾರಿಕೆ ಸಹಕಾರಿ ಬ್ಯಾಂಕ್	25	10			25	10		
ಋ	ಕರ್ನಾಟಕ ರಾಜ್ಯ ಸಹಕಾರಿ ಮಹಾ ಮಂಡಳಿ	6	6	6	6			6	6
ೠ	ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್	23	7	3	1	20	6	3	1
ಎ	ಕೆ ಎಂ ಎಫ್ ಕೇಂದ್ರ ಕಛೇರಿ, ಬೆಂಗಳೂರು	7	7	7	7			5	5
1	ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ಹಾಲು ಉತ್ಪಾದಕರ ಒಕ್ಕೂಟ		2		2				2
11	ಹಾಲು ಒಕ್ಕೂಟ, ಬೆಳಗಾಂ	4	4	4	4			4	4
111	ಹಾಲು ಒಕ್ಕೂಟ, ಬಿಜಾಪುರ	2	4	2	4				
1V	ಹಾಲು ಒಕ್ಕೂಟ ಧಾರವಾಡ	2	1	2	1			2	1
V	ಹಾಲು ಒಕ್ಕೂಟ, ಹಾಸನ	10	6	10	6			10	6

1	2	3	4	5	6	7	8	9	10
VI	ಹಾಲು ಒಕ್ಕೂಟ ಕೋಲಾರ	2	3	2	3			2	2
VII	ಹಾಲು ಒಕ್ಕೂಟ ಮಂಗಳೂರು	3	1	3	1			3	1
VIII	ಹಾಲು ಒಕ್ಕೂಟ, ಮೈಸೂರು	7	8	7	8			7	8
IX	ಹಾಲು ಒಕ್ಕೂಟ ತುಮಕೂರು	5	3	5	3			5	3
X	ಹಾಲು ಒಕ್ಕೂಟ ಗುಲ್ಬರ್ಗಾ	3	3	3	3			1	
XI	ಹಾಲು ಒಕ್ಕೂಟ, ಶಿವಮೊಗ್ಗ	4	1	4	1			3	1
XII	ಹಾಲು ಒಕ್ಕೂಟ ಮಂಡ್ಯ	8	5	8	5			8	5
XIII	ಹಾಲು ಒಕ್ಕೂಟ ಬಳ್ಳಾರಿ	2	2	2	2			2	2
91	ಕೆ ಪಿ ಟಿ ಸಿ ಎಲ್	366	119	366	119			366	119
92	ಕೆ ಎಸ್ ಎಸ್.ಸಿ	12	8	12	8			4	3
93	ಕೆ ಎಸ್ ಆರ್ ಟಿ ಸಿ	438	16	438	16			438	16
ಅ	ಬೆಂಗಳೂರು (ನಿಗಮ)								
ಆ	ಬಿ ಎಂ ಟಿ ಸಿ	1	45	1	45			1	45
ಇ	ಕೆ ಎಸ್ ಆರ್ ಟಿ ಸಿ (ಗುಲ್ಬರ್ಗಾ ನಿಗಮ)	299	18	299	18			299	18
ಈ	ಕೆ ಎಸ್ ಆರ್ ಟಿ ಸಿ (ಹುಬ್ಬಳ್ಳಿ ನಿಗಮ)	462	23	462	23			462	23
94	ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ	1	2	1	2			1	1
95	ಕರ್ನಾಟಕ ಉಗ್ರಾಣ ನಿಗಮ	3		3				3	
96	ಕರ್ನಾಟಕ ಕೃಷಿ ಮಾರುಕಟ್ಟೆ ಮಂಡಳಿ	7	5	7	5			7	5

1	2	3	4	5	6	7	8	9	10
97	ಕರ್ನಾಟಕ ಆಗ್ರೋ ಇಂಡಸ್ಟ್ರೀಸ್	6	2			6	2		
98	ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ	1	1	1	1			1	1
99	ಕರ್ನಾಟಕ ಗೃಹ ಮಂಡಳಿ	18	12	18	12			14	9
100	ಕರ್ನಾಟಕ ಕೈಗಾರಿಕೆ ಪ್ರದೇಶಾಭಿವೃದ್ಧಿ ಮಂಡಳಿ	13	7	13	7			13	7
101	ಕರ್ನಾಟಕ ಕೈಗಾರಿಕೆ ಬಂಡವಾಳ ಮತ್ತು ಅಭಿವೃದ್ಧಿ ನಿಗಮ	4	6	4	6			4	5
102	ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ	9	20	9	20			3	6
103	ಕರ್ನಾಟಕ ಭೂ ಸೇನಾ ನಿಗಮ	53	20	53	20			46	19
104	ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ	1		1				1	
105	ಕರ್ನಾಟಕ ವಿದ್ಯುತ್ ನಿಗಮ	103	76	103	76			103	71
106	ಕರ್ನಾಟಕ ಬೀಜ ನಿಗಮ	3		3				3	
107	ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಮಂಡಳಿ	3	2	3	2				
108	ಕರ್ನಾಟಕ ರೇಷ್ಮೇ ಮಾರುಕಟ್ಟೆ ಮಂಡಳಿ	2	1	2	1			2	1
109	ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿ.	7		2		5		2	
110	ಕರ್ನಾಟಕ ರಾಜ್ಯ ಆಗ್ರೊ ಕಾರ್ನ್ ಪ್ರಾಡಕ್ಟ್ಸ್	9	5	9	5			5	1

1	2	3	4	5	6	7	8	9	10
111	ಕರ್ನಾಟಕ ರಾಜ್ಯ ಗೊಬ್ಬರ ಅಭಿವೃದ್ಧಿ	1	2			1	2		
112	ಕರ್ನಾಟಕ ರಾಜ್ಯ ನಿರ್ಮಾಣ ನಿಗಮ	14	6			14	6		
113	ಕರ್ನಾಟಕ ರಾಜ್ಯ ಸಹಕಾರಿ ಮಾರುಕಟ್ಟೆ ಮಹಾ ಮಂಡಳಿ	11	8			11	8		
114	ಕರ್ನಾಟಕ ರಾಜ್ಯ ಸಹಕಾರಿ ಗ್ರಾಹಕರ ಮಹಾ ಮಂಡಳಿ	26	11			26	11		
115	ಕರ್ನಾಟಕ ರಾಜ್ಯ ಸಹಕಾರಿ ಎಣ್ಣೆ ಬೀಜಗಳ ಉತ್ಪಾದಕರ ಮಹಾ ಮಂಡಳಿ	4				4			
116	ಕರ್ನಾಟಕ ರಾಜ್ಯ ಕೊಳಚೆ ನಿರ್ಮೂಲನ ಮಂಡಳಿ	14	7	10	3	4	4	10	3
117	ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ	20	14			20	14		
118	ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ	3	1	3	1			3	1
119	ಕರ್ನಾಟಕ ಸಹಕಾರಿ ಕೈಮಗ್ಗ ನೇಕಾರರ ಮಹಾ ಮಂಡಳಿ	13	2			13	2		
120	ಕರ್ನಾಟಕ ಮೀನುಗಾರಿಕೆ	14	9			14	9		
121	ಕರ್ನಾಟಕ ಆರಕ್ಷಕ ವಸತಿ ನಿಗಮ	8	6	8	6			8	6
122	ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಅಭಿವೃದ್ಧಿ ನಿಗಮ	1	8	1	8			1	8

1	2	3	4	5	6	7	8	9	10
123	ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ	5	8	5	8			5	8
124	ಕರ್ನಾಟಕ ರಾಜ್ಯ ಬೀಜ ಪ್ರಮಾಣೀಕರಣ ಸಂಸ್ಥೆ	1	3	1	3			1	3
125	ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಮಂಡಳಿ	5	2	5	2			5	2
126	ಕರ್ನಾಟಕ ಮಾಂಸ ಮತ್ತು ಕೋಳಿ ಮಾರುಕಟ್ಟೆ ಮಹಾ ಮಂಡಳಿ	1		1				1	
127	ಕವಿಕ	8	1	8	1			8	1
128	ಕಿಯೋನಿಕ್ಸ್ ಬೆಂಗಳೂರು	20	6			20	6		
129	ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ	31	16	31	16			21	11
130	ಲಿಡ್ಕರ್	2	6	2	6			2	6
131	ಮಾರ್ಕಟಿಂಗ್ ಕನ್ಸ್ಲ್ಟೆಂಟ್ ಅಂಡ್ ಏಜೆನ್ಸೀಸ್		2		2				2
132	ಎಂ ಎಸ್ ಐ ಎಲ್	13	8	13	8			12	8
133	ಮೈಸೂರು ಖನಿಜ ನಿಗಮ	6	6	6	6			4	3
134	ಮೈಸೂರು ಕಾಗದದ ಕಾರ್ಖಾನೆ ಭದ್ರಾವತಿ	114	65	114	65				
135	ಮೈಸೂರು ಸಕ್ಕರೆ ಕಾರ್ಖಾನೆ ಮಂಡ್ಯ	4	15	4	15			2	4
136	ಮೈಸೂರು ವಿದ್ಯುತ್ ಕಾರ್ಖಾನೆ	16	12			16	12		
137	ಎನ್ ಜಿ ಇ ಎಫ್	5	3			5	3		

1	2	3	4	5	6	7	8	9	10
138	ಸಂಜಯ್ ಗಾಂದಿ ಅಪಘಾತಗಳ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ	4	4	4	4			3	4
139	ಶ್ರೀ ಜಯದೇವ ಹೃದ್ರೋಗ ಸಂಸ್ಥೆ	18	19	18	19			14	9
140	ತಾರಾನಾಥ ಸರ್ಕಾರಿ ಆರ್ಯವೇಧ ವೈದ್ಯಕೀಯ ಕಾಲೇಜು ಬಳ್ಳಾರಿ	1		1				1	
141	ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬಳ್ಳಾರಿ	16	2	16	2			6	
142	ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮ	3		3	1				
	ಇ– ಒಟ್ಟು	2931	895	2444	711	487	184	2155	543
	ಈ– ನಗರ ಪಾಲಿಕೆಗಳು								
143	ಬೆಂಗಳೂರು ಮಹಾ ನಗರ ಪಾಲಿಕೆ	64	43	64	43			35	24
144	ಬೆಳಗಾಂ ನಗರ ಪಾಲಿಕೆ	17	17	17	17			13	12
145	ಗುಲ್ಬರ್ಗ ನಗರ ಪಾಲಿಕೆ	15	16	15	16			15	16
146	ಹುಬ್ಬಳ್ಳಿ ಧಾರವಾಡ ನಗರಪಾಲಿಕೆ	9	3	9	3			9	3
147	ಮಂಗಳೂರು ನಗರ ಪಾಲಿಕ	11	9	11	9			11	9
148	ಮೈಸೂರು ನಗರ ಪಾಲಿಕೆ	6	7	6	7			6	7
	ಈ–ಒಟ್ಟು	122	95	122	95	0	0	89	71
	ಒಟ್ಟು–ಅ,ಇ,ಈ	3654	1358	3144	1145	510	213	2560	795
	ಒಟ್ಟು–ಅ,ಆ,ಇ ಮತ್ತು ಈ	13049	4171	11183	3314	1866	857	9617	2657
			17220		14497		2723		12274

ಕ್ರ ಸಂ ಅ ಆ ಕಾಲೇಜು ಶಿಕ್ಷಣ ಇಲಾಖೆಯು 1356 ಹಿಂಬಾಕಿ ಹುದ್ದೆಗಳನ್ನು ಅನುದಾನಿತ ಕಾಲೇಜುಗಳಲ್ಲಿ ಗುರುತಿಸಿದೆ ಇದರಲ್ಲಿ 166 ಹುದ್ದೆಗಳನ್ನು ಪದವಿಪೂರ್ವ ಶಿಕ್ಷಣ ಇಲಾಖೆಗೆ ವರ್ಗಾಯಿಸಿದ್ದು 1006 ಹುದ್ದೆಗಳಿಗೆ ಕಾರ್ಯಭಾರ/ ಖಾಲಿ ಹುದ್ದೆಗಳು ಅನುದಾನಿತ ಕಾಲೇಜುಗಳಲ್ಲಿ ಇರುವುದಿಲ್ಲ

ಕ್ರ ಸಂ 41 – ಒಂದು ಹುದ್ದೆಯನ್ನು ಮುಂದೆ ಉದ್ಭವವಾಗುವ ಖಾಲಿ ಹುದ್ದೆಗೆ ಭರ್ತಿ ಮಾಡಲಾಗುವುದು

ಕ್ರ ಸಂ 46ಅ – ಅನುದಾನಿತ ಕಾಲೇಜುಗಳಲ್ಲಿ ಗುರುತಿಸಿದ 213 ಹುದ್ದೆಗಳಲ್ಲಿ 115 ಹುದ್ದೆಗಳಿಗೆ ಸಾಕಷ್ಟು ಕಾರ್ಯಾಭಾರವಿರುವುದಿಲ್ಲ/ಹಾಲಿ ಹುದ್ದೆ ಇರುವುದಿಲ್ಲ ಆದುದರಿಂದ ಇವುಗಳನ್ನು ಮುಂದೆ ಹುದ್ದೆಗಳು ಉದ್ಭವವಾದಾಗ ಭರ್ತಿ ನೀಡಲಾಗುವುದು

ಕ್ರ ಸಂ 50 ಅ – ಅನುದಾನಿತ ಸಂಸ್ಥೆಗಳಲ್ಲಿ ಗುರುತಿಸಿರುವ ಒಟ್ಟು 649 ಹುದ್ದೆಗಳಲ್ಲಿ 450 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಲು ಸಾಧ್ಯವಾಗುತ್ತಿದ್ದು ಉಳಿದ 199 ಹುದ್ದೆಗಳನ್ನು ಮುಂದೆ ಉದ್ಭವವಾಗುವ ಖಾಲಿ ಹುದ್ದೆಗೆ ನೇಮಕಾತಿ ಮಾಡಲಾಗುವುದು

ಕ್ರ ಸಂ 50 ಇ – ಅನುದಾನಿತ ಸಂಸ್ಥೆಗಳಲ್ಲಿ ಒಟ್ಟು 174 ಹುದ್ದೆಗಳಲ್ಲಿ 102 ಹುದ್ದೆಗಳನ್ನು ಮುಂದೆ ಉದ್ಭವಿಸುವ ಖಾಲಿ ಹುದ್ದೆಗೆ ಭರ್ತಿ ಮಾಡಲಾಗುವುದು

ಕ್ರ ಸಂ 50 ಈ – ನೇಮಕಾತಿಯಾದವರಲ್ಲಿ ಪರಿಶಿಷ್ಟ ಜಾತಿಯ 239 ಮತ್ತು ಪರಿಶಿಷ್ಟ ಪಂಗಡದ 54 ಅಭ್ಯರ್ಥಿಗಳು ಹಾಜರಾಗಿರುವುದಿಲ್ಲ

ಕ್ರ ಸಂ 56 – 127 ಹುದ್ದೆಗಳನ್ನು ಮುಂದೆ ಉದ್ಭವಿಸುವ ಖಾಲಿ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗುವುದು

ಕ್ರ ಸಂ 62 ಅ/ಆ – ತಾಂತ್ರಿಕ ಶಿಕ್ಷಣ ಇಲಾಖೆಯ ಅನುದಾನಿತ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳಲ್ಲಿ 562 ಹಿಂಬಾಕಿ ಹುದ್ದೆಗಳನ್ನು ಗುರುತಿಸಿದ್ದು ಇದರಲ್ಲಿ 339 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಲು ಈ ಕಾಲೇಜುಗಳಿಂದ ಸಾಧ್ಯವಾಗುತ್ತದೆ ಉಳಿದ ಹುದ್ದೆಗಳನ್ನು ಮುಂದೆ ತುಂಬಲಾಗುವುದು

ಕ್ರ ಸಂ 74 0 ಸಚಿವ ಸಂಪುಟ ಉಪ ಸಮಿತಿಯ ದಿನಾಂಕ 27 3 2003 ರ ಸಭೆಯಲ್ಲಿ 42 ಹುದ್ದೆಗಳನ್ನು ಮುಂದೆ ಉದ್ಭವವಾಗುವ ಖಾಲಿ ಹುದ್ದೆಗೆ ನೇಮಕಾತಿ ಮಾಡಲು ತೀರ್ಮಾನಿಸಿದೆ

ಕ್ರ ಸಂ 77 – ಸಚಿವ ಸಂಪುಟ ಉಪ ಸಮಿತಿಯು 10 ಹುದ್ದೆಗಳನ್ನು ಮುಂದೆ ಉದ್ಭವವಾಗುವ ಖಾಲಿ ಹುದ್ದೆಗಳಲ್ಲಿ ಭರ್ತಿ ಮಾಡಲು ತೀರ್ಮಾನಿಸಿದೆ

ಕ್ರ ಸಂ 81 – ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಬೆಂಗಳೂರು ರಲ್ಲಿ ಗುರುತಿಸಲಾಗಿರುವ 120 ಹುದ್ದೆಗಳನ್ನು ಆರ್ಥಿಕ ಬಿಕ್ಕಟ್ಟು ಹಾಗೂ ಕೆಲಸಗಾರರ ಸಂಖ್ಯೆಯನ್ನು ಕಡಿಮೆಗೊಳಿಸುತ್ತಿರುವ ಕಾರಣಗಳಿಗಾಗಿ ಭರ್ತಿ ಮಾಡಲು ಸಾಧ್ಯವಾಗುವುದಿಲ್ಲ ಇವುಗಳನ್ನು ಮುಂದೆ ಹುದ್ದೆಗಳು ಖಾಲಿಯಾದಾಗ ಭರ್ತಿ ಮಾಡಲಾಗುವುದು

ಕ್ರ ಸಂ 90(ಉ) 226 ಹುದ್ದೆಗಳನ್ನು ಮುಂದೆ ಉದ್ಭವವಾಗುವ ಖಾಲಿ ಹುದ್ದೆಗಳಿಗೆ ನೇಮಕಾತಿ ಮಾಡಲಾಗುವುದು

ಕ್ರ ಸಂ 116 –08 ಹುದ್ದೆಗಳನ್ನು ಮುಂದೆ ಉದ್ಭವವಾಗುವ ಖಾಲಿ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗುವುದು

ಕ್ರ ಸಂ – 119 – 15 ಹುದ್ದೆಗಳನ್ನು ಮುಂದೆ ಉದ್ಭವವಾಗುವ ಖಾಲಿ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗುವುದು

ದಿನಾಂಕ 8 1 2004 ರ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು

ರಾಜ್ಯದಲ್ಲಿ ಸಕ್ಕರೆ ಮಾರಾಟ ಮಾಡಲು ರಚಿಸಲಾಗಿರುವ ಉನ್ನತ ಮಟ್ಟದ ಸಮಿತಿ ಬಗ್ಗೆ

209 (564) ಶ್ರೀ ಎಂ ಎಸ್ ಆತ್ಮಾನಂದ (ಮಂಡ್ಯ) ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಉತ್ಪಾದನೆ ಆಗಿರುವ ಸಕ್ಕರೆ ಪ್ರಮಾಣ ಎಷ್ಟು

ಆ) ಉತ್ಪಾದನೆಯಾಗಿರುವ ಸಕ್ಕರೆಯಲ್ಲಿ ಕಾರ್ಖಾನೆಗಳು ಮಾರಿರುವ ಸಕ್ಕರೆಯ ಪ್ರಮಾಣವೆಷ್ಟು

ಇ) ರಾಜ್ಯದಲ್ಲಿ ಉತ್ಪಾದನೆಯಾಗಿ ಮಾರಾಟವಾಗದೆ ಸಂಗ್ರಹವಾಗಿರುವ ಸಕ್ಕರೆಯನ್ನು ವಿಲೇವಾರಿ ಮಾಡಲು ರಾಜ್ಯ ಸರ್ಕಾರ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆಯೇ

ಈ) ಈ ಸಮಿತಿಯ ವಿವರಗಳೇನು ಇದು ಯಾವಾಗ ಕಾರ್ಯಾರಂಭ ಮಾಡುತ್ತದೆ ಹಾಗೂ ಇದರ ವ್ಯಪ್ತಿಯೇನು

ಉ) ಸಕ್ಕರೆ ಉದ್ಯಮದ ಸಂಕಷ್ಟ ಪರಿಸ್ಥಿತಿಗೆ ನೆರವಾಗಲು ಸರ್ಕಾರ ರೂಪಿಸಿರುವ ಮಾರ್ಗೋಪಾಯಗಳು ಯಾವುವು?

ಶ್ರೀ ಎಂ ಮಹಾದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಅಂದರೆ 2003–04 ನೇ ಹಂಗಾಮಿನಲ್ಲಿ ದಿನಾಂಕ 30–11–03ರಲ್ಲಿ ಇದ್ದಂತೆ 3 70 ಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗಿರುತ್ತದೆ 2003–04 ನೇ ಸಾಲಿನ ಹಂಗಾಮು ಸೆಪ್ಟೆಂಬರ್ 2004 ರವರೆಗೆ ಇದ್ದು ಅಲ್ಲಿಯವರೆಗೆ ಅಂದಾಜು 15 ಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗುವ ನಿರೀಕ್ಷೆ ಇದೆ

ಆ) ಕಳೆದ 3 ವರ್ಷಗಳಲ್ಲಿ ಸಕ್ಕರೆ ದಾಸ್ತಾನು ಉತ್ಪಾದನೆ ಮಾರಾಟದ ವಿವರ ಈ ತೀರಿ ಇದೆ

(ಲಕ್ಷ ಟನ್‌ಗಳಲ್ಲಿ)

ಕ್ರ ಸಂ	ಹಂಗಾಮು (ಅಕ್ಟೋಬರ್ ನಿಂದ ಸೆಪ್ಟೆಂಬರ್‌ರವರೆಗೆ	ಪ್ರಾರಂಭಿಕ ದಾಸ್ತಾನು	ಉತ್ಪಾದನೆ	ಒಟ್ಟು (3+4)	ಮಾರಾಟ	ಅಂತಿಮ ದಾಸ್ತಾನು
1	2	3	4	5	6	7
1)	2001–02	9 74	15 60	25 34	17 04	8 30
2)	2002–03	8 30	18 78	27 08	18 70	8 38
3)	2003–04 (ನವೆಂಬರ್ 2003 ರವರೆಗೆ)	8 30	3 67	11 97	2 29	9 68

ಇ) ರಚಿಸಿಲ್ಲ

ಈ) ಉದ್ಭವಿಸುವುದಿಲ್ಲಾ

ಉ) ರಾಜ್ಯದ ಸಕ್ಕರೆ ಕಾರ್ಖಾನೆಗಳ ಸಮಸ್ಯೆಗಳನ್ನು ಕುರಿತು ಅಧ್ಯಯನ ಮಾಡಿ ಪರಿಹಾರ ಸೂಚಿಸಿ ವರದಿ ನೀಡುವಂತೆ ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ

ಡಿಇ (ಸಿಎಸ್‌ಸಿ 1 2003 ದಿನಾಂಕ 9 1 2003 ರನ್ವಯ ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಿದ್ದು ಈ ಸಮಿತಿಯು ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಅಂತಿಮ ತೀರ್ಮಾನವನ್ನು ಕಾಯಲಾಗುತ್ತಿದೆ

ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯು ರೋಗಗ್ರಸ್ತವಾಗುತ್ತಿರುವುದು

211 (566) ಶ್ರೀ ಎಂ ಎಸ್ ಆತ್ಮಾನಂದ (ಮಂಡ್ಯ) ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯು ಪ್ರಸಕ್ತ ಸಾಲಿನಲ್ಲಿ ಅರೆದಿರುವ ಕಬ್ಬಿನ ಪ್ರಮಾಣವೆಷ್ಟು ಹಾಗೂ ಉತ್ಪಾದನೆ ಮಾಡಿರುವ ಸಕ್ಕರೆಯ ಪ್ರಮಾಣವೆಷ್ಟು

ಆ) ಈ ಕಾರ್ಖಾನೆಯು ಆರ್ಥಿಕ ಪರಿಸ್ಥಿತಿಯು ದಿನೇ ದಿನೇ ಹದಗೆಟ್ಟು ಕಾರ್ಖಾನೆಯು ರೋಗಗ್ರಸ್ತವಾಗುವ ಹಾದಿಯಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ಈ ಕಾರ್ಖಾನೆಯನ್ನು ಕಾಪಾಡಲು ಸರ್ಕಾರವು ಪುನಶ್ಚೇತನಾ ಕ್ರಮಗಳನ್ನೆನಾದರೂ ಆಲೋಚಿಸಿ ರೂಪಿಸಿದೆಯೇ

ಈ) ರೂಪಿಸಿದಲ್ಲಿ ಇದರ ವಿವರಗಳೇನು, ರೂಪಿಸಲಾಗದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಎಂ ಮಹಾದೇವ್ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ಮೈಸೂರು ಸಕ್ಕರೆ ಕಾರ್ಖಾನೆಯು ಪ್ರಸಕ್ತ ಸಾಲಿನಲ್ಲಿ ಒಟ್ಟು 279143 00 ಲಕ್ಷ ಮೆ ಟನ್ ಕಬ್ಬನ್ನು ಅರೆದು 2,48,472 ಕ್ವಿಂಟಾಲ್ ಸಕ್ಕರೆಯನ್ನು ಉತ್ಪಾದಿಸಿರುತ್ತದೆ

ಆ) ಗಮನಕ್ಕೆ ಬಂದಿದೆ

ಇ) ಕಾರ್ಖಾನೆಯ ಪುನರ್ ನಿರ್ಮಾಣ ಪುನಶ್ಚೇತನಾ ಕ್ರಮಗಳನ್ನು ಕೈಗೊಳ್ಳಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಲಾಗಿದೆ

ಈ) ಪ್ರಸ್ತಾವನೆ ಬಂದ ನಂತರ ಪರಿಶೀಲಿಸಲಾಗುವುದು

ಮಂಡ್ಯದಲ್ಲಿನ ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಕೋ ಜನರೇಷನ್ ಘಟಕ ಸ್ಥಾಪನೆ ಕುರಿತು

212 (567) ಶ್ರೀ ಎಂ ಎಸ್ ಆತ್ಮಾನಂದ (ಮಂಡ್ಯ) ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯದಲ್ಲಿನ ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಕೋಜನರೇಷನ್ ಘಟಕ ಸ್ಥಾಪಿಸಲಾಗುತ್ತಿದೆಯೇ

ಆ) ಇದಕ್ಕೆ ತಗಲುವ ಅಂದಾಜು ಮೊತ್ತವೆಷ್ಟು ಇದಕ್ಕೆ ಹೂಡಲಾಗಿರುವ ಬಂಡವಾಳದ ಮೂಲಗಳು ಯಾವುವು

ಇ) ಈ ಘಟಕದ ಸ್ಥಾಪನೆಯ ಕಾಮಗಾರಿ ನಿಗಧಿತ ಗುರಿಯಂತೆ ಅನುಷ್ಠಾನಗೊಳ್ಳುತ್ತಿದೆಯೇ ಪ್ರಸ್ತುತ ಇದು ಯಾವಾಗ ಪೂರ್ಣಗೊಂಡು ಈ ಘಟಕ ಎಂದು ಕಾರ್ಯಾರಂಭ ಮಾಡುತ್ತದೆ

ಈ) ಈ ಘಟಕದಿಂದ ಕಾರ್ಖಾನೆಗೆ ನಿರೀಕ್ಷಿಸಲಾಗಿರುವ ಆದಾಯವೆಷ್ಟು?

ಶ್ರೀ ಎಂ ಮಹಾದೇವ್ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ಹೌದು, ಸ್ಥಾಪಿಸಲಾಗುತ್ತಿದೆ

ಆ) ಇದಕ್ಕೆ ತಗಲುವ ಅಂದಾಜು ಮೊತ್ತ ರೂ 76 00 ಕೋಟಿ ಬಂಡವಾಳದ ಮೂಲಗಳು ಕೆಳಕಂಡಂತಿದೆ

1) ಹುಡ್ಕೋದಿಂದ	ರೂ 57 00 ಕೋಟಿ
2) ಡಿಬೆಂಚರುಗಳ ಮೂಲಕ	ರೂ 15 00 ಕೋಟಿ
3) ಕರ್ನಾಟಕ ಸರ್ಕಾರದಿಂದ	ರೂ 04 00 ಕೋಟಿ

ಇ) ಈ ಘಟಕದ ಸ್ಥಾಪನೆಯ ಕಾಮಗಾರಿ ಕೆಲಸ ಕಾರ್ಯಗಳಲ್ಲಿ ಸ್ವಲ್ಪ ಮಟ್ಟಿನ ವಿಳಂಬ ಉಂಟಾಗಿತ್ತು ಮತ್ತು ನಿಗದಿತ ಗುರಿಯಂತೆ ಅನುಷ್ಠಾನಗೊಳಿಸುವಲ್ಲಿ ಸ್ವಲ್ಪ ಹಿಂದೆ ಬಿದ್ದಿತ್ತು ಪ್ರಸ್ತುತ ಶೇ 90ರಷ್ಟು ಸಾಮಗ್ರಿಗಳು ತಲುಪಿರುತ್ತದೆ ಶೇ 60 ರಷ್ಟು ನಿರ್ಮಾಣ ಕಾರ್ಯಗಳು ಮುಗಿದಿರುತ್ತದೆ ಇನ್ನು ಕೆಲವು ತಿಂಗಳುಗಳಲ್ಲಿ ನಿರ್ಮಾಣ ಕಾರ್ಯವು ಪೂರ್ಣಗೊಳ್ಳುವ ನಿರೀಕ್ಷೆಯಲ್ಲಿರುತ್ತದೆ

ಈ) ಈ ಘಟಕವು ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸಿದಲ್ಲಿ ರೂ 35 00 ಕೋಟಿಗಳ ಆದಾಯ ನಿರೀಕ್ಷಿಸಬಹುದು

ಕಾರವಾರ ಬಂದರು ಅಭಿವೃದ್ಧಿ ಹಾಗೂ ವ್ಯವಹಾರ

215 (285) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಾರವಾರ ಬಂದರಿನಿಂದ ಹಾಲಿ ಯಾವ ಯಾವ ಉತ್ಪನ್ನಗಳು ಆಮದಾಗುತ್ತಿವೆ

ಆ) ಕಾರವಾರ ಬಂದರನ್ನು ಅಭಿವೃದ್ಧಿ ಪಡಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು

ಇ) ರಾಜ್ಯ ಸರ್ಕಾರಕ್ಕೆ ಕಾರವಾರ ಬಂದರಿನಿಂದ ಬರುತ್ತಿರುವ ಆದಾಯ ಎಷ್ಟು?

ಶ್ರೀ ವಸಂತ ವಿ ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು)

ಅ) ಕಾರವಾರ ಬಂದರಿನಿಂದ ಹಾಲಿ ಕೈಗಾರಿಕಾ ಉಪ್ಪು, ರಾಕ್ ಫೋಸ್‌ಫೇಟ್, ಕಚ್ಚಾ ಸಕ್ಕರೆ, ಫರ್ನೀಸ್ ಆಯಿಲ್, ಪಾಮ್ ಆಯಿಲ್, ಬಿಟುಮನ್, ಕೆರೋಸಿನ್ ಮುಂತಾದ ಸರಕುಗಳು ಆಮದಾಗುತ್ತದೆ ಹಾಗೂ ಗ್ರಾನೈಟ್ ಅಲುಮಿನಿಯಂ ಜೋಳ, ಸಕ್ಕರೆ, ಮೊಲಾಸಿಸ್, ಫೋಸ್‌ಫರಿಕ್ ಆಸಿಡ್, ಕಬ್ಬಿಣದ ಅದಿರು ಮುಂತಾದ ಸರಕುಗಳು ರಫ್ತಾಗುತ್ತವೆ

ಆ) ಕಾರವಾರ ಬಂದರಿನ ಎರಡನೆ ಹಂತದ ಅಭಿವೃದ್ಧಿ ಬಗ್ಗೆ ಮೆ ಟೆಕ್‌ಸೋಕ್ ಇವರು ಯೋಜನಾ ವರದಿಯನ್ನು ನೀಡಿದ್ದು ರೂ 200 ಕೋಟಿ ಅಂದಾಜು ವೆಚ್ಚದಲ್ಲಿ ಎರಡನೆಯ ಹಂತದ ಅಭಿವೃದ್ಧಿಯನ್ನು ಖಾಸಗಿ ಸಹಭಾಗಿತ್ವದಡಿಯಲ್ಲಿ ಅಥವಾ ಕೇಂದ್ರ ಸರ್ಕಾರದ ನೆರವಿನೊಂದಿಗೆ ಕೈಗೊಳ್ಳಲು ಉದ್ದೇಶಿಸಿದ್ದು, ಸದ್ರಿ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ

ಇ) ಕಾರವಾರ ಬಂದರಿನ ನೌಕಾ ಚಟುವಟಿಕೆಗಳಿಂದಾಗಿ 2002–03ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ರೂ 5 82,68481/– ನೇರ ಆದಾಯವನ್ನು ಗಳಿಸಿರುತ್ತದೆ

ಹುಬ್ಬಳ್ಳಿ ವಿಮಾನ ನಿಲ್ದಾಣದ ಅಭಿವೃದ್ಧಿ

216 (288) ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ) ಮಾನ್ಯ ರೇಷ್ಮೆ, ಜವಳಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ ವಿಮಾನ ನಿಲ್ದಾಣದಿಂದ ಹಾಲಿ ಯಾನ ಪ್ರದೇಶಗಳಿಗೆ ವಿಮಾನ ಸೌಲಭ್ಯ ಕಲ್ಪಿಸಲಾಗಿದೆ

ಆ) ಇದನ್ನು ಹೆಚ್ಚಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ

ಇ) ಹುಬ್ಬಳ್ಳಿ ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್ ಎಂ ರೇವಣ್ಣ (ರೇಷ್ಮೆ, ಜವಳಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನ ಯಾನ ಸಚಿವರು)

ಅ) ಪ್ರಸ್ತುತ ಬೆಂಗಳೂರು ಮತ್ತು ಹುಬ್ಬಳ್ಳಿ ನಡುವೆ ದಿನವು ವಿಮಾನ ಯಾನ ಸೇವೆಯು ಆಪರೇಟ್ ಆಗುತ್ತಿದೆ

ಆ) ಹುಬ್ಬಳ್ಳಿಯಿಂದ ವಿಮಾನ ಸೇವೆಯ ಏರಿಕೆಯು ಸಂಚಾರ ಸಾಮರ್ಥ್ಯವನ್ನು ಅವಲಂಬಿಸಿದೆ ಇಷ್ಟರೊಳಗೆ ಹುಬ್ಬಳ್ಳಿ ಮತ್ತು ಮುಂಬಯಿ ನಡುವೆ ಸಹ ವಿಮಾನ ಯಾನ ಸೇವೆಗಳನ್ನು ಆರಂಭಿಸುವ ಸಾಧ್ಯತೆಯಿದೆ ಸರ್ಕಾರದ ವತಿಯಿಂದ ಬೆಂಗಳೂರು ಮತ್ತು ಮಂಗಳೂರನ್ನು ಬಿಟ್ಟು ರಾಜ್ಯದಲ್ಲಿ ಹೊಸ ಸ್ಥಳಗಳಿಗೆ ಪ್ರಾದೇಶಿಕ ವಿಮಾನ ಯಾನ ಸೇವೆಯನ್ನು ಒದಗಿಸಿವುದನ್ನು ಉತ್ತೇಜಿಸಲು, ಎವಿಯೇಷನ್ ಟರ್ಬೈನ್ ಇಂಧನದ ಮೇಲಿನ ಮಾರಾಟ ತೆರಿಗೆಯನ್ನು ಶೇಕಡಾ 4ಕ್ಕೆ ಇಳಿಸಲಾಗಿದೆ

ಇ) ಹುಬ್ಬಳ್ಳಿ ವಿಮಾನ ನಿಲ್ದಾಣವು ಭಾರತೀಯ ವೈಮಾನಿಕ ಪ್ರಾಧಿಕಾರಕ್ಕೆ ಸೇರಿದೆ ಪ್ರಸ್ತುತ ಅಲ್ಲಿರುವ ಈಗಿನ ಸೌಲಭ್ಯಗಳು 50 ಆಸನ ಸಾಮರ್ಥ್ಯವುಳ್ಳ ಮಿತಿಯ ವಿಮಾನಗಳ ಹಾರಾಟಕ್ಕೆ ತಕ್ಕಷ್ಟಿದೆ

ಧಾರವಾಡದ ಕೆ ಎಂ ಎಫ್ ಸಂಸ್ಕರಣಾ ಘಟಕದ ಸಾಮರ್ಥ್ಯ

217 (576) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡದಲ್ಲಿರುವ ಕೆ ಎಂ ಎಫ್ ನ ಸಂಸ್ಕರಣಾ ಘಟಕದ ಪೂರ್ಣ ಸಾಮರ್ಥ್ಯ ಎಷ್ಟು

ಆ) ಸಂಸ್ಕರಣಾ ಘಟಕದ ಪೂರ್ಣ ಪ್ರಮಾಣದ ಸಾಮರ್ಥ್ಯವನ್ನು ಬಳಸಿಕೊಳ್ಳಲಾಗುತ್ತಿದೆಯೇ ಇಲ್ಲದಿದ್ದಲ್ಲಿ ಕಾರಣಗಳೇನು

ಇ) 1993ರಿಂದ 2003ರವರೆಗೆ ಘಟಕದ ಸಂಸ್ಕರಣದ ವಿವಿರ ನೀಡುವುದು

ಈ) ಧಾರವಾಡ ನಗರಕ್ಕೆ ಯಾವ ಯಾವ ಜಿಲ್ಲೆಗಳಲ್ಲಿ ಹಾಲು ಬರುತ್ತಿದೆ (ಕಳೆದ ಮೂರು ವರ್ಷಗಳ ವಿವರವನ್ನು ಜಿಲ್ಲಾವಾರು ನೀಡುವುದು)

ಉ) ಧಾರವಾಡ ಕೆ ಎಂ ಎಫ್ ಸಂಸ್ಕರಣಾ ಘಟಕದ ಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು

ಊ) ಸಂಸ್ಕರಣಾ ಘಟಕ ಹಾನಿಯಾಗಲು ಕಾರಣವೇನು?

ಶ್ರೀ ಎಂ ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಧಾರವಾಡ ಸರ್ಕಾರಿ ಹಾಲು ಉತ್ಪಾದಕರ ಒಕ್ಕೂಟದಲ್ಲಿರುವ ಡೇರಿ ಸಂಸ್ಕರಣಾ ಘಟಕದ ಪೂರ್ಣ ಸಾಮರ್ಥ್ಯ ದಿನಕ್ಕೆ 2 ಲಕ್ಷ ಲೀಟರ್ ಆಗಿರುತ್ತದೆ (12 ಲಕ್ಷ ಲೀಟರ್ ಹಾಲಿನ ಮಿಡಿ ಪರಿವರ್ತನಾ ಸಾಮರ್ಥ್ಯ ಸೇರಿ)

ಆ) ಸಂಸ್ಕರಣಾ ಘಟಕದ ಪೂರ್ಣ ಪ್ರಮಾಣದ ಸಾಮರ್ಥ್ಯವನ್ನು ಸಾಮಾನ್ಯವಾಗಿ ಸಮೃದ್ಧಿ ಕಾಲದಲ್ಲಿ (ಅಕ್ಟೋಬರ್ ನಿಂದ ಜನವರಿ ವರೆಗೆ) ಪೂರ್ಣವಾಗಿ ಬಳಸಿಕೊಳ್ಳಲಾಗುತ್ತಿದೆ ಹಾಲು ಪರಿವರ್ತನಾ ಘಟಕಗಳು ಸಮೃದ್ಧಿ ಕಾಲದಲ್ಲಿ ಮಾರಾಟವಾಗದೆ ಉಳಿಯುವ ಹೆಚ್ಚುವರಿ ಹಾಲನ್ನು ಹಾಲಿನ ಪುಡಿ ಮತ್ತು ಇತರೆ ಹಾಲು ಉತ್ಪನ್ನಗಳನ್ನು ತಯಾರಿಸಲು ಬಳಸಿಕೊಳ್ಳಲಾಗುತ್ತದೆ ಈ ಘಟಕವನ್ನು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಸಮೃದ್ಧಿ ಕಾಲದಲ್ಲಿ ಮಾರಟವಾಗದೆ ಉಳಿಯುವ ಹೆಚ್ಚುವರಿ ಹಾಲನ್ನು ಸಂಸ್ಕರಿಸಿ ಉತ್ಪನ್ನಗಳನ್ನಾಗಿ ತಯಾರಿಸಲು ಸ್ಥಾಪಿಸಲಾಗಿದೆ

ಬರಗಾಲ ಮುಂತಾದ ಕಾರಣಗಳಿಂದಾಗಿ ನಿರೀಕ್ಷಿಸಿದ ಮಟ್ಟದಲ್ಲಿ ಹೆಚ್ಚುವರಿ ಹಾಲು ಉತ್ಪಾದನೆಯಾಗದೆ ಸಾಕಷ್ಟು ಹಾಲು ಈ ಘಟಕಕ್ಕೆ ಪರಿವರ್ತನೆಗಾಗಿ ಸರಬರಾಜು ಆಗಿರುವುದಿಲ್ಲ ಆದರೂ ಸಹ ಕೋಲಾರ ಹಾಸನ ತುಮಕೂರು ಶಿವಮೊಗ್ಗ ಮೈಸೂರು ಬೆಂಗಳೂರು ಮುಂತಾದ ಜಿಲ್ಲೆಗಳಲ್ಲಿ ಉತ್ಪಾದನೆಯಾಗುವ ಹೆಚ್ಚುವರಿ ಹಾಲನ್ನು ಸಮೃದ್ಧಿ ಕಾಲದಲ್ಲಿ ಪರಿವರ್ತಿಸಿ ಘಟಕದಲ್ಲಿರುವ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ

ಇ)1993 ರಿಂದ 2003 ರವರೆಗೆ ಸರಾಸರಿ ಪ್ರತಿನಿತ್ಯ ಘಟಕದಲ್ಲಿ ಸಂಸ್ಕರಿಸಿರುವ ಹಾಲಿನ ವಿವರಗಳು ಈ ಕೆಳಕಂಡಂತಿರುತ್ತದೆ

ವರ್ಷ	ಹಾಲು ಸಂಸ್ಕರಣ ಪ್ರಮಾಣ (ಕೆ.ಜೆ ಗಳಲ್ಲಿ)	ಶೇಕಡಾವಾರು ಬಳಕೆಯಾದ ಸಂಸ್ಕರಣಾ ಸಾಮರ್ಥ್ಯ
1993–94	114174	57 1
1994–95	73971	37 0
1995–96	70948	35 0
1996–97	85776	42 9
1997–98	89433	44 7
1998–99	92326	46 2
1999–00	132351	66 2
2000–01	104299	52 1
2001–02	114469	57 2
2002–03	120868	60 4

ಈ) ಕಳೆದ ಮೂರು ವರ್ಷಗಳಿಂದ ಜಿಲ್ಲಾವಾರು ಧಾರವಾಡ ಹಾಲು ಒಕ್ಕೂಟಕ್ಕೆ ಬಂದಿರುವ ಹಾಲಿನ ವಿವರ ಈ ಕೆಳಕಂಡಂತಿದೆ (ಪ್ರತಿ ದಿನ ಸರಾಸರಿ ಕೆ ಜಿ ಗಳಲ್ಲಿ)

ಸಮೃದಿಕಾಲದಲ್ಲಿ ಕೋಲಾರ ಹಾಸನ ತುಮಕೂರು ಶಿವಮೊಗ್ಗ ಮೈಸೂರು ಬೆಂಗಳೂರು ಹಾಲು ಒಕ್ಕೂಟಗಳಿಂದಲೂ ಸಹ ಪರಿವರ್ತನೆಗೆ ಹಾಲು ಸ್ವೀಕರಿಸಲಾಗಿದೆ

ಜಿಲ್ಲೆಗಳು	2001–02	2002–03	2003–04
ಧಾರವಾಡ	9587	10296	9631

ಗದಗ	13309	14392	12451
ಹಾವೇರಿ	28345	31292	32567
ಉತ್ತರ ಕನ್ನಡ	8207	7360	6638
ಇತರೆ ಹಾಲು ಒಕ್ಕೂಟ	55021	57528	49682
ಒಟ್ಟು	114469	120868	110969

ಉ) 1 ಪ್ರತಿ ತಿಂಗಳು ಕರ್ನಾಟಕ ಹಾಲು ಮಹಾಮಂಡಳಿಯ ಕಾರ್ಯನಿರೂಪಣಾ ಸಮಿತಿ ಸಭೆಯಲ್ಲಿ ಧಾರವಾಡ ಪರಿವರ್ತನಾ ಘಟಕಕ್ಕೆ ಇತರೆ ಹಾಲು ಒಕ್ಕೂಟಗಳ ಹೆಚ್ಚುವರಿ ಹಾಲನ್ನು ಪರಿವರ್ತನೆಗೆ ಕಳುಹಿಸಿಕೊಡಲು ಹಾಲು ಸಂಚಲನಾ ಯೋಜನೆ ರೂಪಿಸಿ ಅದರಂತೆ ಕ್ರಮ ಅನುಸರಿಸಲಾಗುತ್ತಿದೆ

2 ಕಳೆದ ಮೂರು ವರ್ಷಗಳಿಂದ ಬರಗಾಲದ ಛಾಯೆಯಲ್ಲಿ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಹಾಲು ಉತ್ಪಾದನೆ ಕುಂಠಿತವಾಗಿದ್ದು ಧಾರವಾಡ ಹಾಲು ಒಕ್ಕೂಟದ ಕಾರ್ಯ ವ್ಯಾಪ್ತಿಯಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳ ಮುಖಾಂತರ ಹೆಚ್ಚಿನ ಹಾಲು ಉತ್ಪಾದನೆ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಇನ್ನು ಮುಂದಿನ ದಿನಗಳಲ್ಲಿ ಹೆಚ್ಚಿನ ಹಾಲು ಉತ್ಪಾದನೆಯನ್ನು ನಿರೀಕ್ಷಿಸಲಾಗಿದೆ

3 ಒಕ್ಕೂಟದಲ್ಲಿರುವ ಪರಿವರ್ತನಾ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳಲು ಹೊರ ರಾಜ್ಯಗಳ ಹಾಲನ್ನೂ ಪರಿವರ್ತಿಸಲು ಸಹ ಉಪಯೋಗಿಸಲಾಗುವುದು

ಊ) 1 ಉತ್ತರ ಕನಾಟಕದ ಇತರೆ ಒಕ್ಕೂಟಗಳಿಂದ ನಿರೀಕ್ಷಿಸಿದ ಮಟ್ಟದಲ್ಲಿ ಹೆಚ್ಚುವರಿ ಹಾಲು ಪರಿವರ್ತನೆಗೆ ಬಾರದೇ ಇರುವ ಕಾರಣ ವರ್ಷದಲ್ಲಿ ಹೆಚ್ಚಿನ ಅವಧಿಗೆ ಘಟಕದ ಪರಿವರ್ತನಾ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ

2 ಒಕ್ಕೂಟದಲ್ಲಿ ಸಹ ನಿರೀಕ್ಷಿಸಿದ ಮಟ್ಟದಲ್ಲಿ ಹಾಲು ಉತ್ಪಾದನೆಯಾಗುತ್ತಿಲ್ಲ

3 ಒಕ್ಕೂಟದಲ್ಲಿ ಸಿಬ್ಬಂದಿ ಸಂಖ್ಯೆ ಅವಶ್ಯಕತೆಗಿಂತ ಹೆಚ್ಚಾಗಿ ಇರುವುದು

4 ಹೊರ ರಾಜ್ಯದ ಖಾಸಗಿ ಡೇರಿಗಳು ಹಾಲಿನ ಮಾರಾಟದಲ್ಲಿ ಅನೈತಿಕ ಪೈಪೋಟಿ ನಡೆಸುತ್ತಿದ್ದು ಒಕ್ಕೂಟದ ಹಾಲು ಮತ್ತು ಹಾಲು ಉತ್ಪನ್ನಗಳ ಮಾರುಕಟ್ಟೆಗೆ ಧಕ್ಕೆ ಉಂಟಾಗಿರುವುದು

5 ಕಳೆದ 3–4 ವರ್ಷಗಳಲ್ಲಿ ಒಕ್ಕೂಟದ ಕಾರ್ಯವ್ಯಾಪ್ತಿಯಲ್ಲಿ ಬರಗಾಲ ಪರಿಸ್ಥಿತಿಯಿಂದ ನಿರೀಕ್ಷಿಸಿದ ಮಟ್ಟದಲ್ಲಿ ಹಾಲು ಶೇಖರಣೆ ಆಗದೇ ಇರುವುದು

ರಾಜ್ಯದಲ್ಲಿ ಅಂತರ್ಜಲ ಪ್ರಮಾಣ ಹೆಚ್ಚಳ

218 (577) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಾಲಿ ಪ್ರತಿ ಜಿಲ್ಲೆಯ ಅಂತರ್ಜಲದ ವಿವರಗಳನ್ನು ನೀಡುವುದು,

ಆ) ಅಂತರ್ಜಲದ ಪ್ರಮಾಣ ಕಡಿಮೆಯಾಗಿರುವುದು ನಿಜವೇ

ಇ) ಅಂತರ್ಜಲದ ಹೆಚ್ಚಳಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ಕಳೆದ ನಾಲ್ಕು ವರ್ಷಗಳಿಂದ ಬಿಡುಗಡೆ ಮಾಡಿರುವ ಹಾಗೂ ವೆಚ್ಚ ಮಾಡಿರುವ ಹಣ ಎಷ್ಟು (ವಿವರವನ್ನು ಜಿಲ್ಲಾವಾರು ವರ್ಷಾವಾರು ನೀಡುವುದು)

ಇ) ಹುಬ್ಬಳ್ಳಿ–ಧಾರವಾಡ ನಗರದ ಅಂತರ್ಜಲದ ಪ್ರಮಾಣವನ್ನು ಹೆಚ್ಚಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ವಿ ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ) ವಿವರಗಳನ್ನು ಅನುಬಂಧ– 1ರಲ್ಲಿ ನೀಡಲಾಗಿದೆ

ಆ) ಹೌದು

ಇ) ಕ್ಲಿಷ್ಟಕರವೆಂದು ಘೋಷಿಸಿರುವ ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟವನ್ನು ವೃದ್ಧಿಪಡಿಸಲು ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳಾದ ಚೆಕ್ ಡ್ಯಂ ಇಂಗು ಬಾವಿ ಇಂಗು ಕೊಳವೆ ಬಾವಿ, ಕೃತಕ ಡೈಕ್ ನಿರ್ಮಾಣ ಮಾಡುವುದು ಮತ್ತು ಗೋಕಟ್ಟೆ ಕಲ್ಯಾಣಿ ಇತ್ಯಾದಿ ರಚನೆಗಳಲ್ಲಿ ಹೂಳು ತೆಗೆಯುವ ಕಾರ್ಯಕ್ರಮಗಳನ್ನು ಇಲಾಖೆಯು ಹಮ್ಮಿಕೊಂಡು ಪ್ರಗತಿ ಸಾಧಿಸಲಾಗುತ್ತಿದೆ ವಿವರಗಳನ್ನು ಅನುಬಂಧ– 2ರಲ್ಲಿ ನೀಡಲಾಗಿದೆ

ಈ) ಗಣಿ ಮತ್ತು ಭೂವಿಜ್ಞಾನ ಇಲಾಖಾ ವತಿಯಿಂದ ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಿಲ್ಲ

31 12 1994ರಲ್ಲಿದ್ದಂತೆ ಕರ್ನಾಟಕ ರಾಜ್ಯದ ಅಂತರ್ಜಲ ಲಭ್ಯತೆಯ ವಿವರ

ಅನುಬಂಧ - 1

ಕ್ರಮ ಸಂಖ್ಯೆ	ಜಿಲ್ಲೆಯ ಹಸರು	ಅಂತರ್ಜಲದ ಉತ್ಕರ್ಷ (ಹೆಕ್ಟರ್ ಮೀಟರ್‌ಗಳಲ್ಲಿ)		ಅಂತರ್ಜಲ ಬಳಕೆ (ಹೆಕ್ಟರ್ ಮೀಟರ್‌ಗಳಲ್ಲಿ)		ಉಳಿಕೆ ಅಂತರ್ಜಲ ಉತ್ಕರ್ಷ (ಹೆಕ್ಟರ್ ಮೀಟರ್‌ಗಳಲ್ಲಿ)
		ಒಟ್ಟು ಮೊತ್ತ	ನಿವ್ವಳ	ಒಟ್ಟು	ನಿವ್ವಳ	
1	2	3	4	5	6	7
1	ಬೆಂಗಳೂರು (ನಗರ)	14371	12198	19942	13959	(-) 1761
2	ಬೆಂಗಳೂರು (ಗ್ರಾಮಾಂತರ)	62065	52772	44032	30822	18428
3	ಬಿಜಾಪುರ	73142	62169	53882	37238	24451
4	ಬಾಗಲಕೋಟೆ	41029	34875	18168	12698	22157
5	ಬೀದರ್	52885	44952	21142	14801	30151
6	ಬೆಳಗಾಂ	112136	95315	76314	50782	44533
7	ಬಳ್ಳಾರಿ	59153	50280	20101	14072	36208
8	ಚಾಮರಾಜನಗರ	28200	23969	18553	12988	10981
9	ಚಿಕ್ಕಮಗಳೂರು	58993	50145	10818	7575	42572
10	ಚಿತ್ರದುರ್ಗ	51555	43822	32413	22689	21133
11	ದಾವಣಗೆರೆ	55530	47201	27600	19321	27880
12	ಧಾರವಾಡ	26860	22811	4723	8029	19505

31 12 1994ರಲ್ಲಿದ್ದಂತೆ ಕರ್ನಾಟಕ ರಾಜ್ಯದ ಅಂತರ್ಜಲ ಲಭ್ಯತೆಯ ವಿವರ

ಅನುಬಂಧ - 1

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಅಂತರ್ಜಲದ ಉತ್ಕರ್ಷ (ಹೆಕ್ಟರ್ ಮೀಟರ್‌ಗಳಲ್ಲಿ)		ಅಂತರ್ಜಲ ಬಳಕೆ (ಹೆಕ್ಟರ್ ಮೀಟರ್‌ಗಳಲ್ಲಿ)		ಉಳಿಕೆ ಅಂತರ್ಜಲ ಉತ್ಕರ್ಷ (ಹೆಕ್ಟರ್ ಮೀಟರ್‌ಗಳಲ್ಲಿ)
		ಒಟ್ಟು ಮೊತ್ತ	ನಿವ್ವಳ	ಒಟ್ಟು	ನಿವ್ವಳ	
1	2	3	4	5	6	7
1	ಬೆಂಗಳೂರು (ನಗರ)	14371	12198	19942	13959	(–) 1761
2	ಬೆಂಗಳೂರು (ಗ್ರಾಮಾಂತರ)	62065	52772	44032	30822	18428
3	ಬಿಜಾಪುರ	73142	62169	53882	37238	24451
4	ಬಾಗಲಕೋಟೆ	41029	34875	18168	12698	22157
5	ಬೀದರ್	52885	44952	21142	14801	30151
6	ಬೆಳಗಾಂ	112136	95315	76314	50782	44533
7	ಬಳ್ಳಾರಿ	59153	50280	20101	14072	36208
8	ಚಾಮರಾಜನಗರ	28200	23969	18553	12988	10981
9	ಚಿಕ್ಕಮಗಳೂರು	58993	50145	10818	7575	42572
10	ಚಿತ್ರದುರ್ಗ	51555	43822	32413	22689	21133
11	ದಾವಣಗೆರೆ	55530	47201	27600	19321	27880
12	ಧಾರವಾಡ	26860	22811	4723	8029	19505

1	2	3	4	5	6	7
13	ಗದಗ	28516	23244	10014	7012	17227
14	ಗುಲ್ಬರ್ಗ	98129	83409	19318	13523	69886
15	ಹಾಸನ	50429	42864	22828	15982	26882
16	ಹಾವೇರಿ	48769	42449	19803	1938	27593
17	ಕಾರವಾರ	78416	66652	7768	5438	61214
18	ಕೋಲಾರ	80383	68325	77450	54214	14111
19	ಕೊಪ್ಪಳ	46598	39607	20085	14059	25568
20	ಮಂಡ್ಯ	78842	67016	12808	8965	58051
21	ಮಂಗಳೂರು	62023	52720	66036	29927	22793
22.	ಕೊಡಗು	16558	14074	359	252	13822
23	ಮೈಸೂರು	53032	45078	9677	6775	38303
24	ರಾಯಚೂರು	60603	51512	11583	8108	43384
25	ಶಿವಮೊಗ್ಗ	128386	109128	8416	5891	103237
26	ತುಮಕೂರು	89300	75904	86169	60318	15586
27	ಉಡುಪಿ	62485	53112	15809	11067	42045
	ಒಟ್ಟು	1618388	1375603	712529	496141	879462

ಅನುಬಂಧ –II

ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಂತರ್ಜಲ ವಿಭಾಗದಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಅಂತರ್ಜಲ ಹೆಚ್ಚಳಕ್ಕೆ ಬಿಡುಗಡೆ ಮಾಡಿರುವ ಹಾಗೂ ಖರ್ಚಾಗಿರುವ ಹಣದ ವಿವರ

(ರೂ ಲಕ್ಷಗಳಲ್ಲಿ)

ಕ್ರ ಸಂ	ಜಿಲ್ಲೆ		1999–2000	2000–01	2001–02	2002–03
		ಅ)	ಬಿಡುಗಡೆಯಾದ ಹಣ	ಅ)	ಅ)	ಅ)
		ಆ)	ಖರ್ಚಾದ ಹಣ	ಆ)	ಆ)	ಆ)
1	ಬೆಂಗಳೂರು	ಅ)	–	ಅ) 9 93	ಅ) 80 91	ಅ) –
		ಆ)	–	ಆ) 9 85	ಆ) 78 21	ಆ) –
2	ಬಳ್ಳಾರಿ	ಅ)	7 42	ಅ) 2 20	ಅ) 4 99	ಅ) 18 04
		ಆ)	6 86	ಆ) 2 20	ಅ) 4 60	ಅ) 18 04
3	ಬೆಳಗಾಂ	ಅ)	16 30	ಅ) –	ಅ) 19 49	ಅ) –
		ಆ)	16 20	ಆ) –	ಅ) 19 10	ಆ) –
4	ಬೀದರ್	ಅ)	–	ಅ) 10 70	ಅ) 10 58	ಅ) 1 25
		ಆ)	–	ಆ) 10 52	ಅ) 10 50	ಆ) 1 25
5	ಚಾಮರಾಜನಗರ	ಅ)	5 56	ಅ) –	ಅ) 9 55	ಅ) 5 00
		ಆ)	5 11	ಆ) –	ಆ) 9 40	ಆ) 4 92
6	ಚಿತ್ರದುರ್ಗ	ಅ)	–	ಅ) –	ಅ) 9 98	ಅ) –
		ಆ)	–	ಆ) –	ಅ) 9 91	ಆ) –
7	ಹಾಸನ	ಅ)	11 52	ಅ) –	ಅ) 10 00	ಅ) 9 50
		ಆ)	11 36	ಆ) –	ಅ) 9 34	ಆ) 9 24
8	ಕೋಲಾರ	ಅ)	–	ಅ) 53 67	ಅ) 37 05	ಅ) 19 01
		ಆ)	–	ಆ) 52 18	ಆ) 36 62	ಆ) 19 01
9	ಕೊಪ್ಪಳ	ಅ)	6 30	ಅ) –	ಅ) 9 97	ಅ) 4 57
		ಆ)	5 18	ಆ) –	ಆ) 9 85	ಆ) 4 54
10	ಮಂಡ್ಯ	ಅ)	5 24	ಅ) –	ಅ) –	ಅ) –
		ಆ)	4 87	ಆ) –	ಆ) –	ಆ) –
11	ರಾಯಚೂರು	ಅ)	7 61	ಅ) –	ಅ) –	ಅ) –
		ಆ)	7 59	ಆ) –	ಅ) –	ಅ) –
12	ತುಮಕೂರು	ಅ)	4 89	ಅ) –	ಅ) 44 67	ಅ) 5 40
		ಆ)	4 39	ಆ) –	ಆ) 43 17	ಆ) 5 32

ಧಾರವಾಡದ ಕಾಯಕನಗರ ಯೋಜನೆ

219 (578) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಕಾರ್ಮಿಕ, ಸಣ್ಣ ಪ್ರಮಾಣದ ಕೈಗಾರಿಕಾ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡದ ಕಾಯಕನಗರ ಯೋಜನೆ ಯಾವಾಗ ರೂಪುಗೊಂಡಿತು

ಆ) ಯಾರಿಗಾಗಿ ಈ ಯೋಜನೆಯನ್ನು ರೂಪಿಸಲಾಗಿದೆ? ಯೋಜನೆಗಾಗಿ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು

ಇ) ಯೋಜನೆಯು ಹಾಲಿ ಯಾವ ಹಂತದಲ್ಲಿದೆ

ಈ) ಈವರೆಗಿನ ಹಣದ ಹೂಡಿಕೆಯಿಂದ ಎಷ್ಟು ಜನರಿಗೆ ಕಾಯಕದ ಅವಕಾಶ ಕಲ್ಪಿಸಲಾಗಿದೆ?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ, ಸಣ್ಣ ಪ್ರಮಾಣದ ಕೈಗಾರಿಕಾ ಮತ್ತು ಹಜ್ ಸಚಿವರು)

ಅ) ಸರ್ಕಾರದ ಆದೇಶ ಸಂಖ್ಯೆ.56:ಸಪ್ರ ಕೈ 39 ದಿನಾಂಕ 30 03 2000 ರಂದು ಹೊರಡಿಸಿದ ಅನ್ವಯ ಧಾರವಾಡ ಜಿಲ್ಲೆಯ ನರೇಂದ್ರ ಗ್ರಾಮದಲ್ಲಿ ಕಾಯಕನಗರ ಯೋಜನೆ ರೂಪುಗೊಂಡಿರುತ್ತದೆ

ಆ) ವೃತ್ತಿ ನಿರತ ಹಾಗೂ ನಿವೇಶನ ರಹಿತ ಕುಶಲಕರ್ಮಿಗಳಿಗೆ ವಸತಿ ಸೌಕರ್ಯ ಹಾಗೂ ಸಾಮೂಹಿಕ ಕಾರ್ಯಗಾರವನ್ನು ಕಲ್ಪಿಸಲು ಕಾಯಕನಗರ ಯೋಜನೆಯನ್ನು ರೂಪಿಸಲಾಗಿದೆ

ಸರ್ಕಾರದಿಂದ ಇಲ್ಲಿಯವರೆಗೆ ರೂ 65 00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ

ಇ) ಒಟ್ಟು 35 24 ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ರೂ 8 00 ಲಕ್ಷಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ನೀಡಬೇಕಾಗಿರುತ್ತದೆ ಇದರಲ್ಲಿ ರೂ 65 00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು ಉಳಿದ ರೂ 43 00 ಲಕ್ಷಗಳನ್ನು ಬಿಡುಗಡೆ ಮಾಡಿದ ನಂತರ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಅಭಿವೃದ್ಧಿ ಕಾರ್ಯವನ್ನು ಪ್ರಾರಂಭಿಸಲಾಗುವುದು

ಈ) ಒಟ್ಟು 678 ಫಲಾನುಭವಿಗಳನ್ನು ಗುರುತಿಸಿದ್ದು ಭೂ ಅಭಿವೃದ್ಧಿಪಡಿಸಿದ ಮೇಲೆ ಫಲಾನುಭವಿಗಳಿಗೆ ನಿವೇಶನಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು

ಬಿಜಾಪುರ ಜಿಲ್ಲೆಯಲ್ಲಿ ಪಶುವೈದ್ಯ ಆಸ್ಪತ್ರೆಗಳ ಮಂಜೂರಾತಿ

220 (241) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿರುವ ಪಶುವೈದ್ಯ ಆಸ್ಪತ್ರೆಗಳ ಸಂಖ್ಯೆ ಎಷ್ಟು

ಆ) ಹೆಚ್ಚುವರಿಯಾಗಿ ಮಂಜೂರು ಮಾಡಲು ಉದ್ದೇಶಿಸಿರುವ ಸ್ಥಳಗಳಾವುವು

ಇ) ಬಸವನಬಾಗೇವಾಡಿ ಕ್ಷೇತ್ರದ ಕಾರಜೋಳ ರೇಣಹಾಳ, ಮಸಿಬನಾಳ ಈ ಸ್ಥಳಗಳಿಗೆ ಮಂಜೂರು ಮಾಡುವ ಪ್ರಸ್ತಾಪ ಸರ್ಕಾರಕ್ಕಿದೆಯೇ

ಈ) ಇದ್ದಲ್ಲಿ ಯಾವಾಗ ಕೈಗೆತ್ತಿಕೊಳ್ಳಲಾಗುತ್ತದೆ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಪ್ರಗತಿ ಕಾರ್ಯಗಳೇನು?

ಶ್ರೀ ಎಂ ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಬಿಜಾಪುರ ಜಿಲ್ಲೆಯಲ್ಲಿ 7 ಪಶುವೈದ್ಯ ಆಸ್ಪತ್ರೆಗಳಿವೆ

ಆ) ಯಾವುದೇ ಹೊಸ ಪಶುವೈದ್ಯ ಸಂಸ್ಥೆಯನ್ನು ಮಂಜೂರು ಮಾಡುವ ಕಾರ್ಯಕ್ರಮ ಇರುವುದಿಲ್ಲ

ಇ) ಮತ್ತು ಈ) ಮೇಲಿನ 'ಅ' ಕ್ಕೆ ನೀಡಿದ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ

ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮೇಲ್ವಿಚಾರಕರು

221 (129) ಶ್ರೀ ಚಲುವನಾರಾಯಣ ಸ್ವಾಮಿ ಎನ್ (ನಾಗಮಂಗಲ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೇಲ್ವಿಚಾರಕರನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು ಸದರಿ ನೌಕರರನ್ನು ಮಾತೃ ಇಲಾಖೆಗೆ ವಾಪಸ್ಸು ಕಳುಹಿಸಲಾಗುವುದೇ ಇಲ್ಲದಿದ್ದರೆ, ವಿವರ ನೀಡುವುದು

ಆ) ನಾಗಮಂಗಲ ತಾಲ್ಲೂಕು ಬೆಳ್ಳೂರು ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮೇಲ್ವಿಚಾರಕರಕರು ಶಿಕ್ಷಣ ಇಲಾಖೆಯಿಂದ ನಿಯೋಜನೆ ಮೇಲೆ ಬಂದಿದ್ದು, ಇವರ ಮೇಲೆ ಸಾರ್ವಜನಿಕವಾಗಿ ದೂರು ಇದ್ದು, ಅಮಾನತ್ತುಗೊಂಡಿರುತ್ತಾರೆ ಆದರೂ ಇವರನ್ನು ಪುನ ಇದೇ ಹುದ್ದೆಗೆ ವರ್ಗಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದರೆ ರದ್ದುಪಡಿಸಲು ಕ್ರಮವೇನು?

ಶ್ರೀ ಎ ಕೃಷ್ಣಪ್ಪ, (ಸಮಾಜ ಕಲ್ಯಾಣ ಸಚಿವರು)

ಅ) ಶಿಕ್ಷಣ ಇಲಾಖೆಯಿಂದ ಹಲವು ಸಹ ಶಿಕ್ಷಕರು ನಿಯೋಜನೆಯ ಮೇಲೆ ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಇಲಾಖೆಯ ಹಲವು ವಿದ್ಯಾರ್ಥಿನಿಲಯಗಳಲ್ಲಿ ನಿಲಯ ಮೇಲ್ವಿಚಾರಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ ಖಾಲಿ ಇರುವ ನಿಲಯ ಮೇಲ್ವಿಚಾರಕರ ಹುದ್ದೆಗಳನ್ನು ಭರ್ತಿ ಮಾಡಿದ ನಂತರ ಅಥವಾ ಶೈಕ್ಷಣಿಕ ವರ್ಷ ಮುಗಿದ ನಂತರ ಈ ನೌಕರರನ್ನು ಅವರ ಮಾತೃ ಇಲಾಖೆಗೆ ಹಿಂದಿರುಗಿಸಲಾಗುವುದು ನಿಯೋಜನೆ ಮೇಲೆ ಸೇವೆ ಸಲ್ಲಿಸುತ್ತಿರುವ ನೌಕರರ ವಿವರಗಳನ್ನು ಅನುಬಂದ – 1 ಮತ್ತು 2 ರಲ್ಲಿ ಒದಗಿಸಲಾಗಿದೆ

ಆ) ಸಮಾಜ ಕಲ್ಯಾಣ ಇಲಾಖೆ

ಅನ್ವಯಿಸುವುದಿಲ್ಲ

ಹಿಂದುಳಿದ ವರ್ಗಗಳ ಇಲಾಖೆ

ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ ಶ್ರೀ ಜಯರಾಮೇಗೌಡ, ಸಹಶಿಕ್ಷಕರು, ನಿಯೋಜನೆ ಮೇಲೆ ಬೆಳ್ಳೂರು ಮಟ್ರಿಕ್–ಪೂರ್ವ ಬಾಲಕರ ವಸತಿ ನಿಲಯದಲ್ಲಿ ನಿಯೋಜನೆಯ ಮೇಲೆ ಕೆಲಸ ನಿರ್ವಹಿಸುತ್ತಿದ್ದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾಪಂಚಾಯತ್ ಮಂಡ್ಯ ಇವರು ದಿನಾಂಕ 23–9–2003ರ ಆದೇಶದಲ್ಲಿ ಈ ನೌಕರನನ್ನು ಅಮಾನತ್ತಿನಲ್ಲಿ ಇಟ್ಟಿರುತ್ತಾರೆ ಅನಂತರ ಅಮಾನತ್ತಿನ ಆದೇಶವನ್ನು ಹಿಂತೆಗೆದು ಸ್ಥಳ ಬದಲಾವಣೆ ಮಾಡಿ ಈ ನೌಕರನನ್ನು ಮೆಟ್ರಿಕ್– ಪೂರ್ವ ಬಾಲಕರ ವಸತಿನಿಲಯ, ಚೀಣ್ಯ, ನಾಗಮಂಗಲ ತಾಲ್ಲೂಕು ಇಲ್ಲಿಗೆ ನಿಯೋಜಿಸಿರುತ್ತಾರೆ

ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷ ಮುಕ್ತಾಯವಾದ ನಂತರ ಈ ನೌಕರನನ್ನು ಮಾತೃ ಇಲಾಖೆಯಾದ ಶಿಕ್ಷಣ ಇಲಾಖೆಗೆ ವಾಪಸ್ಸು ಕಳುಹಿಸಲಾಗುತ್ತದೆ

ಅನುಬಂಧ -1

ಸಮಾಜ ಕಲ್ಯಾಣ ಇಲಾಖೆ

ಕ್ರ ಸಂ	ನೌಕರರ ಹೆಸರು	ವಿದ್ಯಾರ್ಥಿನಿಲಯದ ಹೆಸರು
		ತುಮಕೂರು ಜಿಲ್ಲೆ
1	ಶ್ರೀ ಗಂಗಯ್ಯ	ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯ, ತಿಪಟೂರು ಮಂಡ್ಯ
	ಶ್ರೀ ಕಾಂತರಾಜು	ಸಾರ್ವಜನಿಕರ ಬಾಲಕರ ವಿದ್ಯಾರ್ಥಿನಿಲಯ, ಶೀಳನಕೆರೆ, ಕೆ ಆರ್ ಪೇಟೆ ತಾಲ್ಲೂಕು
		ಕೋಲಾರ ಜಿಲ್ಲೆ
1	ಶ್ರೀ ವೆಂಕಟಾಚಲಪತಿ	ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯ, ಕೊರ್ಲಪರ್ತಿ, ಚಿಂತಾಮಣಿ ತಾ
2	ಶ್ರೀ ಸುಬ್ರಮಣಿ	ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯ, ಮುಳ ಬಾಗಿಲು ಟೌನ್
3	ಶ್ರೀ ಫಕ್ಕೆ ಸಾಬ್	ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯ, ಅಮ್ಮನಲ್ಲೂರು, ಕೋಲಾರ ತಾ
4	ಶ್ರೀ ಜಿ ನಾಗರಾಜ್	ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿಲಯ, ಶ್ರೀನಿವಾಸಪುರ ಟೌನ್

ಅನುಬಂಧ -2

ಹಿಂದುಳಿದ ವರ್ಗಗಳ ಇಲಾಖೆ

ಕ್ರ ಸಂ	ನೌಕರರ ಹೆಸರು	ವಿದ್ಯಾರ್ಥಿನಿಲಯದ ಹಸರು
		ಮಂಡ್ಯ ಜಿಲ್ಲೆ
1	ಶ್ರೀ ದೊಡ್ಡಶೆಟ್ಟಿ	ಮೆಟ್ರಿಕ್-ಪೂರ್ವ ಬಾಲಕರ ವಸತಿ ನಿಲಯ, ಮಳವಳ್ಳಿ ತಾ
2	ಶ್ರೀ ಎಂ ಶಿವರಾಜು	ಮೆಟ್ರಿಕ್-ಪೂರ್ವ ಬಾಲಕೀಯರ ವಸತಿ ನಿಲಯ, ಹಳೆಹಳ್ಳಿ ಮದ್ದೂರು ತಾ
3	ಶ್ರೀ ಕೆ ಗೋಪಾಲ	ಮೆಟ್ರಿಕ್-ಪೂರ್ವ ಬಾಲಕೀಯರ ವಸತಿ ನಿಲಯ, ಬಿಳೀದೇಗುಲ, ಮಂಡ್ಯ ತಾ
4	ಶ್ರೀ ವೆಂಕಟಶೆಟ್ಟಿ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಬೆಟ್ಟಂಕನಹಳ್ಳಿ, ಶ್ರೀರಂಗಪಟ್ಟಣ ತಾ
5	ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿ	ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ, ಬೆಟ್ಟಂಕನಹಳ್ಳಿ ಮಳವಳ್ಳಿ ತಾ
6	ಶ್ರೀ ಎಲ್ ಜಿ ಶಂಕರ್,	ಮೆಟ್ರಿಕ್-ಪೂರ್ವ ಬಾಲಕಿಯರ ವಸತಿನಿಲಯ, ಮೇಲುಕೋಟೆ ಪಾಂಡವಪುರ ತಾ

1	2	3
7	ಶ್ರೀ ಚೆಲುವರಾಯ	ಮೆಟ್ರಿಕ್ ಪೂರ್ವ ಬಾಲಕೀಯರ ವಸತಿನಿಲಯ ಶ್ರೀರಂಗಪಟ್ಟಣ ಟೌನ್
8	ಶ್ರೀ ಜಯರಾಮೇಗೌಡ	ಮೆಟ್ರಿಕ್ ಪೂರ್ವ ಬಾಲಕರ ವಸತಿನಿಲಯ, ಚೇಣ್ಯ, ನಾಗಮಂಗಲ ತಾ
9	ಶ್ರೀ ಹೆಚ್ ಎಸ್ ಚಂದ್ರಶೇಖರ್,	ಮೆಟ್ರಿಕ್, ನಂತರದ ಬಾಲಕರ ವಸತಿನಿಲಯ, ಕೆ ಆರ್ ಪೇಟೆ ಟೌನ್
		ಕೋಲಾರ ಜಿಲ್ಲೆ
1	ಶ್ರೀ ವಿ ಶ್ರೀನಿವಾಸ	ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ಸುಗಟೂರು, ಕೋಲಾರ ತಾ
2	ಶ್ರೀ ಹರಿದಾಸ್	ಮೆಟ್ರಿಕ್–ಪೂರ್ವ ಬಾಲಕರ ವಸತಿನಿಲಯ, ಚಿಕ್ಕಬಳ್ಳಾಪುರ ಟೌನ್
		ಚಿಕ್ಕಮಗಳೂರು
1	ಶ್ರೀ ಶಂಕರನಾಯಕ್	ಮೆಟ್ರಿಕ್ ಪೂರ್ವ ಬಾಲಕರ ವಸತಿನಿಲಯ, ತರೀಕೆರೆ ಟೌನ್
		ಮೈಸೂರು ಜಿಲ್ಲೆ
1	ಶ್ರೀ ಹೆಚ್ ಕೆ ಶಂಕರ್,	ಮೆಟ್ರಿಕ್ ಪೂರ್ವ ಬಾಲಕರ ವಸತಿನಿಲಯ, ತಲಕಾಡು, ಟೀನರಸೀಪುರ ತಾ
2	ಶ್ರೀ ಎಂ ಪಿ ಗಂಗಾಧರ್,	ಮೆಟ್ರಿಕ್–ಪೂರ್ವ ಬಾಲಕರ ವಸತಿನಿಲಯ, ಚಿತ್ತೂರು, ಪಿರಿಯಾಪಟ್ಟಣ ತಾ

ಶಿವಮೊಗ್ಗ ತಾಲ್ಲೂಕು ಮಾಚೇನಹಳ್ಳಿ ಕೈಗಾರಿಕಾ ವಸಾಹತು ಅಭಿವೃದ್ಧಿ

222(248) ಶ್ರೀ ಚಂದ್ರಶೇಖರಪ್ಪ ಹೆಚ್ ಎಂ (ಶಿವಮೊಗ್ಗ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕು ಮಾಚೇನಹಳ್ಳಿ ಕೈಗಾರಿಕೆ ವಸಾಹತು ಪ್ರದೇಶ ಅಭಿವೃದ್ಧಿ ಯೋಜನೆ ಸಲುವಾಗಿ ಭೂ ಸ್ವಾಧೀನ ಮಾಡಿಕೊಂಡ ಜಮೀನಿನ ವಿಸ್ತೀರ್ಣವೆಷ್ಟು ಸದರಿ ಜಮೀನಿಗೆ ನೀಡಲಾದ ಪರಿಹಾರ ಮೊತ್ತವೆಷ್ಟು ಈ ಯೋಜನೆಯ ಸಲುವಾಗಿ ಭೂ ಸ್ವಾಧೀನಪಡಿಸಿಕೊಳ್ಳಲು ಹೊರಟಿರುವ ಸರ್ಕಾರಿ ಭೂಮಿಯ ಬಗರ್‌ಹುಕುಂ ಸಾಗುವಳಿದಾರರಿಗೆ ಪರಿಹಾರ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ ವಿವರ ನೀಡುವುದು

ಆ) ಮೇಲ್ಕಂಡ ಕೈಗಾರಿಕಾ ವಸಾಹತು ಪ್ರದೇಶಕ್ಕೆ ಸೂಕ್ತ ನೀರು ಸರಬರಾಜು ಸಂಪರ್ಕ ಕಲ್ಪಿಸುವ ಯೋಜನೆ ಸರ್ಕಾರದ ಮುಂದಿದೆಯೆ ತಿಳಿಸುವುದು

ಇ) ಶಿವಮೊಗ್ಗ ತಾ ಮಾಚೇನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಈ ಹಿಂದೆಯೇ ವಿತರಿಸಲಾಗಿರುವ ನಿವೇಶನಗಳ ಸಂಖ್ಯೆ ಎಷ್ಟು ಹಾಲಿ ಎಷ್ಟು ಕೈಗಾರಿಕೆಗಳು ನಡೆಯುತ್ತಿದ್ದು, ಅವುಗಳಲ್ಲಿ ಸ್ಥಗಿತಗೊಂಡಿರುವ ಕೈಗಾರಿಕೆಗಳ ವಿವರ ನೀಡುವುದು

ಸರ್ಕಾರ ಇವುಗಳನ್ನು ಪುನ ಶ್ಚೇತನಗೊಳಿಸಲು ಯಾವ ಕ್ರಮ ಕೈಗೊಂಡಿದೆ, ವಿವರ ನೀಡುವುದು?

ಶ್ರೀ ಆರ್ ವಿ ದೇಶ್‌ಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಶಿವಮೊಗ್ಗ ತಾಲ್ಲೂಕು, ಮಾಚೇನಹಳ್ಳಿ ಕೈಗಾರಿಕಾ ವಸಾಹತು ಪ್ರದೇಶಾಭಿವೃದ್ಧಿಗಾಗಿ ಒಟ್ಟು 154 ಎಕರೆ 36 ಗುಂಟೆ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಳ್ಳಲಾಗಿದೆ

2 ಈ ಬಗ್ಗೆ ಒಟ್ಟು ರೂ 2,14,11, 349–00 ಗಳ ಪರಿಹಾರವನ್ನು ಭೂ ಮಾಲೀಕರಿಗೆ ಪಾವತಿಸಲಾಗಿದೆ

3 ದಿನಾಂಕ 13–8–2003 ರಂದು ನಡೆದ ಮಂಡಳಿಯ 252ನೇ ಸಭೆಯಲ್ಲಿ ನಿಧಿಗೆ ಗ್ರಾಮದ ಸ ನಂ 131, 139 ಮತ್ತು 156 ರಲ್ಲಿ ಒಟ್ಟು 295, ಎಕರೆ 37 ಗುಂಟೆ ಸರ್ಕಾರಿ ಜಮೀನನ್ನು ಮಂಡಳಿಯ ಹಾಲಿ ಸ್ಥಿತಿಯಂತೆ ಸ್ವಾಧೀನ ಪಡೆಯುವುದು ಸಾಧ್ಯವಿರುವುದಿಲ್ಲವೆಂದು ಸದರಿ ಪ್ರದೇಶದಲ್ಲಿ ಕೈಗಾರಿಕೆಗೆ ಬೇಡಿಕೆ ಇಲ್ಲವೆಂದು ತೀರ್ಮಾನಿಸಿ ಪ್ರಸ್ತುತ ಸದರಿ ಭೂ ಸ್ವಾಧೀನತೆಯನ್ನು ಕೈ ಬಿಡಲಾಗಿದೆ ಆದುದರಿಂದ ಕಕ್ಕೆ ಪ್ರಣ ಮಂಡಳಿಯಿಂದ ಎಕ್ಸ್‌ಗ್ರೇಷಿಯಾ ಪಾವತಿಸು ಪ್ರಶ್ನೆ ಉದ್ಭವಿಸುವುದಿಲ್ಲ

ಆ) ಸದರಿ ಕೈಗಾರಿಕಾ ಪ್ರದೇಶಕ್ಕೆ 1 0 ಎಂಜಿ ಡಿ ನೀರು ಸರಬರಾಜು ಸಂಪರ್ಕ ಕಲ್ಪಿಸುವ ಕಾಮಗಾರಿಗೆ ಗುತ್ತಿಗೆದಾರರನ್ನು ಈಗಾಗಲೇ ನೇಮಿಸಿ ತಾ 29–12–2003 ರಂದು ಕಾರ್ಯಾದೇಶ ನೀಡಲಾಗಿದೆ

ಇ) ಶಿವಮೊಗ್ಗ ತಾಲ್ಲೂಕು ಮಾಚೇನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ 152 ನಿವೇಶನಗಳನ್ನು 74 ಘಟಕಗಳಿಗೆ ಹಂಚಿಕೆ ಮಾಡಲಾಗಿದೆ ಇದರಲ್ಲಿ ಹಾಲಿ 64 ಘಟಕಗಳು ನಡೆಯುತ್ತಿದ್ದು, 10 ಘಟಕಗಳು ಸ್ಥಗಿತಗೊಂಡಿರುತ್ತದೆ

ಸರ್ಕಾರಿ ಆದೇಶ ಸಂಖ್ಯೆ ಸಿಐ 167 ಎಸ್‌ಪಿಐ 2001 ರ ಆದೇಶದಲ್ಲಿ ಪ್ರಚಾರಪಡಿಸಿದನ್ವಯ ರೋಗಗ್ರಸ್ತ ಕೈಗಾರಿಕೆ ಘಟಕಗಳನ್ನು ಪುನ' ಶ್ಚೇತನಗೊಳಿಸುವ ಬಗ್ಗೆ ನಿಬಂಧನೆ ಮತ್ತು ನೀತಿಯನ್ನು ರೂಪಿಸಲು ಕ್ರಮ ಜರುಗಿಸಲಾಗಿದೆ

ಶಿವಮೊಗ್ಗ ತಾಲ್ಲೂಕಿನಲ್ಲಿ ಬರುವ ಕೆರೆಗಳಲ್ಲಿ ಮೀನು ಮರಿ ಉತ್ಪಾದನೆ

223 (249) ಶ್ರೀ ಚಂದ್ರಶೇಖರಪ್ಪ ಹೆಚ್ ಎಂ (ಶಿವಮೊಗ್ಗ) ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕಿನಲ್ಲಿ ಬರುವ ಎಷ್ಟು ಕೆರೆಗಳಲ್ಲಿ ಮೀನುಮರಿ ಬಿಡಲಾಗಿದೆ ಹಾಗೂ ಇವುಗಳಿಂದ ಸರ್ಕಾರಕ್ಕೆ ಬರುವ ಆದಾಯವೆಷ್ಟು ವಿವರ ನೀಡುವುದು?

ಶ್ರೀ ವಸಂತ ವಿ ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು)

ಅ) ಶಿವಮೊಗ್ಗ ತಾಲ್ಲೂಕಿನಲ್ಲಿ ಒಟ್ಟು 213 ಕೆರೆಗಳಲ್ಲಿ ಮೀನುಮರಿ ಬಿತ್ತನೆ ಮಾಡಲಾಗಿದೆ 2003–04ನೇ ಸಾಲಿನಲ್ಲಿ ವಿಲೇವಾರಿಯಾದ ಕೆರೆಗಳ ಗುತ್ತಿಗೆಯ ಮೊತ್ತ ಮತ್ತು ಈ ಕೆರೆಗಳಿಗೆ ಮಾರಾಟ ಮಾಡಿದ ಮೀನುಮರಿಗಳಿಂದ ಬಂದ ಒಟ್ಟು ಆದಾಯ ರೂ 2,93,377=00 ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 249 ರ ಅನುಬಂಧ

ಶಿವಮೊಗ್ಗ ತಾಲ್ಲೂಕಿನ ಕೆರೆಗಳಿಂದ 2003-04ನೇ ಸಾಲಿನಲ್ಲಿ ಸರ್ಕಾರಕ್ಕೆ ಬಂದ ಆದಾಯದ ವಿವರಗಳು

(ರೂ ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಕೆರೆಗಳ ವಿವರ	ಮೀನುಮರಿ ಮಾರಾಟದಿಂದ ಬಂದ ಆದಾಯ (ರೂ)	ಕೆರೆಗಳ ವಿಲೇವಾರಿಯಿಂದ ಬಂದ ಆದಾಯ (ಗುತ್ತಿಗೆ ಮತ್ತು ಟೆಂಡರು ಹರಾಜು) (ರೂ)	ಒಟ್ಟು ಆದಾಯ (ರೂ)
1	ದೊಡ್ಡ ಕೆರೆಗಳು (ಇಲಾಖೆ ಮತ್ತು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಕೆರೆಗಳು)	97100	71335	168435
2	ಸಣ್ಣ ಕೆರೆಗಳು (ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯ ವ್ಯಾಪ್ತಿಯ ಕೆರೆಗಳು)	112892	12050	124942
	ಒಟ್ಟು ರೂ	209992	83385	293377

ಶಿವಮೊಗ್ಗ ನಗರಕ್ಕೆ ಹೊಸ ಸಕ್ಕರೆ ಕಾರ್ಖಾನೆ ಪ್ರಾರಂಭಿಸುವುದು

224 (250) ಶ್ರೀ ಚಂದ್ರಶೇಖರಪ್ಪ ಹೆಚ್ ಎಂ (ಶಿವಮೊಗ್ಗ) ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ನಗರದಲ್ಲಿ ಖಾಸಗಿ ಕಬ್ಬು ಬೆಳಗಾರರ ಪುನಶ್ಚೇತನಕ್ಕಾಗಿ ಹೊಸದಾಗಿ ಖಾಸಗಿ ಅಥವಾ ಸರ್ಕಾರ ಒಡೆತನದ ಸಕ್ಕರೆ ಕಾರ್ಖಾನೆ ಪ್ರಾರಂಭಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ ಹಾಲಿ ಇರುವ ಮುಚ್ಚಿರುವ ದೇವಿ ಶುಗರ್ಸ್ ಕಂಪನಿ ಪುನಶ್ಚೇತನಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತದೆ

ಕಾರ್ಖಾನೆಗೆ ಗುತ್ತಿಗೆ ನೀಡಿರುವ ಸರ್ಕಾರಿ ಭೂಮಿಯನ್ನು ಹಿಂದಕ್ಕೆ ಪಡೆಯಲಾಗಿದೆಯೇ (ವಿವರ ನೀಡುವುದು)

ಆ) ಮುಚ್ಚಿರುವ ಶಿವಮೊಗ್ಗ ಸಕ್ಕರೆ ಕಾರ್ಖಾನೆಯಲ್ಲಿರುವ ಕಾರ್ಮಿಕರ ಹಿತರಕ್ಷಣೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ

ಕಾರ್ಮಿಕರಿಗೆ ಹಾಗೂ ಕಬ್ಬು ಬೆಳಗಾರರಿಗೆ ಮೇಲ್ಕಂಡ ಕಂಪನಿಯಿಂದ ಬರಬೇಕಾಗಿರುವ ಬಾಕಿ ವಸೂಲಾತಿ ಬಗ್ಗೆ ಸರಕಾರ ಯಾವ ಕ್ರಮ ಕೈಗೊಂಡಿದೆ

ಇ) ಶಿವಮೊಗ್ಗ ತಾಲ್ಲೂಕು ವ್ಯಾಪ್ತಿಯ ಕಬ್ಬು ಬೆಳೆಗಾರರ ಕಬ್ಬನ್ನು ಭದ್ರಾವತಿಯ ಎಂ ಪಿ ಕಾರ್ಖಾನೆಗೆ ಮಾರಾಟ ಮಾಡಲು ಅನುಮತಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ (ವಿವರ ನೀಡುವುದು)

ಶ್ರೀ ಎಂ ಮಹಾದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಹಾಲಿ ಇರುವ ಸಕ್ಕರೆ ಕಾರ್ಖಾನೆಯ ಜೊತೆಗೆ ಖಾಸಗಿ ಒಡೆತನದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಹೊಸದಾಗಿ ಪ್ರಾರಂಭಿಸಲು ಸರ್ಕಾರವು ತಾತ್ವಿಕ ಅನುಮೋದನೆ ನೀಡಿದೆ ಸಧ್ಯಕ್ಕೆ ಅಂತ ಆಲೋಚನೆ ಸರ್ಕಾರಕ್ಕೆ ಇಲ್ಲಾ

ಈ ಕಾರ್ಖಾನೆಗೆ ಗುತ್ತಿಗೆ ನೀಡಿದ್ದ 1503 11 ಎಕರೆ ಸರ್ಕಾರದ ಭೂಮಿಯನ್ನು ಲೀಜ್ ಅವಧಿ ನಂತರ ಜಿಲ್ಲಾಧಿಕಾರಿ ಆದೇಶ ಸಂಖ್ಯೆ ಸಿಆರ್‌ಎಫ್ ಸಿಆರ್ 150 79–89 ದಿನಾಂಕ 23–08–2001 ರಂತೆ ಹಿಂದಕ್ಕೆ ಪಡೆಯಲಾಗಿದೆ ವಿವರ ಈ ಕೆಳಕಂಡಂತೆ ಇರುತ್ತದೆ

ಕ್ರ ಸಂ	ಗ್ರಾಮದ ಹೆಸರು	ಸರ್ವೆ ನಂ	ವಿಸ್ತೀರ್ಣ (ಎಕರೆಗಳಲ್ಲಿ)
1	ಮಳಲಿ, ತರೀಕೆರೆ ತಾಲ್ಲೂಕ್	2.ಪಿ	354 00
2	ಚನ್ನಹಳ್ಳಿ	3 ಪಿ	340 00
3	ಹೆಚ್ ರಂಗಾಪುರ	12 ಪಿ	150 00
4	ಕಾರಹಳ್ಳಿ ಭದ್ರಾವತಿ ತಾ	8	225 00
		22	32 11
5	ಹಸೂರಿ, ಶಿವಮೊಗ್ಗ ತಾ	135	252 00
6	ಹಾಲಲಕ್ಕವಳ್ಳಿ, ಶಿವಮೊಗ್ಗ ತಾಲ್ಲೂಕು	2 36	150 00
	ಒಟ್ಟು		1503 11

ಆ) ಶಿವಮೊಗ್ಗದ ದೇವಿ ಶುಗರ್ಸ್ ಕಾರ್ಖಾನೆಯ ಕಬ್ಬು ಬೆಳೆಗಾರರ ಮತ್ತು ಕಾರ್ಮಿಕರ ಹಿತರಕ್ಷಣೆಗೆ ಸರ್ಕಾರವು ತಲಾ ರೂ 118,81,324 86 ಗಳ ಎಸ್.ಬಿ ಎಂ ಬ್ಯಾಂಕಿನ ಸಾಲಕ್ಕೆ ಗ್ಯಾರಂಟಿ ನೀಡಿರುತ್ತದೆ ಈ ಪೈಕಿ ರೂ 1,18,36 233 62 ಕಾರ್ಮಿಕರಿಗೆ ಪಾವತಿಸಿರುತ್ತದೆ. ಹಾಗೆಯೇ ರೂ 115,09,888 00ಗಳನ್ನು ಕಬ್ಬು ಬೆಳೆಗಾರರಿಗೆ ಪಾವತಿಸಿರುತ್ತದೆ

ಈಗಾಗಲೇ ಮೇಲಿನ ಕಂಡಿಕೆಯಲ್ಲಿ ಉತ್ತರ ನೀಡಿರುತ್ತದೆ

ಇ) ಶಿವಮೊಗ್ಗ ಮತ್ತು ಭದ್ರಾವತಿ ತಾಲ್ಲೂಕ್‌ಗಳ ವ್ಯಾಪ್ತಿಯ ಕಬ್ಬು ಬೆಳೆಗಾರರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಆ ಪ್ರದೇಶದಲ್ಲಿ ಬೆಳೆಯುವ ಕಬ್ಬನ್ನು ತಾತ್ಕಾಲಿಕವಾಗಿ ಭದ್ರಾವತಿಯ ಎಂ ಪಿ ಎಂ ಸಕ್ಕರೆ ಕಾರ್ಖಾನೆಗೆ ಸರಬರಾಜು ಮಾಡಲು ಸರ್ಕಾರವು ಅನುಮತಿ ನೀಡಿರುತ್ತದೆ

ಶಿವಮೊಗ್ಗ ತಾಲ್ಲೂಕಿನಲ್ಲಿ ನೂತನ ಪಶು ಆಸ್ಪತ್ರೆ ಹಾಗೂ ಔಷಧಿಗಳ ವಿವರ

225 (251) ಶ್ರೀ ಚಂದ್ರಶೇಖರಪ್ಪ ಹೆಚ್ ಎಂ (ಶಿವಮೊಗ್ಗ ಕ್ಷೇತ್ರ) ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿರುವ ಪಶುಗಳ ಸಮೀಕ್ಷೆ ನಡೆಸಲಾಗಿದೆಯೇ ಹಾಗೂ ಇವುಗಳ ಸಂಖ್ಯೆಗೆ ಅನುಗುಣವಾಗಿ ಪಶುಚಿಕಿತ್ಸಾಲಯ ಕೇಂದ್ರಗಳ ಅನುಕೂಲ ಕಲ್ಪಿಸಲಾಗಿದೆಯೇ? ಶಿವಮೊಗ್ಗ ನಗರದ ವಿದ್ಯಾನಗರದಲ್ಲಿ ಹೊಸ ಪಶು ಚಿಕಿತ್ಸಾ ಕೇಂದ್ರ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ವಿವರ ನೀಡುವುದು?

ಆ) 1999 ರಿಂದ 2003 ರವರೆಗೆ ಸರ್ಕಾರದ ವತಿಯಿಂದ ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪಶು ಚಿಕಿತ್ಸಾ ಕೇಂದ್ರಕ್ಕೆ ಆಸ್ಪತ್ರೆಗಳಿಗೆ ಬಿಡುಗಡೆಗೊಳಿಸಲಾದ ಔಷಧಗಳ ಅನುದಾನದ ಮೊತ್ತವೆಷ್ಟು ವಿವರ ನೀಡುವುದು?

ಶ್ರೀ ಎಂ ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಸೆಪ್ಟೆಂಬರ್ – ಅಕ್ಟೋಬರ್ 2003 ರಲ್ಲಿ ನಡೆದ ಜಾನುವಾರು ಗಣತಿಯ ವಿವರಗಳನ್ನು ಅಂತಿಮಗೊಳಿಸಲಾಗುತ್ತಿದೆ 1997 ರ ಜಾನುವಾರುಗಳ ಗಣತಿ ಅಂಕಿಅಂಶಗಳ ಪ್ರಕಾರ ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ನಗರ ಪ್ರದೇಶದಲ್ಲಿ 12650 ಮತ್ತು ಗ್ರಾಮಾಂತರ ಪ್ರದೇಶದಲ್ಲಿ 27115 ಜಾನುವಾರುಗಳು ಇರುತ್ತವೆ ಇದಕ್ಕ ಅನುಗುಣವಾಗಿ 8 ಪಶುವೈದ್ಯ ಸಂಸ್ಥೆಗಳ ಅವಶ್ಯಕತೆಯಿದ್ದು ಈ ಹಾಲಿ 9 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ

ಆ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪಶು ಆಸ್ಪತ್ರೆ–1 ಪಶುಚಿಕಿತ್ಸಾಲಯ–3 ಮತ್ತು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು–5 ಒಟ್ಟು 9 ಕೇಂದ್ರಗಳಿಗೆ ಈ ಕೆಳಕಂಡ ಔಷಧಿಯನ್ನು ವಿವಿಧ ಮೂಲಗಳಿಂದ ಸರಬರಾಜು ಮಾಡಲಾಗಿದೆ

ಕ್ರ ಸಂ	ವಿವರ	1999–2000	2000–2001	2001–2002	2002–2003
1	ಸರ್ಕಾರದಿಂದ	ಇಲ್ಲ	229482	205100	211216
2	ಜಿಲ್ಲಾ ಪಂಚಾಯತ್‌ನಿಂದ	73841	85113	91354	160830

1	2	3	4	5	6
3	ತಾಲ್ಲೂಕು ಪಂಚಾಯತ್‌ನಿಂದ	–	23060	18123	–
4	ಬರಪರಿಹಾರ	–	–	23008	41169
		73841	337655	337585	413215

* ದರಗುತ್ತಿಗೆ ನಿಗಧಿಯಾಗದೇ ಇದ್ದ ಕಾರಣ

ಪರಿಶಿಷ್ಟ ಜಾತಿ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಹಮ್ಮಿಕೊಳ್ಳಲಾದ ಯೋಜನೆಗಳು

226 (252) ಶ್ರೀ ಚಂದ್ರಶೇಖರಪ್ಪ ಹೆಚ್ ಎಂ (ಶಿವಮೊಗ್ಗ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 1999 ರಿಂದ ಈವರೆಗೂ ಕರ್ನಾಟಕ ಪರಿಶಿಷ್ಟ ಜಾತಿ/ ವರ್ಗಗಳ ಅಭಿವೃದ್ಧಿ ನಿಗಮದಿಂದ ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹಮ್ಮಿಕೊಳ್ಳಲಾದ ವಿವಿಧ ಯೋಜನೆಗಳ ಫಲಾನುಭವಿಗಳ ಮತ್ತು ಯೋಜನಾ ವೆಚ್ಚದ ಬಗ್ಗೆ ವಿವರ ನೀಡುವುದು

ಆ) 2003–04 ನೇ ಸಾಲಿನಲ್ಲಿ ಮೇಲ್ಕಂಡ ನಿಗಮದಿಂದ ಹಮ್ಮಿಕೊಳ್ಳಲಾಗಿರುವ ಕ್ರಿಯಾ ಯೋಜನೆ ವಿವರಗಳನ್ನು ನೀಡುವುದು?

ಶ್ರೀ ಎ ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) 1999ನೇ ಸಾಲಿನಿಂದ ಈವರೆಗೂ ನಿಗಮದಿಂದ ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ಫಲಾನುಭವಿಗಳ ಸಂಖ್ಯೆ ಮತ್ತು ವೆಚ್ಚದ ವಿವರಗಳನ್ನು ಅನುಬಂಧ–ಅ ರಲ್ಲಿ ಲಗತ್ತಿಸಿದೆ

ಆ) 2003–04ನೇ ಸಾಲಿನಲ್ಲಿ ನಿಗಮದಿಂದ ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹಮ್ಮಿಕೊಳ್ಳಲಾಗಿರುವ ಕ್ರಿಯಾ ಯೋಜನೆಯ ವಿವರ ಈ ಕೆಳಕಂಡಂತೆ ಇದೆ

(ರೂ ಲಕ್ಷಗಳಲ್ಲಿ)

ಕ್ರ ಸಂ	ಯೋಜನೆಯ ಹೆಸರು	ಭೌತಿಕ ಗುರಿ		ಆರ್ಥಿಕ ಗುರಿ	
		ಪ ಜಾ	ಪ ವ	ಪ ಜಾ	ಪ ವ
1	ಗಂಗಾ ಕಲ್ಯಾಣ ಯೋಜನೆ	00	02		2 53
2	ವೈಯಕ್ತಿಕ ನೀರಾವರಿ ಕೊಳವೆಬಾವಿ	17	01	17 00	1 00
3	ಭೂ ಒಡೆತನ ಯೋಜನೆ	05	02	1 50	0 60
4	ಸ್ವಯಂ ಉದ್ಯೋಗ ಯೋಜನೆ	30	05	3 00	0 50
5	ಐ.ಎಸ್ ಬಿ ಯೋಜನೆ	09	03	2 70	0 90
	ಒಟ್ಟು	61	13	24 20	5 53

ನೇರಸಾಲ ಯೋಜನೆಯಡಿ ಕ್ಷೇತ್ರವಾರು ಗುರಿಗಳನ್ನು ನಿಗದಿಪಡಿಸಿರುವುದಿಲ್ಲ ಜಿಲ್ಲಾವಾರು ಗುರಿ ನಿಗದಿಪಡಿಸಲಾಗಿದೆ

(ರೂ ಲಕ್ಷಗಳಲ್ಲಿ)

ಕ್ರ ಸಂ	ಯೋಜನೆಯ ಹೆಸರು	ಭೌತಿಕ ಗುರಿ		ಆರ್ಥಿಕ ಗುರಿ	
		ಪ ಜಾ	ಪ ವ	ಪ ಜಾ	ಪ ವ
1	ಡೈರಿ ಯೋಜನೆ	19	02	6 65	0 70
2	ಎತ್ತು ಮತ್ತು ಗಾಡಿ	10	02	3 50	0 56
3	ಆಟೋರಿಕ್ಷಾ	07	02	5 32	1 52
4	ಗುಂಪು ಮತ್ತು ವೈಯಕ್ತಿಕ ಯೋಜನೆ	05	01	13 00	2 64
	ಒಟ್ಟು	41	07	28 47	5 42

ಪರಿಶಿಷ್ಟ ಜಾತಿ (ರೂ ಲಕ್ಷಗಳಲ್ಲಿ)

ಕ್ರ ಸಂ	ಯೋಜನೆಯ ಹೆಸರು	1999–2000 ವಾರ್ಷಿಕ ಗುರಿ	ಸಾಧನೆ	ಸಹಾಯ ಧನ	ಬೀಜ ಧನ	ಎಸ್‌ಎಸ್ ಎಸ್‌ಡಿಸಿ	ಬ್ಯಾಂಕ್ ಸಾಲ	ಒಟ್ಟು	2000–2001 ವಾರ್ಷಿಕ ಗುರಿ	ಸಾಧನೆ	ಸಹಾಯ ಧನ	ಬೀಜಧನ	ಎಸ್‌ಎಸ್ ಎಸ್‌ಡಿಸಿ	ಬ್ಯಾಂಕ್ ಸಾಲ	ಒಟ್ಟು
1	ಸ್ವಯಂ ಉದ್ಯೋಗ	140	150	6 75	–	–	9 05	15 80	47	110	5 23	–	–	13 37	18 60
2	ಐ ಎಸ್ ಬಿ	17	26	–	9 57	–	36 64	46 21	10	21	–	10.34	–	40 88	51 22
3	ನೇರಸಾಲ	10	09	–	2 18	7 65	–	9 83	40	23	–	6 54	27 97	–	34 51
4	ಭೂ ಒಡೆತನ	–	–	–	–	–	–	–	05	02	0 55	0 55	–	–	1 10
5	ಡೈರಿ	–	–	–	–	–	–	–	–	–	–	–	–	–	–
6	ವೈಯಕ್ತಿಕ ಕೊಳವೆ	–	–	–	–	–	–	–	–	06	3 90	–	–	–	3 90
7	ಗಂಗಾ ಕಲ್ಯಾಣ	05	04	5 06	–	–	–	5 06	–	–	–	–	–	–	–
8	ಸಫಾಯಿ ಕರ್ಮಚಾರಿ	18	12	1 05	0 45	–	2 03	3 53	–	12	1 17	0 56	–	1 50	3 23
	ಒಟ್ಟು (1)	190	201	12 86	12 20	7 65	47 72	80 43	102	174	1085	17 99	27 97	55 75	112 56

ಪರಿಶಿಷ್ಟ ವರ್ಗ

		1999–2000							2000–2001						
1	ಸ್ವಯಂ ಉದ್ಯೋಗ	22	20	0 80	–	–	1 25	2 05	20	19	0 87	–	–	2 38	3 25
2	ಐ ಎಸ್ ಬಿ	05	01	–	0 87	–	2 97	3 84	05	03	–	0 52	–	2 11	2 63

1	2	3	4	5	6	7	8	9	10	11	12	13	14	15	16
3	ನೇರಸಾಲ	02	04	–	2 29	8 60	–	10 89	04	02	–	0 24	0 96	–	1 20
4	ಭೂ ಒಡೆತನ	–	–	–	–	–	–	–	02	–	–	–	–	–	–
5	ಡೈರಿ	–	–	–	–	–	–	–	–	–	–	–	–	–	–
6	ವೈಯಕ್ತಿಕ ಕೊಳವೆ		–	–	–	–	–	–	–	–	–	–	–	–	–
–															
7	ಗಂಗಾ ಕಲ್ಯಾಣ	04	03	3 79	–	–	–	3 79	–	–	–	–	–	–	–
8	ಸಹಾಯಿ ಕರ್ಮಚಾರಿ	–	–	–	–	–	–	–	–	–	–	–	–	–	–
	ಒಟ್ಟು (2)	33	28	4 59	3 16	8 60	4 22	20 57	31	24	0 87	0 76	0 96	4 49	7 08
	ಒಟ್ಟು (1+2)	223	229	17 45	15 36	16 25	51 94	101 00	133	198	11 72	18 75	28 93	60 24	119 64

ಪರಿಶಿಷ್ಟ ಜಾತಿ

(ರೂ ಲಕ್ಷಗಳಲ್ಲಿ)

ಕ್ರ ಸಂ	ಯೋಜನೆಯ ಹೆಸರು	1999–2000 ವಾರ್ಷಿಕ ಗುರಿ	ಸಾಧನೆ	ಸಹಾಯ ಧನ	ಬೀಜ ಧನ	ಎಸ್‌ಎಸ್ ಎಸ್‌ಡಿಸಿ	ಬ್ಯಾಂಕ್ ಸಾಲ	ಒಟ್ಟು	2002–2003 ವಾರ್ಷಿಕ ಗುರಿ	ಸಾಧನೆ	ಸಹಾಯ ಧನ	ಬೀಜಧನ	ಎಸ್‌ಎಸ್ ಎಸ್‌ಡಿಸಿ	ಬ್ಯಾಂಕ್ ಸಾಲ	ಒಟ್ಟು
						ಸಾಲ							ಸಾಲ		
1	ಸ್ವಯಂ ಉದ್ಯೋಗ	10	67	4 32	–	–	14 28	18 60	34	47	4 40	–	–	10 74	15 14
2	ಐ ಎಸ್ ಬಿ	11	15	0 20	8 93	–	34 02	43 15	09	13	0 60	6 47	–	20 52	26 59
3	ನೇರಸಾಲ	81	09	0 10	3 33	9 67	–	13 10	15	10	0 90	1 41	4 97	–	7 28
4	ಭೂ ಒಡೆತನ	05	02	0 54	0 54	–	–	1 08	09	–	–	–	–	–	–
5	ಡೈರಿ	–	07	0 67	1 00	–	–	1 67	–	–	–	–	–	–	–
6	ವೈಯಕ್ತಿಕ ಕೊಳವೆ	15	15	9 75	–	–	–	9 75	03	–	–	–	–	–	–
7	ಗಂಗಾ ಕಲ್ಯಾಣ	–	–	–	–	–	–	–	02	–	–	–	–	–	–
8	ಸಫಾಯಿ ಕರ್ಮಚಾರಿ	–	11	2 70	5 87	–	–	8 57	15	05	0 40	0 20	0 76	–	1 36
	ಒಟ್ಟು (1)	122	126	18 28	19 67	19 67	48 30	95 92	87	75	6 30	7 00	5 73	31 26	50 37

ಪರಿಶಿಷ್ಟ ವರ್ಗ

		2001–2002							2002–2003						
1	ಸ್ವಯಂ ಉದ್ಯೋಗ	23	9	0 40	–	–	1 60	2 00	07	01	0 10	–	–	0 20	0.30
2	ಐ ಎಸ್ ಬಿ	2	7	0 10	4 04	–	15.55	19 69	03	03	0 10	1 39	–	5 39	6 88

1	2	3	4	5	6	7	8	9	10	11	12	13	14	15	16
3	ನೇರಸಾಲ	12	–	–	–	–	–	–	03	03	0 20	0 39	1 55	–	2 14
4	ಭೂ ಒಡೆತನ	02	–	–	–	–	–	–	02	–	–	–	–	–	–
5	ಡೈರಿ	–	14	1 34	2 02	–	–	3 36	–	–	–	–	–	–	–
6	ವೈಯಕ್ತಿಕ ಕೊಳವೆ	05	05	3 25	–	–	–	3 25	–	–	–	–	–	–	–
7	ಗಂಗಾ ಕಲ್ಯಾಣ	–	–	–	–	–	–	3 79	–	–	–	–	–	–	–
8	ಸಹಾಯಿ ಕರ್ಮಚಾರಿ	–	–	–	–	–	–	–	–	–	–	–	–	–	–
	ಒಟ್ಟು (2)	44	35	5 09	6 06	–	17 15	28 30	15	07	0 40	1 78	1 55	5 59	9 32
	ಒಟ್ಟು (1+2)	166	161	23 37	25 73	9 67	65 45	124 22	102	82	6 70	8 86	7 28	36 85	59 69

ಧಾರವಾಡ ಜಿಲ್ಲೆಯಲ್ಲಿ ವಿದ್ಯಾರ್ಥಿ ನಿಲಯಗಳ ಕಟ್ಟಡ ಕಾಮಗಾರಿ ಕೆಲಸ ಮುಗಿಸಿದ್ದರು ಪ್ರಾರಂಭವಾಗದಿರುವುದು

227 (238) ಶ್ರೀ ಚಿಕ್ಕನಗೌಡ ಸಿದ್ಧನಗೌಡ ಈಶ್ವರಗೌಡ (ಕಲಘಟಗಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಇಲಾಖೆವತಿಯಿಂದ ಧಾರವಾಡ ಜಿಲ್ಲೆಯಲ್ಲಿ ನೂತನವಾಗಿ ಮಂಜೂರಾಗಿರುವ ವಿದ್ಯಾರ್ಥಿ ನಿಲಯಗಳೆಷ್ಟು (ಬಾಲಕ ಮತ್ತು ಬಾಲಕಿಯರ) ಮಾಹಿತಿ ನೀಡುವುದು;

ಆ) ಸದರಿ ಸ್ಥಳಗಳಲ್ಲಿ ವಿದ್ಯಾರ್ಥಿ ನಿಲಯಗಳ ಕಟ್ಟಡಗಳು ಸಂಪೂರ್ಣವಾಗಿ ಕಾಮಗಾರಿ ಕೆಲಸ ಪೂರ್ಣಗೊಂಡಿದೆಯೇ ಎಲ್ಲೆಲ್ಲಿ ವಿವರ ನೀಡುವುದು

ಇ) ಈ ವಿದ್ಯಾರ್ಥಿ ನಿಲಯಗಳಲ್ಲಿ ಹೊಸದಾಗಿ ಮಂಜೂರಾಗಿರುವ ವಿದ್ಯಾರ್ಥಿ ನಿಲಯ ಸ್ಥಳಗಳಾವುವು

ಈ) ಸದರಿ ವಿದ್ಯಾರ್ಥಿ ನಿಲಯದ ಕಟ್ಟಡ ಕೆಲಸ ಮುಗಿದಿದ್ದರೂ ಉದ್ಘಾಟನೆ ಮಾಡದಿರುವ ಔಚಿತ್ಯವೇನು,

ಉ) ಈ ಕಟ್ಟಡಗಳನ್ನು ಯಾವ ಇಲಾಖೆಯ ಯಾವ ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿತ್ತು ಇದು ಆ ಭಾಗದ ಜನಪ್ರತಿನಿಧಿಗಳಿಗೆ ಮಾಹಿತಿಯನ್ನು ಇಲಾಖೆ ನೀಡದಿರುವುದು ನಿಜವೇ ವಿವರ ನೀಡುವುದು

ಊ) ಉದ್ಘಾಟನೆ ಕಾರ್ಯ ಯಾವಾಗ ಮಾಡಲಾಗುತ್ತದೆ

ಶ್ರೀ ಎ ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) 2002–03 ಮತ್ತು 2003–04 ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಮತ್ತು ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಯಾವುದೇ ಹೊಸ ವಿದ್ಯಾರ್ಥಿ ನಿಲಯಗಳು ಮಂಜೂರಾಗಿರುವುದಿಲ್ಲ

ಆ) ಧಾರವಾಡ ಜಿಲ್ಲೆಯಲ್ಲಿ ಕಾಮಗಾರಿ ಪೂರ್ಣಗೊಂಡಿರುವ ಮತ್ತು ಪ್ರಗತಿಯಲ್ಲಿರುವ ವಿದ್ಯಾರ್ಥಿನಿಲಯಗಳ ವಿವರಗಳನ್ನು ಅನುಬಂಧ–1, ಮತ್ತು 2 ರಲ್ಲಿ ಲಗತ್ತಿಸಲಾಗಿದೆ

ಇ) ಉದ್ಭವಿಸುವುದಿಲ್ಲ

ಈ), ಉ) ಮತ್ತು ಊ) ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ರಾಜ್ಯವಲಯ ಹಾಗೂ ಜಿಲ್ಲಾವಲಯದಡಿ ಒದಗಿಸಿಕೊಳ್ಳಲಾಗುತ್ತಿದೆ ಹಿಂದುಳಿದ ವರ್ಗಗಳ ಇಲಾಖೆಯ ಕಟ್ಟಡಗಳ ಕಾಮಗಾರಿಗಳನ್ನು ಹುಡ್ಕೋ ಸಾಲದ ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿರುತ್ತದೆ ಈ ಯೋಜನೆಗಳಡಿ ಪೂರ್ಣಗೊಂಡ ವಿದ್ಯಾರ್ಥಿ ನಿಲಯಗಳ ಕಟ್ಟಡಗಳ ಉದ್ಘಾಟನೆಯನ್ನು ಅತೀ ಶೀಘ್ರದಲ್ಲಿ ಮಾಡಲಾಗುವುದು

ಅನುಬಂಧ–1

ಧಾರವಾಡ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ ಕಟ್ಟಡಗಳ ನಿರ್ಮಾಣದ ಕಾಮಗಾರಿಯ ವಿವರಗಳು

(ರೂ ಲಕ್ಷಗಳಲ್ಲಿ)

